
# ದೆಹಲಿ ಕರ್ನಾಟಕ ಸಂಘದ ಅಭಿಮತ

ಮೇ 2013
ಬೆಲೆ ರೂ. 1



# ಪದ್ಮ ಪುರಸ್ಕೃತರು



ಪ್ರೊ.ರೊದ್ದಂ ನರಸಿಂಹ – ಪದ್ಮವಿಭೂಷಣ



ಗಿರೀಶ್ ನಾಗರಾಜ್ – ಪದ್ಮಶ್ರೀ

ಏಪ್ರಿಲ್ 27ರಂದು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಪ್ರೊ.ರೊದ್ದಂ ನರಸಿಂಹ ಅವರಿಗೆ ಪದ್ಮವಿಭೂಷಣ ಹಾಗೂ ಗಿರೀಶ್ ನಾಗರಾಜ್ ಅವರಿಗೆ ಪದ್ಮಶ್ರೀ ಪುರಸ್ಕಾರವನ್ನು ಪ್ರದಾನ ಮಾಡಿದರು.

# 60ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪುರಸ್ಕೃತರು



ಪಿ.ಶೇಷಾದ್ರಿ



ಜಿ.ದತ್ತಾತ್ರೇಯ (ದತ್ತಣ್ಣ)




ಬಸಂತ್ ಕುಮಾರ್ ಪಾಟೀಲ್

**ಅತ್ಯುತ್ತಮ ಪ್ರಾದೇಶಿಕ ಚಲನ ಚಿತ್ರ ಭಾರತ್ ಸ್ಟೋರ್ಸ್ ನ ನಿರ್ದೇಶಕ ಪಿ.ಶೇಷಾದ್ರಿ ಹಾಗೂ ತೀರ್ಪುಗಾರರ ಪ್ರಶಸ್ತಿ ಪಡೆದ ಜಿ.ದತ್ತಾತ್ರೇಯ (ದತ್ತಣ್ಣ) ಹಾಗೂ ಚಿತ್ರದ ನಿರ್ಮಾಪಕ ಶ್ರೀ ಬಸಂತ್ ಕುಮಾರ್ ಪಾಟೀಲ್ ಅವರಿಗೆ ಮೇ 3ರಂದು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಪ್ರಶಸ್ತಿ ಪ್ರದಾನ ಮಾಡಿದರು.**

ಪ್ರಶಸ್ತಿ ಪುರಸ್ಕೃತರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ಕನ್ನಡಿಗರ ಪರವಾಗಿ ಆತ್ಮೀಯ ಅಭಿನಂದನೆಗಳು

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 23 ಸಂಚಿಕೆ 8
ಮೇ 2013, ಬೆಲೆ ರೂ. 1

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡೆ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

ಹಿಂಬದಿ ಪುಟ ಚಿತ್ರ : ಸುಧೀರ್ ಪಡ್ನೀಸ್

**DELHI KARNATAKA SANGHA**
Rao Tularam Marg, Sector-12,
R K Puram, New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ಮನದ ಮಾತು

ಅಂತೂ ಇಂತೂ ಚುನಾವಣೆ ಮುಗಿದಿದೆ. ಘನತೆವೆತ್ತ ಮತದಾರ ಸರ್ಕಾರವನ್ನು ಆಯ್ಕೆ ಮಾಡಿ ಕೈಕುಲುಕಿ ಐದು ವರ್ಷಗಳ ಸಮರ್ಪಕ ನಿರ್ವಹಣೆಯ ಹೊಣೆಯನ್ನು ನೀಡಿದ್ದಾಯಿತು. ನಿಜ ಹೇಳಬೇಕೆಂದರೆ ಈ ಸಲ ಪ್ರಶಂಸೆಯ ಮಹಾಪೂರಕ್ಕೆ ಪಾತ್ರವಾದದ್ದು ರಾಜ್ಯ ಚುನಾವಣಾ ಆಯೋಗ. ಅದ್ಭುತವಾಗಿ ಕಾರ್ಯನಿರ್ವಹಿಸಿತು. ಬಹಿರಂಗ ಪ್ರಚಾರದ ಅಬ್ಬರಕ್ಕೆ ತಡೆಯೊಡ್ಡಿತು. ಬಹಿರಂಗವಾಗಿ ಆಮಿಷಗಳು ಮತದಾರರನ್ನು ಸೆಳೆಯಲು ಸಾಧ್ಯವಾಗದಂತಹ ಸ್ಥಿತಿ ನಿರ್ಮಿಸಿತು. ಅಷ್ಟೇ ಅಲ್ಲ, 'ಬನ್ನಿ, ಮತದಾನ ಮಾಡಿ, ಪ್ರಜಾ ಪ್ರಭುತ್ವದ ಹಕ್ಕು ಚಲಾಯಿಸಿ' ಎಂದು ಅಭೂತಪೂರ್ವ ಪ್ರಚಾರ ಮಾಡಿತು. ಇವೆಲ್ಲದರ ಪರಿಣಾಮ – ಚುನಾವಣೆ ರಾಜ್ಯದಾದ್ಯಂತ ಶಾಂತಿಯುತವಾಗಿ ನಡೆಯಿತು, ಅಲ್ಲಲ್ಲಿ ಕೆಲವು ಚಮಕ್ ಕಿರಿಕ್‌ಗಳನ್ನು ಹೊರತುಪಡಿಸಿ, ಒಟ್ಟಾರೆ ಶೇಕಡ 70 ರಷ್ಟು ಮತದಾನ ಆಗಿರುವುದು ಶುಭಲಕ್ಷಣ. ಆದರೆ ರಾಜಧಾನಿ ಬೆಂಗಳೂರಿನ ಮತದಾರರು ಅಷ್ಟು ಉತ್ಸಾಹದಿಂದ ಸ್ಪಂದಿಸದೇ ಹೋದದ್ದು ದುರದೃಷ್ಟಕರ. ಕೇವಲ ಶೇಕಡ 52.83ರಷ್ಟು ಮಾತ್ರ ಮತ ಚಲಾವಣೆಯಾಯಿತೆಂದರೆ ಮತ ಚಲಾಯಿಸದ ವ್ಯಕ್ತಿಗೆ ಸವಲತ್ತುಗಳನ್ನು ದಬಾಯಿಸಿ ಕೇಳುವ ನೈತಿಕ ಬಲ ಬರುವುದಾದರೂ ಹೇಗೆ? ಅಂದರೆ ಗ್ರಾಮಾಂತರ ಪ್ರದೇಶದ ವ್ಯಕ್ತಿಗೆ ಪ್ರಜಾಪ್ರಭುತ್ವದ ಬಗ್ಗೆ ಇರುವ ಅರಿವು ನಗರ ಪ್ರದೇಶದವರಿಗೆ ಇಲ್ಲ ಅಂತಲೆ? ಬಹುಶ: ಯುವಜನ ಹೆಚ್ಚೆಚ್ಚು ಆಸಕ್ತಿ ವಹಿಸುತ್ತ ಹೋದರೆ ಮತದಾನದ ಪ್ರಮಾಣ ಹೆಚ್ಚುತ್ತಾ ಹೋಗಬಹುದು ಕಾಲಾನುಕ್ರಮದಲ್ಲಿ!

ಚುನಾವಣೆಯಿಂದ ಚುನಾವಣೆಗೆ ದೇಶ ಬದಲಾಗುತ್ತಿದೆ ಎನ್ನುವ ಭ್ರಮೆ ನಮ್ಮದು. ಮೇಲ್ನೋಟಕ್ಕೆ ಈ ಭ್ರಮೆಯೇ ದಿಟ ಎನ್ನುವ ಸ್ಥಿತಿ. ಎಲ್ಲಿ ನೋಡಿದರೆ ಅಲ್ಲಿ ಐಷಾರಾಮಿ ಕಾರುಗಳು, ಹಾವಿನಂತೆ ಬಳುಕುವ ಮೇಲು ಸೇತುವೆಗಳು, ಭೂಮಿಯ ಒಳಗೆ ಇಲ್ಲವೇ ಅತಿ ಎತ್ತರದಲ್ಲಿ ಸಾಗುವ ಮೆಟ್ರೋ ರೈಲುಗಳು, ಬೆಲೆ ಬಾಳುವ ವಸ್ತುಗಳನ್ನು ಕಡ್ಲೆಪುರಿಯಂತೆ ಮಾರಾಟ ಮಾಡಲೆಂದೇ ಸೃಷ್ಟಿಗೊಂಡ ಆಕರ್ಷಕ ಮಾಲ್‌ಗಳು, ಇತ್ಯಾದಿ ಇತ್ಯಾದಿ ನಾವು ಬಡವರಲ್ಲ, ನಮ್ಮದು ಬಡದೇಶವಲ್ಲ ಅನ್ನಿಸುವಂತೆ ಮಾಡಿಬಿಡುತ್ತವೆ. ಆದರೆ ಕ್ರೂರ ವಾಸ್ತವವೇ ಬೇರೆ. ಇಡೀ ಪ್ರಪಂಚದಲ್ಲಿರುವ ಕಿತ್ತು ತಿನ್ನುವ ಬಡತನದ ಬೇಗೆಯಲ್ಲಿ ಬಳಲುತ್ತಿರುವವರ ಸಂಖ್ಯೆ 120 ಕೋಟಿ. ಈ ಸಂಖ್ಯೆಯ ಶೇಕಡ 33ರಷ್ಟು ಇರುವುದು ನಮ್ಮ ಭಾರತದಲ್ಲಿ. 19.4.2013ರಂದು ವಿಶ್ವಸಂಸ್ಥೆ ಬಿಡುಗಡೆ ಮಾಡಿದ–'ಬಡತನದ ಸ್ಥಿತಿಗತಿ:ಬಡವರೆಲ್ಲಿ?ಕಡುಬಡವರೆಲ್ಲಿ?'– ಎಂಬ ವರದಿಯಲ್ಲಿರುವ ಕ್ರೂರ ವಾಸ್ತವ ಚಿತ್ರಣ ಇದು. ದಿನವೊಂದಕ್ಕೆ 65 ರೂಗಳಿಗಿಂತಲೂ ಕಡಿಮೆ ಗಳಿಸುವ ಕುಟುಂಬಗಳು ನಮ್ಮ ಸುತ್ತ ಮುತ್ತಣ ಇವೆ ಎಂಬುದು ನಮ್ಮ ಅಂತ:ಸಾಕ್ಷಿಗೆ ಬಳಿದಿರುವ ಕಪ್ಪು ಚುಕ್ಕೆ ಎಂದು ವಿಶ್ವ ಬ್ಯಾಂಕ್‌ನ ಅಧ್ಯಕ್ಷ ಜಿಮ್ ಯಾಂಗ್ ಕಿಮ್ ಹೇಳಿರುವುದು ನಮ್ಮನ್ನಾಳುವ ಸರ್ಕಾರಗಳ ಕಣ್ಣು ತೆರೆಸಬೇಕಾಗಿದೆ. ಈ ಅಂಕಿ ಅಂಶಗಳನ್ನು ಗಮನಿಸಿ; ಆಫ್ರಿಕಾದಲ್ಲಿ ಬಡವರ ಸಂಖ್ಯೆ ಶೇಕಡ 58ರಿಂದ ಶೇಕಡ 48ಕ್ಕೆ ಇಳಿಕೆಯಾಗಿದೆ. ದಕ್ಷಿಣ ಅಮೇರಿಕದ ರಾಷ್ಟ್ರಗಳಲ್ಲಿ ಬಡವರ ಸಂಖ್ಯೆಯಲ್ಲಿ ಶೇಕಡ 12ರಿಂದ ಶೇಕಡ 6ಕ್ಕೆ ಕುಸಿತ ಕಂಡಿದೆ. ಹತ್ತಿರದ ಚೀನಾ ದೇಶದಲ್ಲಿ 1981ರಲ್ಲಿ ಇದ್ದ ಬಡವರ ಸಂಖ್ಯೆ ಶೇಕಡ 43, 2010 ರಲ್ಲಿ ಬಡವರ ಸಂಖ್ಯೆ ದಾಖಲಾದದ್ದು ಕೇವಲ ಶೇಕಡ 13. ಆದರೆ ನಮ್ಮ ಭಾರತದಲ್ಲಿ ಮಾತ್ರ ಏರು ಮುಖದಲ್ಲಿ ಸಾಗಿದೆ! 1981ರಲ್ಲಿ ಶೇಕಡ 22ರಷ್ಟು ಇದ್ದ ಬಡವರ ಸಂಖ್ಯೆ 2010ರಲ್ಲಿ ಶೇಕಡ 33ಕ್ಕೆ ಏರಿಕೆಯಾಗಿದೆ! ಇದಕ್ಕೆ ಕಾರಣಗಳು ಸ್ಪಷ್ಟ. ನಮ್ಮ ಯೋಜನೆಗಳು ಬಡತನ ನಿರ್ಮೂಲನದ ಕಹಳೆ ಮೊಳಗಿಸಿದರೂ ಅವು ಬಡವರನ್ನು ಮುಟ್ಟಿಲ್ಲ. ಅಪಾರ ಭ್ರಷ್ಟಾಚಾರ, ಲಂಚಗುಳಿತನ, ಅಪ್ರಾಮಾಣಿಕತೆ ನಮ್ಮ ಸರ್ಕಾರಗಳನ್ನು ಆವರಿಸಿದೆ. ಬಡವರ ಅನ್ನ ಶ್ರೀಮಂತರ ಹೊಟ್ಟೆ ಸೇರಿದೆ, ಸೇರುತ್ತಿದೆ. ಈ ಲಂಚ ಸಾಮ್ರಾಜ್ಯದಲ್ಲಿ ನಿಜಕ್ಕೂ ಬಡವನಿಗೆ ನ್ಯಾಯ ದಕ್ಕುವುದೇ? ಬಡವರ ಯೋಜನೆಗಳು ಫಲಾನುಭವಿ ಆಗುವುದು ಯಾವಾಗ? ಇದಕ್ಕೆ ಉತ್ತರ ನಮ್ಮ ಚುನಾವಣೆ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆಯಲ್ಲಿ ಮಾತ್ರ ಇದೆ ಎಂಬುದು ಸರ್ವವೇದ್ಯವಾಗಬೇಕು, ಚುನಾವಣೆ ಈಗ ಶ್ರೀಮಂತರ ಗೇಮ್. ಕೋಟಿ ಕೋಟಿ ಸುರಿಯುತ್ತಾರೆ, ಅಧಿಕಾರಕ್ಕೆ ಬಂದ ನಂತರ ಕೋಟಿ ಕೋಟಿ ಬಾಚುತ್ತಾರೆ. ಹೀಗಾಗಿ ಬಡವರ ಸಂಖ್ಯೆ ಏರುತ್ತಲೇ ಇರುತ್ತದೆ. ಇದು ದುರಂತ, ಈ ಬಡತನದ ನಿವಾರಣೆಗೆ ಕೇವಲ ಸರ್ಕಾರಗಳನ್ನೇ ನಂಬಿ ಕುಳಿತರೆ ಸಾಲದು, ಉಳ್ಳವರು ಇಲ್ಲದವರ ಕಾರ್ಪಣ್ಯಗಳಿಗೆ ನೆರವಾಗಬೇಕು. ಈ ನಿಟ್ಟಿನಲ್ಲಿ ಕರ್ನಾಟಕದ ಪ್ರಸಿದ್ಧ ಉದ್ಯಮಿ ವಿಪ್ರೋ ಅಧ್ಯಕ್ಷ ಅಜಿಮ್ ಪ್ರೇಮ್‌ಜಿ ಆದರ್ಶಪ್ರಾಯರೆನ್ನಿಸಿದ್ದಾರೆ. ತಮ್ಮ ಸಂಪತ್ತಿನ ಶೇಕಡ 25ರಷ್ಟನ್ನು ದಾನ ಮಾಡಿದ್ದಾರೆ. ಆದರೆ ಅವರ ಕಾಳಜಿ – ದಾನವಾಗಿ ನೀಡಿದ ಹಣ ಸದ್ಬಳಕೆಯಾಗುತ್ತಿದೆಯೇ ಎಂಬುದನ್ನು ಖಾತರಿ ಪಡಿಸಿಕೊಳ್ಳುವಲ್ಲಿ. ಜಗತ್ತಿನ ಗಿವಿಂಗ್ ಪ್ಲೆಡ್ಜ್ (Giving pledge) ಸಂಘಟನೆಯ ಸದಸ್ಯತ್ವ ಪಡೆದಿರುವ ಮೊದಲ ಭಾರತೀಯರು ಪ್ರೇಮ್‌ಜೀ. ಪ್ರೇಮ್‌ಜೀ ಅವರನ್ನು ಅನುಕರಿಸಿ ಇತರೆ ಶ್ರೀಮಂತರು ದೇಶಕ್ಕಂಟಿದ 'ಬಡತನ'ದ ಅಪಖ್ಯಾತಿಯನ್ನು ಹೋಗಲಾಡಿಸಲು ಪ್ರಯತ್ನಿಸಲಿ, ತಾವು ನೀಡಿದ ಹಣ ಸದ್ಬಳಕೆಯಾಗುತ್ತಿದೆ ಎಂಬುದನ್ನು ಖಾತರಿ ಪಡಿಸಿಕೊಂಡು ದಿಟ್ಟ ಹೆಜ್ಜೆಗಳನ್ನಿಡಲಿ ಎಂಬುದು ನಮ್ಮ ಕಳಕಳಿಯ ಹಾರೈಕೆ. ಏಕೆಂದರೆ ಭ್ರಷ್ಟಾಚಾರ ಮುಕ್ತ ಸರ್ಕಾರ ಸದ್ಯಕ್ಕೆ ಕನಸಿನ ಮಾತು. ಅಭಿವೃದ್ಧಿ, ಸರ್ವತೋಮುಖ ಅಭಿವೃದ್ಧಿ ಕ್ಲೀಷೆ ಪದಗಳು, ಚುನಾವಣೆಯ ವ್ಯವಸ್ಥೆ ಸ್ವಚ್ಛ ಆಗುವವರೆಗೆ ಕೋಟಿ ಕೋಟಿ ಬಂಡವಾಳ ಹೂಡುವವರು, ನಂತರ ಕೋಟಿ ಕೋಟಿ ಬಾಚುವವರು ಬಡವರ ಬಗ್ಗೆ ಚಿಂತಿಸುತ್ತಾರೆ ಎನ್ನುವುದು ಅಸಾಧ್ಯ.

ಹನ್ನೆರಡನೆಯ ಶತಮಾನದಲ್ಲಿ ಕ್ರಾಂತಿಯ ಕಹಳೆ ಮೊಳಗಿಸಿದ ಜಗಜ್ಯೋತಿ ಬಸವೇಶ್ವರರ ಜಯಂತಿ ಈ ತಿಂಗಳ 13 ರಂದು ಅಲ್ಲದೆ 25ರಂದು ಭಗವಾನ್ ಬುದ್ಧರ ಜಯಂತಿ. ಸರ್ವ ಸಮಾನತೆಯನ್ನು ಸಾರಿದ, ಸರ್ವರ ಕ್ಷೇಮವನ್ನು ಬಯಸಿದ ಮಹಾನ್ ಚೇತನ ಬಸವಣ್ಣ ಹಾಗೂ ಭಗವಾನ್ ಬುದ್ಧರ ನೆನಪು ಹೊಸ ಸರ್ಕಾರದ ಸಿದ್ಧಾಂತಗಳ ಅಂತರ್ಗತ ಮಾರ್ಗದರ್ಶೀ ಶಕ್ತಿಯ ಸೆಲೆಯಾಗಲಿ, ಕರ್ನಾಟಕ ಪ್ರಗತಿಯ ದಾಪುಗಾಲುಗಳನ್ನಿಡಲಿ ಎಂಬುದು ನಮ್ಮ ಹೃತ್ಪೂರ್ವಕ ಬಯಕೆ, ಹಾರೈಕೆ, ಎಲ್ಲರಿಗೂ ಬಸವ ಜಯಂತಿ ಹಾಗೂ ಬುದ್ಧಜಯಂತಿಯ ಹಾರ್ದಿಕ ಶುಭಾಶಯಗಳು.

❑ ಉಷಾ ಭರತಾದ್ರಿ

# ಕನ್ನಡಿಗರ ಇಂಗ್ಲಿಷ್ ಮೋಹ

ಕರ್ನಾಟಕದಲ್ಲಿ ಇತ್ತೀಚೆಗೆ ಇಂಗ್ಲಿಷ್ ಶಾಲೆಗಳಿಗೆ ಮತ್ತು ಇಂಗ್ಲಿಷ್ ಕಲಿಯುವಿಕೆ ಹೆಚ್ಚಿನ ಒತ್ತು ದೊರೆಯುತ್ತಿರುವುದು ಹಲವಾರು ಬಗೆಗಳಲ್ಲಿ ಆತಂಕದ ವಿಷಯವಾಗಿದೆ. ಇಂಗ್ಲಿಷು ಜಗತ್ತಿಗೆ ಕಿಟಕಿಯಿದ್ದ ಹಾಗೆ. ಅದನ್ನು ಕಲಿಯಬಾರದೆಂಬುದರ ಬಗ್ಗೆ ಯಾರೂ ಹೇಳುತ್ತಿಲ್ಲ. ಆದರೆ ಅದಕ್ಕೆ ಇಲ್ಲಸಲ್ಲದ ಮಣೆ ಹಾಕುವುದು ಎಷ್ಟರ ಮಟ್ಟಿಗೆ ಸರಿ ಎಂಬುದರ ಬಗ್ಗೆ ನಾವು ಯೋಚಿಸಬೇಕಾಗಿದೆ. ಕನ್ನಡ ಬರಿ ಆಡುಮಾತಿನ ಪರಿಧಿಯಲ್ಲೇ ಉಳಿದು ಬಿಟ್ಟರೆ ನಮ್ಮ ಸಂಸ್ಕೃತಿಯ ಒಂದು ಅಂಗವನ್ನೇ ನಾವು ಕಳೆದುಕೊಂಡಂತಾಗುತ್ತದೆ ಎಂಬುದನ್ನು ನಾವು ಮರೆಯಬಾರದು. ಸಿ.ಬಿ.ಎಸ್.ಸಿ ಹಾಗೂ ಆದೇ ಬಗೆಯ ಇತರ ಪಠ್ಯಕ್ರಮಗಳತ್ತ ಕನ್ನಡಿಗರು ಒಲಿಯುತ್ತಿರುವುದು ತಪ್ಪೆಂದು ಹೇಳಲಾಗದಿದ್ದರೂ, ಅವುಗಳ ದೆಸೆಯಲ್ಲಿ ಕನ್ನಡಕ್ಕೆ ಲತ್ತೆ ಬೀಳುತ್ತಿರುವುದು ಗಂಭೀರವಾದ ವಿಚಾರವಾಗಿದೆ. ಕರ್ನಾಟಕದಲ್ಲಿ ನಮ್ಮ ಮಕ್ಕಳು ಓದುತ್ತಿರುವ ಪಠ್ಯಪುಸ್ತಕಗಳು ಅಷ್ಟೇನೂ ಸ್ಪೂರ್ತಿದಾಯಕವಾಗಿಲ್ಲ. ಬಾಯಿಪಾಠ ಮಾಡಲು ಯೋಗ್ಯವಾದ ಪುಸ್ತಕಗಳಷ್ಟೇ. ಅವುಗಳಿಂದ ಮಕ್ಕಳಿಗೆ ಯಾವ ಬಗೆಯ ಆಸಕ್ತಿಯೂ ಹುಟ್ಟುವ ಹಾಗೆ ಕಾಣುವುದಿಲ್ಲ. ಚರಿತ್ರೆ, ಸಾಮಾಜಿಕ ಪಠ್ಯಗಳಲ್ಲಿ ಜೀವವೇ ಇಲ್ಲ ಎಂದರೆ ತಪ್ಪಾಗಲಾರದು. ಆ ದೃಷ್ಟಿಯಿಂದ ನೋಡಿದರೆ, ಸಿ.ಬಿ.ಎಸ್.ಸಿಯು ಉಪಯೋಗಿಸುವ ಎನ್.ಸಿ.ಇ.ಆರ್.ಟಿಯ ಇಂಗ್ಲಿಷ್ ಪುಸ್ತಕಗಳು ಸಾಕಷ್ಟು ಉತ್ತಮವಾಗಿವೆ. ಇತ್ತೀಚೆಗೆ ಈ ಎನ್.ಸಿ.ಇ.ಆರ್.ಟಿಯ ಕೆಲ ಪುಸ್ತಕಗಳ ಕಾರ್ಟೂನ್ ಚಿತ್ರಗಳು ವಿವಾದಕ್ಕೆ ಎಡೆ ಮಾಡಿಕೊಟ್ಟದ್ದನ್ನು ನಾವು ನೆನಪಿಸಿಕೊಳ್ಳಬೇಕು. ಈ ಬಗೆಯ ವಿವಾದಗಳು ಒಂದು ಬಗೆಯಲ್ಲಿ ಒಳ್ಳೆಯದೇ ಎಂದು ನಾವು ಅಂದುಕೊಳ್ಳಬಹುದು. ಇದರಿಂದಾಗಿ ಮಕ್ಕಳ ಪುಸ್ತಕಗಳ ಮೇಲೆ ಎಲ್ಲರ ಗಮನ ಹರಿದಂತಾಗುತ್ತದೆ. ರಾಜಕೀಯ ಪಕ್ಷಗಳಿಗೂ ಈ ಪುಸ್ತಕಗಳ ಮೇಲೆ ಹದ್ದಿನ ಕಣ್ಣು. ತಮಗೆ ಬೇಕಾದ ಹಾಗೆ ಈ ಪುಸ್ತಕಗಳನ್ನು ರೂಪಿಸಿಕೊಳ್ಳುವುದರತ್ತ ಅವರೆಲ್ಲದರ ಸಂಚು. ಇಡೀ ಜಗತ್ತಿನಾದ್ಯಂತ ದೇಶದೇಶಗಳಲ್ಲಿ ಈ ಮಕ್ಕಳ ಪುಸ್ತಕಗಳ ಕುರಿತಾಗಿ ದೊಡ್ಡ ರಾಜಕೀಯಗಳೇ ನಡೆಯುತ್ತವೆ ಎಂಬುದನ್ನು ನೆನಪಿಗೆ ತಂದುಕೊಳ್ಳುತ್ತ ನಾವು ಕನ್ನಡದ ವಿಚಾರಕ್ಕೆ ಬರೋಣ.

ಈಗಾಗಲೇ ನಮ್ಮ ಕನ್ನಡದ ಹಲವು ಹಿರಿಯಾಳುಗಳು ಹೇಳಿದ ಹಾಗೆ 'ನಾವು ಇಂಗ್ಲಿಷನ್ನು ತಪ್ಪದೆ ಕಲಿಯೋಣ...ಹಾಗೆಂದು ಕನ್ನಡವನ್ನು ಅಷ್ಟೇ ಚೆನ್ನಾಗಿ ಕಲಿಯೋಣ'. ನನ್ನ ಪ್ರಕಾರ ಕನ್ನಡದ ನೆರಳಿನಲ್ಲಿ ಇಂಗ್ಲಿಷು ಸಾಗಬೇಕು. ಕರ್ನಾಟಕದಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಕನ್ನಡ ಸಂಸ್ಕೃತಿ ಹಾಗೂ ಭಾಷೆಯ ಪೂರ್ಣ ಪರಿಚಯವಾಗಬೇಕು. ಕನ್ನಡದ ಉತ್ತಮ ಮೌಲ್ಯಗಳು ಅವರದಾಗಬೇಕು. ಇದು ಸಾಧ್ಯವಾಗುವುದು ಅವರಿಗೆ ನಾವು ಕನ್ನಡದ ಸಾಹಿತ್ಯ ಪರಂಪರೆಯ ಎಲ್ಲ ಮಜಲುಗಳನ್ನು ಪರಿಚಯಿಸಿದಾಗಲೇ. ಎಲ್ಲರಿಗೂ ಗೊತ್ತಿರುವ ಹಾಗೆ, ಜಗತ್ತಿನ ಹಲವಾರು ದೇಶಗಳಲ್ಲಿ (ಅದರಲ್ಲೂ ಮುಖ್ಯವಾಗಿ ಮುಂದುವರೆದ ಏಶಿಯಾದ ದೇಶಗಳಾದ ಚೈನಾ ಹಾಗೂ ಜಪಾನ್‌ಗಳಲ್ಲಿ) ಅವರವರ ದೇಶದ ಸಾಹಿತ್ಯಗಳಲ್ಲದೆ, ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್, ವೈದ್ಯಕೀಯ ಮತ್ತು ಎಲ್ಲ ಇತರ ವಿಷಯಗಳನ್ನು ಅವರವರ ದೇಶದ (ತಾಯಿ ಭಾಷೆ) ಭಾಷೆಗಳಲ್ಲೇ ಕಲಿಸಲಾಗುತ್ತದೆ. ಜೊತೆಗೆ ಇಂಗ್ಲಿಷ್ ಕೂಡಾ ಇರುತ್ತದೆ. ತಾಯಿಭಾಷೆಯಲ್ಲಿ ಕಲಿತವರು ಕಲಿತದ್ದನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಕಲಿಯುತ್ತಾರೆ ಎಂಬುದರ ಬಗ್ಗೆ ಎರಡು ಮಾತಿಲ್ಲ. ತಾವು ತಮ್ಮ ಭಾಷೆಯಲ್ಲಿ ಕಲಿತಿದ್ದನ್ನು ಪರ ಭಾಷೆಯಲ್ಲಿ (ಅಂದರೆ ಇಂಗ್ಲಿಷ್) ವಿವರಿಸುವುದರಲ್ಲಿ ಅವರಿಗೆ ಯಾವ ತೊಂದರೆಯೂ ಆಗುವುದಿಲ್ಲ. ನಾವು ಒಂದು ವಿಷಯವನ್ನು ಚೆನ್ನಾಗಿ ಕಲಿತರೆ (ಅರಿತರೆ) ಅದರಲ್ಲಿ ಮೂಲಭೂತ ಹಾಗು ಸೃಜನಶೀಲ ಸಂಶೋಧನೆಯನ್ನು ಮಾಡಬಹುದು. 'ಕಲಿಕೆ' ಹಾಗೂ 'ಅರಿವು' ಇದರಲ್ಲಿರುವ ವ್ಯತ್ಯಾಸವನ್ನು ತಾವೆಲ್ಲರೂ ಗಮನಿಸಬೇಕು. ನಾವು ಒಂದು ವಿಷಯುವನ್ನು ಚೆನ್ನಾಗಿ ಅರಿತುಕೊಂಡಾಗ ಹೊಸತನ್ನು ಸೃಷ್ಟಿಸಲು ಶಕ್ತರಾಗುತ್ತೇವೆ. ಅರಿತುಕೊಳ್ಳಲು ನಮ್ಮ ಭಾಷೆ ಸಹಾಯಕ.

ಇಷ್ಟೊಂದು ಇಂಗ್ಲಿಷಿನ ವ್ಯಾಮೋಹ ನಮಗ್ಯಾಕೆ? ಜಗತ್ತಿನ ತುಂಬ ಫ್ರೆಂಚ್, ಸ್ಪ್ಯಾನಿಶ್, ಜರ್ಮನ್, ಅರೆಬಿಕ್ ...ಹೀಗೆ ಹತ್ತು ಹಲವಾರು ಭಾಷೆಗಳನ್ನು ಮಾತನಾಡುವವರು ತುಂಬಾ ಇದ್ದಾರೆ. ಈ ಭಾಷೆಯವರು ಇಂಗ್ಲಿಷಿಗೆ ಸಡ್ಡು ಹೊಡೆದು ನಿಲ್ಲಬಲ್ಲವರು. ಎಲ್ಲ ಬಿಟ್ಟು ಇಂಗ್ಲಿಷಿನ ಹಿಂದೆ ನಾವು ಬಿದ್ದಿದ್ದಾದರೂ ಯಾಕೆ? ಅಮೆರಿಕಾ. ಇಂಗ್ಲೆಂಡ್‌ನವರ ಹಾವಳಿಯೆ? ವಸಾಹತುಶಾಹಿ ಧೋರಣೆಯೆ? ಇಂಗ್ಲಿಷ್ ಬಂದರೆ ನಾವು ಜಗತ್ತಿನ ಕೊಂಡಿಯನ್ನು ತೆರೆದ ಹಾಗೆ ಎಂದುಕೊಳ್ಳುವುದೇ? ಇದರಲ್ಲಿ ಹಲವಾರು ಬಗೆಯ ಸಮಸ್ಯೆಗಳಿವೆ.

ಗಾಬ್ರಿಯಲ್ ಮಾರ್ಕ್‌ವೆಜ್‌ನ ಹೆಸರನ್ನು ತಾವೆಲ್ಲ ಕೇಳಿರಬಹುದು. ದಕ್ಷಿಣ ಅಮೆರಿಕದ ಅತ್ಯಂತ ಸುಪ್ರಸಿದ್ಧ ಬರಹಗಾರ. ಸಾಹಿತ್ಯಕ್ಕೆ ನೊಬೆಲ್ ಪಾರಿತೋಷಕವನ್ನು ಪಡೆದವನು. ಆತ ಬರೆದಿದ್ದು ಸ್ಪ್ಯಾನಿಶ್‌ನಲ್ಲಿ. ಇಡೀ ದಕ್ಷಿಣ ಅಮೆರಿಕಾ ಈತನ ಹೊಸ ಕಾದಂಬರಿಗಾಗಿ ಕಾದು ಕುಳಿತಿರುತ್ತಿತ್ತು. ಅಮೆರಿಕೆಯ ಕೊಲಂಬಿಯಾ ವಿಶ್ವವಿದ್ಯಾಲಯದವರು ಈತನ ತೀರಾ ಪ್ರಸಿದ್ಧವಾದ ಪುಸ್ತಕಗಳ (ಅದರಲ್ಲೂ 'ಒಂದು ನೂರು ವರ್ಷದ ಏಕಾಂಗಿತನ' ಎಂಬ ಕಾದಂಬರಿಯ ಹಸ್ತಪ್ರತಿಯನ್ನು) ಸ್ಪ್ಯಾನಿಶ್ ಹಸ್ತಪ್ರತಿಗಳನ್ನು ಕಾದಿರಿಸಿಕೊಂಡಿದ್ದಾರಂತೆ. ಹೋಗಲಿ ಈತ ಸ್ಪ್ಯಾನಿಶ್. ತುಂಬಾ ಜನ ಮಾತನಾಡುವ ಸ್ಪೈನ್ ದೇಶದವರು (ಯೂರೋಪಿಯನ್‌ರು) ಇದ್ದಾರಲ್ಲವೆ? ಎಂದೆಲ್ಲ ನಾವು ಸಮಝಾಯಿಸಿ ನೀಡಬಹುದು. ಓರನ್ ಪಮುಖ್ ಎಂಬ ಟರ್ಕಿಶ್ ಕಾದಂಬರಿಕಾರನನ್ನೇ ತೆಗೆದುಕೊಳ್ಳಿ. ಈತನೂ ನೊಬೆಲ್ ಪಡೆದವನು. ಬರಿ ಟರ್ಕಿಶ್ ಭಾಷೆಯಲ್ಲೆ ಬರೆದವನು. ಅವನ ಕಾದಂಬರಿಯನ್ನು ಯಾರೋ ಇಂಗ್ಲಿಷಿಗೋ ಹಾಗೂ ಇತರ ಯುರೋಪಿಯನ್ ಭಾಷೆಗಳಿಗೆ ಅನುವಾದ ಮಾಡಿದ್ದೆ ತಡ ಆತ ಜಗತ್ಪ್ರಸಿದ್ಧನಾಗಿ ಬಿಟ್ಟ. ನೊಬೆಲ್ ಅವನನ್ನು ಹುಡುಕಿಕೊಂಡು ಬಂತು. ಇದೆಲ್ಲ ಬಿಡಿ. ಯುರೋಪಿನ ಬಾಷೆವಿಕ್ ಸಿಂಗರ್ ಎಂಬಾತ ಬರಿ ಸಾವಿರಾರು ಜನ ಮಾತನಾಡುವ ಭಾಷೆಯಲ್ಲೆ ತನ್ನ ಕತೆ ಕಾದಂಬರಿಗಳನ್ನು ಅದ್ಭುತವಾಗಿ ಬರೆದು ನೊಬಲ್ ಪ್ರಶಸ್ತಿ ಗಳಿಸಿದ್ದು ಈಗ ದಂತಕತೆಯಾಗಿ ಹೋಗಿದೆ. ಸಿಂಗರ್ ಕತೆಗಳನ್ನು ರಚಿಸಿದ್ದು ಸಾಯಲು ಹೊರಟಿದ್ದ ಯಾವುದೋ ಯಹೂದಿ ಭಾಷೆಯಲ್ಲಿ.

ಮೇಲಿನ ವಿಚಾರಗಳಿಂದ ಎರಡು ವಿಷಯಗಳು ಸಾಬೀತಾದಂತಾಯಿತು. ಬದುಕನ್ನು ಅರ್ಥ ಮಾಡಿಕೊಳ್ಳಲು ಹಾಗೂ ಬರೆಯಲು ನಮಗೆ ಸಮರ್ಥವಾದ ಭಾಷೆ ಬೇಕು. ನಾವು ಬದುಕಿರುವ ಪರಿಸರವನ್ನು ಅರಿಯಲು ನಮ್ಮ ಭಾಷೆಗಿಂತ ಮಿಗಿಲಾದದ್ದು ಇನ್ನೇನಿದೆ? ಕನ್ನಡಕ್ಕೆ ಈ ಎಲ್ಲ ಸಾಧ್ಯತೆಗಳು ಇರುವುದನ್ನು ನಾವು ಗಮನಿಸಬೇಕು. ಕನ್ನಡದ ಸಂದರ್ಭದಲ್ಲಿ ಬಂದ ಬರಹಗಳನ್ನು ಉತ್ತಮವಾಗಿ ಬೇರೆ ಭಾಷೆಗಳಿಗೆ ಅನುವಾದ ಮಾಡಲು ನಮಗೆ ಸಾಧ್ಯವಾಗಿದ್ದರೆ ಕೆಲ ನೊಬೆಲ್ ಪ್ರಶಸ್ತಿಗಳು ನಮಗೂ ಲಭಿಸುವದರಲ್ಲಿ ಯಾವ ಸಂದೇಹವೂ ಇರುತ್ತಿರಲಿಲ್ಲ. ಇನ್ನೂ ಮುಂದುವರೆದರೆ, ಈ ನೊಬೆಲ್ ಪ್ರಶಸ್ತಿಯೆ ಅತ್ಯಂತ ದೊಡ್ಡದು ಅಂತ ಯಾಕೆ ನಾವು ಅಂದುಕೊಳ್ಳಬೇಕು. ಈ ನೊಬೆಲ್ ಹುಚ್ಚು ಸಹ ನಮಗೆ ಒಂದು ಬಗೆಯ ವಸಾಹತುಶಾಹಿ ಹ್ಯಾಂಗ್ ಓವರ್ ಎಂಬುದರ ಬಗ್ಗೆ ಎರಡು ಮಾತಿಲ್ಲ. ಜಗತ್ತಿನ ಅತ್ಯುತ್ತಮ ಸಾಹಿತ್ಯಕ್ಕೆ ನೊಬೆಲ್ ದೊರೆಯದೆ ಇರುವ ಸಾಧ್ಯತೆಗಳು ಹಾಗೂ ಉದಾಹರಣೆಗಳು ಬಹಳಷ್ಟಿವೆ. ಎಷ್ಟೊ ವರ್ಷಗಳಾದ ಮೇಲೆ ಅನಂತಮೂರ್ತಿಯವರ ಭಾರತಿಪುರ ಕಾದಂಬರಿ ಬೂಕರ್ ಪ್ರಶಸ್ತಿಯ ಮೆಟ್ಟಿಲನ್ನು ತುಳಿಯುತ್ತಿದೆ. ಇದನ್ನು ಬರೆಯುವ ಹೊತ್ತಿಗೆ ಅವರಿಗೆ ಬೂಕರ್ ದೊರೆತಿದ್ದರೂ ಆಶ್ಚರ್ಯವಿಲ್ಲ. ಕನ್ನಡದ ಹಲವಾರು ಕತೆ ಕಾದಂಬರಿ ಹಾಗೂ ಕವನಗಳು ಜಗತ್ತಿನ ಅತ್ಯುತ್ತಮ ಸಾಹಿತ್ಯಗಳೊಂದಿಗೆ ಸರಿಸಾಟಿಯಾಗಿ ನಿಲ್ಲಬಲ್ಲವು ಎಂಬುದರ ಬಗ್ಗೆ ಎರಡು ಮಾತಿಲ್ಲ. ಜಗತ್ತಿನ ಎಲ್ಲ ಅತ್ಯುತ್ತಮ ಸಾಹಿತ್ಯಗಳು ತಮ್ಮ ಸುತ್ತಲಿನ ಬದುಕನ್ನು ಸಮರ್ಥವಾಗಿ ಅಲ್ಲಿನ ಸ್ಥಳೀಯ ಭಾಷೆಗಳಲ್ಲಿ ಬಿಂಬಿಸುತ್ತವೆ. ಈ ಎಲ್ಲ ಬರಹಗಳು 'ಲೋಕಲ್' ಮತ್ತು 'ಗ್ಲೋಬಲ್'ಗಳನ್ನು ಒಂದು ಕಾಲದ ಸಂದರ್ಭದಲ್ಲಿ ಹಿಡಿದಿಡುತ್ತವೆ ಎಂಬುದನ್ನು ನಾವು ಗಮನಿಸಬೇಕು.

ಮುಖ್ಯವಾಗಿ ಮತ್ತು ಕೊನೆಯಲ್ಲಿ ಹೇಳಬೇಕಾದದ್ದು, ನಮ್ಮ ಭಾಷೆಯ ಮೇಲೆ ನಮಗೆ ಅದ್ಭುತವಾದ ಹಾಗೂ ಹಸುಳೆಯಂತಹ ಮುಗ್ಧ ಪ್ರೀತಿಯಿರಬೇಕು. ನಮ್ಮ ಭಾಷೆಯ ಕುರಿತಾಗಿ ನಮಗೆ ಅದಮ್ಯವಾದ ವಿಶ್ವಾಸವಿರಬೇಕು. ಸತ್ಯಜಿತ್ ರಾಯ್‌ರವರನ್ನು ಯಾರೊ ವಿದೇಶಿ ಪತ್ರಕರ್ತರು ಸಂದರ್ಶನದ ವೇಳೆಯಲ್ಲಿ ಕೇಳಿದ ಪ್ರಶ್ನೆ 'ತಮ್ಮನ್ನು ಏನೆಂದು ಪರಿಚಯಿಸುವುದು' ಇದಕ್ಕೆ ರಾಯ್ ಹೇಳಿದ್ದು 'ನಾನೊಬ್ಬ ಬಂಗಾಳಿ ಸಿನಿಮಾ ಮಾಡುವವ ಎಂದರಾಯಿತು' ಎಂದಿದ್ದರಂತೆ. ಸತ್ಯಜಿತ್ ರಾಯ್‌ರು ಮಾಡಿದ್ದೂ ಅದೇ. ಬಂಗಾಳಿಯಲ್ಲಿ ಅದ್ಭುತವಾದ ಸಿನಿಮಾಗಳನ್ನು ಮಾಡುತ್ತ ಅದನ್ನು ಜಗತ್ತಿನ ಜನರಿಗೆ ಪ್ರಸ್ತುತ ಪಡಿಸಿದರು. ಇಂಗ್ಲಿಷಿಗೆ ಮಣೆ ಹಾಕುವ ಮುನ್ನ ನಮಗೆ ನಮ್ಮದರ ಬಗ್ಗೆ ಖಚಿತವಾದ ವಿಶ್ವಾಸವಿರಬೇಕು. ಬಾಕಿ ಎಲ್ಲ ಗೌಣ.

❑ ಡಾ.ವೆಂಕಟಾಚಲ ಹೆಗಡೆ

## ಮುನ್ನೋಟ

ಮೇ–ಜೂನ್ ತಿಂಗಳು ದೆಹಲಿಯಲ್ಲಿ ಶಾಲೆಗಳಿಗೆ ರಜೆ. ದೆಹಲಿಯಲ್ಲಿರುವ ಕನ್ನಡಿಗರು ಸಾಮಾನ್ಯವಾಗಿ ಈ ಸಮಯದಲ್ಲಿ ತಮ್ಮ ತಮ್ಮ ಊರುಗಳಿಗೆ ಹೋಗುವುದರಿಂದ ಸಂಘದಲ್ಲಿ ಈ ಎರಡು ತಿಂಗಳು ಕಾರ್ಯಕ್ರಮಗಳಿಗೆ ವಿರಾಮವೆಂದೇ ಹೇಳಬಹುದು. ಪೂರ್ಣವಾಗಿ ಕಾರ್ಯಕ್ರಮಗಳು ನಡೆಯುವುದೇ ಇಲ್ಲ ಎಂದೇನಿಲ್ಲ. ಮೇ 19ರಂದು ಬಸವ ಜಯಂತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ದಯವಿಟ್ಟು ಬನ್ನಿ.

ಸಂಘದಲ್ಲಿ ಕನ್ನಡ ತರಗತಿಗಳು ನಡೆಯುತ್ತಿವೆ. ಕನ್ನಡ ಭಾಷೆ–ಸಂಸ್ಕೃತಿ–ಕಲೆ ಇವುಗಳನ್ನು ನಮ್ಮ ಮಕ್ಕಳಿಗೆ ಪರಿಚಯಿಸುವುದು ನಮ್ಮ ಕರ್ತವ್ಯ. ಆಗಲೇ ಮುಂದೆ ಅದು ಉಳಿದು ಬೆಳೆದುಕೊಂಡು ಬರುತ್ತದೆ. ಆದ್ದರಿಂದ ಮಕ್ಕಳನ್ನು ಕನ್ನಡ ಕಲಿಯಲು ಉತ್ತೇಜಿಸಿ ಕನ್ನಡ ಕಲಿಕಾ ತರಗತಿಗಳಿಗೆ ಕಳುಹಿಸಿಕೊಡಿ.

ಸಂಘದ ಸಂವಿಧಾನ ತಿದ್ದುಪಡಿಯ ಪ್ರಕ್ರಿಯೆಯ ಕೊನೆಯ ಹಂತವಾಗಿ ಮೇ 5ರಂದು ಸರ್ವಸದಸ್ಯರ ವಿಶೇಷ ಸಭೆಯನ್ನು ಕರೆಯಲಾಗಿತ್ತು. ಆದರೆ ನಿಗದಿತ ಸದಸ್ಯರ ಹಾಜರಾತಿ ಇಲ್ಲದ ಕಾರಣ ನಿಯಮಾನುಸಾರ ಮುಂದಿನ ಭಾನುವಾರ 12.5.13ಕ್ಕೆ ಮುಂದೂಡಲಾಗಿದೆ. ಅಂದು ಸಂವಿಧಾನ ತಿದ್ದುಪಡಿಯ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

❑ ಸಿ.ಎಂ.ನಾಗರಾಜ

## ಓದುಗರ ಪತ್ರ

ಅಭಿಮತದಲ್ಲಿ ದೆಹಲಿಯ ಹಾಗೂ ಬೇರೆ ಬೇರೆ ಊರುಗಳಲ್ಲಿರುವ ಕನ್ನಡದ ಪ್ರತಿಭಾವಂತ ಕಲಾವಿದರನ್ನು ಗುರುತಿಸಿ, ಕನ್ನಡ ನಾಡಿಗೆ ಪರಿಚಯಿಸುತ್ತಿರುವುದು ಸಂತೋಷದ ವಿಷಯ. ಕಲಾವಿದರು, ವಿಜ್ಞಾನಿಗಳು, ಸಾಹಿತಿಗಳನ್ನು ಪ್ರತಿ ಪತ್ರಿಕೆಯಲ್ಲಿ ತರುತ್ತಿರುವುದು ಹೆಮ್ಮೆಯ ವಿಷಯ. ವಿದ್ಯಾಕ್ಷೇತ್ರದಲ್ಲಿ ಗಣನೀಯ ಸೇವೆ ಮಾಡಿದವರ ಗುರುತು ಕನ್ನಡ ನಾಡಿನ ಜನತೆಗೆ ಕೊಡುತ್ತಿದ್ದೀರಿ. ಇದರಿಂದ ನಮ್ಮವರ ಚಟುವಟಿಕೆಗಳನ್ನು ಅಲ್ಲಿಯೂ ತಿಳಿದುಕೊಳ್ಳುವ ಅವಕಾಶ ದೊರೆಯುತ್ತದೆ. ದೇಶದ ರಾಜಧಾನಿ ದೆಹಲಿಯ ಕನ್ನಡ ಕಲಾವಿದರ ಸಾಹಿತಿಗಳ ಹಾಗೂ ಸಾಮಾಜಿಕ ಕಾರ್ಯಕರ್ತರ ನಡೆನುಡಿ, ನಮ್ಮ ನಾಡಿಗೆ ಪರಿಚಯಿಸುತ್ತಿರುವ ಪ್ರಧಾನ ಸಂಪಾದಕರಿಗೆ, ಸಂಪಾದಕ ಮಂಡಳಿಯವರಿಗೆ ಹಾಗೂ ಸಂಘದ ಎಲ್ಲ ಸದಸ್ಯರಿಗೆ ನನ್ನ ಆತ್ಮೀಯ ಅಭಿನಂದನೆಗಳು.

❑ **ಬಿ.ದೇವರಾಯ ನಾಯ್ಕ್**
ಮಾಜಿ ಲೋಕಸಭಾ ಸದಸ್ಯರು, ಶಿರಸಿ

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಅತ್ಯುತ್ತಮ ಪ್ರಾದೇಶಿಕ ಚಿತ್ರ

**ಭಾರತ್ ಸ್ಟೋರ್ಸ್**

ಮೇ 18ರಂದು, 2.30ಕ್ಕೆ
ದೆಹಲಿಯ ಹ್ಯಾಬಿಟೆಟ್ ಸೆಂಟರ್‌ನಲ್ಲಿ
ಪ್ರದರ್ಶನಗೊಳ್ಳಲಿದೆ.
ಕನ್ನಡಿಗರೆಲ್ಲರಿಗೂ ಆದರದ ಸ್ವಾಗತ.
ಪ್ರವೇಶ ಉಚಿತ.

**ದೆಹಲಿ ಕರ್ನಾಟಕ ಸಂಘ**

**ಬಸವ ಇಂಟರ್ ನ್ಯಾಷನಲ್ ಸೆಂಟರ್, ನವದೆಹಲಿ**

ಸಹಯೋಗದೊಂದಿಗೆ

**ಬಸವ ಜಯಂತಿ ಕಾರ್ಯಕ್ರಮ**

ಭಾನುವಾರ ಮೇ 19, 2013
ಸಂಜೆ 5.30ಕ್ಕೆ,ಸ್ಥಳ : ಸಂಘದ ಸಭಾಂಗಣ



ವಚನ ಗಾಯನ
ಖ್ಯಾತ ಹಿಂದೂಸ್ತಾನಿ ಗಾಯಕಿ
ಶ್ರೀಮತಿ ಸುಜಾತ ಗುರವ್ ಕಮ್ಮಾರ
ಧಾರವಾಡ ಇವರಿಂದ

ಎಲ್ಲರಿಗೂ ಸುಸ್ವಾಗತ

ಡಾ.ವೆಂಕಟಾಚಲ ಹೆಗಡೆ
ಅಧ್ಯಕ್ಷರು

ಸಿ.ಎಂ.ನಾಗರಾಜ
ಪ್ರಧಾನ ಕಾರ್ಯದರ್ಶಿ

## ಬಾನು ನೀವೆ ಹಂಚಿಕೊಳ್ಳಿ

ಎತ್ತರೆತ್ತರ ಬಾನಿನೆತ್ತರ ಗುಡ್ಡಕ ಕರಿ ಕಲ್ಲು
ಗಿಡದ ಬುಡಕ ನೆಡು ಹುಲ್ಲು
ಅಗಲ ಅಗಲ ಅದು ಮಾತಿನ ಹಗಲ
ಸುಮ್ಮನೆ ಕಿರಿ ಹಲ್ಲು
ಮುಗಿಲ ಮುಟ್ಟಿತು ಬರಿ ಸೊಲ್ಲು
ಗಿಳಿ ಬಾರವು ಗೂಬೆ ಕೂಡವು
ಕಬ್ಬಿಣ ಕೊಂಬೆಯಲಿ
ಪೊಟರಿನ ಗುಟುರು ಕೇಳದಿಲ್ಲಿ
ಕಾಯಿ ಇದ್ದವು ಹಣ್ಣು ಮೇದವು
ಊರ ಬದುವಿನ್ಯಾಗ
ಯಾರೊ ನದುರು ಬಿಟ್ಟರೀಗ
ಎದೆ ಗೂಡಿನ ಮಾತು ನಿಂತವು
ಕಂಪನಿ ಭರದಾಗ
ರಂಗಿನ ಗೋಡೆ ಶಹರದಾಗ
ಕುಲ ಗೋತ್ರಕ ಬಣ್ಣ ಬಳೆದನು
ಗ್ಲೋಬಲ್ ಗೌಡಣ್ಣ
ಜೋಪಡಿ ಜಾಗ ನೀಡಿರಣ್ಣ
ಅರೆ ಬೊಕ್ಕಣ ಅಲೆಯ ಮ್ಯಾಲೆ
ಆ ಚುಕ್ಕಿ ಚೀರುತಾವ
ಕೆಳಗೆ ಸತ್ತು ಸೇರುತಾವ
ಬಯಲು ಬಯಲಿಗೆ ಮೊಬೈಲು ಆಗಿ
ಮಾತ ಕಸಿಯುತಾವ
ಕಿವಿಯು ಮೌನ ಮರಿಯುತಾವ
ಊರ ಊರಿಗೆ ಅದರ ತೇರಿಗೆ
ಕೊಕ್ಕರೆ ಕೊಕ್ಕೋಳಿ
ಕಬ್ಬಿಣ ಕೋಳಿಗೆ ಹೊಸ ಚಾಳಿ
ಕಲ್ಲು ಕೋಳಿಗೆ ಗಲ್ಲು ಖಾತರಿ
ಕಿವಿಯ ಮುಚ್ಚಿಕೊಳ್ಳಿ
ಬಾನು ನೀವೆ ಹಂಚಿಕೊಳ್ಳಿ.

## ಸಂತೆ ಗದ್ದಲದೊಳಗ ಸೇರಿಕೊ

ಗಾಳಿ ಬಿಟ್ಟೈತೆ ತಂಗಿ ತೂರಿಕೊ
ಸಂತೆ ಗದ್ದಲದೊಳಗ ಸೇರಿಕೊ
ಮೂಡಣ ಗಾಳಿಗೆಮೂಡಿತು ಬಿಲ್ಲು
ಕತ್ತಲು ಕವಿದಂಗ ಕರಗಿತ್ತು ಸೊಲ್ಲು
ನೆತ್ತಿಯಮ್ಯಾಲೆಲ್ಲ ತೆನೆ ಹೊತ್ತ ಹಸಿಹುಲ್ಲು
ತೂಗಿ ತೂಗ್ಯಾಡ್ಯಾದ ತುಂತುರು ಆಲಿಕಲ್ಲು
ಪಡುವಣ ಗಾಳಿಯು ನಡುಹಗಲೆ ಬೀಸ್ಯಾದ
ನಡುಮನಿಗಡಿಗೆ ತುಂಬಿ ಒಣ ಮಣ್ಣ ಮೂಸ್ಯಾದ
ಹತ್ತಿ ಮ್ಯಾಲೆಹತ್ತಿ ಸುರಗಿಯ ಸುತ್ತ್ಯಾದ
ಕತ್ತೆತ್ತಿನೋಡಿದರ ಮತ್ತೆಲ್ಲೂ ಕಾಣದ
ತೆಂಕಣದಿ ತೇಲಿ ಖವ್ವಾಲಿ ಹಾಡ್ಯಾದ
ತೆಂಗು–ತೊಗರಿ ಕೂಡಿ ಉಯ್ಯಾಲೆ ಆಡ್ಯಾದ
ಗಾಳೀಲಿ ಸೇರೊ ಜೀವ ಗವ್ವಾಂತ ಕೂಡ್ಯಾದ
ಮಣ್ಣಾದಮರುದಿನ ಮತ್ತ್ಯಾರೊ ಕಾಡ್ಯಾದ
ಬಡ ಬಡ ಬರುತದ ಬಡಗಣ ಗಾಳಿಯು
ನಡುನೆತ್ತಿಮ್ಯಾಲ ನಿಂಗ ಮೂಡಿದಂಗ ಸುಳಿಯು
ತಡವಾಗದಿರಲಿ ಇನ್ನೂ ಉದುರುವ ಎಲಿಯು
ಕಡಬೇಕು ಒಂದೆ ದಿನ ಸುಡುವಾಗ ನೆಲಿಯು
ಬಿಟ್ಟ ದಾರಿಯ ಗುಟ್ಟ ಬಲ್ಲವವರ್ಯಾರೊ
ಇಟ್ಟ ಹೆಜ್ಜೆಯ ಗುರುತ ಕಂಡವರ್ಯಾರೊ
ಗಾಳಿ ಬಿಟ್ಟೈತೆ ತಂಗಿ ತೂರಿಕ್ಕೊ
ಸಂತೆ ಗದ್ದಲದೊಳಗ ಸೇರಿಕ್ಕೊ

❑ **ರಮೇಶ್ ಅರೋಳಿ**

## ಕನ್ನಡ ಕಲಿಕಾ – ತರಗತಿಗಳು

ದೆಹಲಿ ಕರ್ನಾಟಕ ಸಂಘದಲ್ಲಿ ಕನ್ನಡ ಕಲಿಕಾ ತರಗತಿಗಳು ಪ್ರತಿ ವಾರಾಂತ್ಯದಲ್ಲಿ ನಡೆಯುತ್ತಿವೆ. ಮಕ್ಕಳಿಗೆ ಈಗಾಗಲೇ ಬೇಸಿಗೆ ರಜೆ. ದೆಹಲಿ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಮಕ್ಕಳನ್ನು ಕನ್ನಡ ಕಲಿಕಾ ತರಗತಿಗಳಿಗೆ ಕಳುಹಿಸಿ ಪ್ರಯೋಜನ ಪಡೆದುಕೊಳ್ಳಬೇಕು. ಮಾತೃಭಾಷೆಯೇ ನಮ್ಮ ತಾಯಿ ! ಮಾತೃಭಾಷೆಯನ್ನು ಮೊದಲು ಮಕ್ಕಳಿಗೆ ಕಲಿಸೋಣ ಬನ್ನಿ!

Siddhi Packers & Movers
For safe & timely deliveries of personal effects & vehicles
Please Contact
M/s Siddhi Packers & Movers
Delhi – 9811143566
Mumbai – 9967058466
Bangalore – 9900322677

# ಮೋಹಕ ಕಂಠದ ಪಿ.ಬಿ.ಶ್ರೀನಿವಾಸ್ ಇನ್ನಿಲ್ಲ



**ಆಡಿಸಿ ನೋಡು, ಬೀಳಿಸಿ ನೋಡು ಉರುಳಿ ಹೋಗದು**
**ಏನೇ ಬರಲಿ ಯಾರಿಗೂ ಸೋತು ತಲೆಯ ಬಾಗದು......**

ಕೇಳುಗರನ್ನು ಪರವಶಗೊಳಿಸವ ಮೋಹಕ ಕಂಠದ ಹಿರಿಯ ಹಿನ್ನೆಲೆ ಗಾಯಕ ಪಿ.ಬಿ. ಶ್ರೀನಿವಾಸ್ ಏಪ್ರಿಲ್ 14ರಂದು ವಿಧಿವಶರಾದರು

ಪ್ರತಿವಾದಿ ಭಯಂಕರ ಶ್ರೀನಿವಾಸ್ – ಪ್ರತಿವಾದಿ ಭಯಂಕರ ಎನ್ನುವುದು ಇವರ ಮನೆತನಕ್ಕೆ ಇದ್ದ ಹೆಸರು. ಇವರ ವಂಶಸ್ತರು ವಾದ ಮಾಡುವುದರಲ್ಲಿ ತುಂಬಾ ಪ್ರಸಿದ್ದವಾಗಿದ್ದರಂತೆ. ಪಿ.ಬಿ.ಎಸ್ ಮಾತ್ರ ವಾದ ವಿವಾದಗಳಿಗೆ ಸಿಲುಕಿದ್ದನ್ನು ನಾವು ಎಂದೂ ಓದಿದ್ದೇ ಇಲ್ಲ. ಅಂತಹ ಸಜ್ಜನ. ಅವರ ಸರಳ ಸವಿ ದನಿಯ ಸೊಗಡಿನಲ್ಲಿ ಎಲ್ಲ ವಾದಗಳೂ, ಭಯಗಳು ನೆಲೆಯಿಲ್ಲದೆ ಕಳಚಿ ಹೋಗುತ್ತಿದ್ದವೇನೋ! ಅವರು 1934ರ ಸೆಪ್ಟಂಬರ್ 22ರಂದು ಆಂಧ್ರಪ್ರದೇಶದ ಕಾಕಿನಾಡದಲ್ಲಿ ಜನಿಸಿದರು. ಶಾಲಾ ದಿನಗಳಲ್ಲೇ ಸಂಗೀತದಲ್ಲಿ ಅಪಾರ ಆಸಕ್ತಿ. ಬಿಕಾಂ ಪದವಿ ಪಡೆದು, ಕಾನೂನು ವ್ಯಾಸಂಗ ಮಾಡುತ್ತಿರುವಾಗ, ಪರಿಚಯವಾದ ಗೋವರ್ಧನ್ ಅವರ ಸಲಹೆಯಂತೆ ಜೆಮಿನಿ ಸ್ಟುಡಿಯೊದಲ್ಲಿ ವಾದ್ಯವೃಂದ ನೋಡಿಕೊಳ್ಳುತ್ತಾ ಸಂಗೀತ ಕಲಿಯತೊಡಗಿದರು.

ಪಿ.ಬಿ.ಶ್ರೀನಿವಾಸ್ರವರನ್ನು ಕನ್ನಡಕ್ಕೆ ಪರಿಚಯಿಸಿದವರು ಹೆಸರಾಂತ ನಿರ್ಮಾಪಕರೂ, ನಿರ್ದೇಶಕರೂ, ಕಲಾವಿದರೂ ಆಗಿದ್ದ ನಾಗೇಂದ್ರರಾಯರು. ಅವರು ಹಾಡಿದ ಮೊದಲ ಕನ್ನಡ ಹಾಡು ಜಾತಕಫಲ(1953) ಚಿತ್ರಕ್ಕೆ. ನಂತರ ಓಹಿಲೇಶ್ವರ, ಭಕ್ತ ಕನಕದಾಸ ಹೀಗೆ ಮುಂದುವರೆಯುತ್ತಾ ಹೋಯಿತು. ಡಾ.ರಾಜ್ ಕುಮಾರ್ ಅವರಿಗೆ ಪಿ.ಬಿ. ಶ್ರೀನಿವಾಸ್ ಅವರ ಕಂಠ ಬಹಳ ಸೂಕ್ತವಾಗಿ ಹೊಂದುತ್ತಿತ್ತು. ಒಮ್ಮೆ ರಾಜ್ ಹೇಳಿದ್ದರು: 'ಪಿ.ಬಿ. ಶ್ರೀನಿವಾಸ್ ಧ್ವನಿ ನನಗೆ ಆತ್ಮವಿದ್ದಂತೆ'. ವಿಷ್ಣುವರ್ಧನ್ ಅವರ ನಾಗರಹಾವು, ಭೂತಯ್ಯನ ಮಗ ಅಯ್ಯು, ಭಾಗ್ಯ ಜ್ಯೋತಿ, ಕಳ್ಳ ಕುಳ್ಳ ಮುಂತಾದ ಅನೇಕ ಚಿತ್ರಗಳಲ್ಲೂ ಪಿ.ಬಿ.ಎಸ್ ಹಾಡುಗಳು ಅಷ್ಟೇ ಸೊಗಸಾಗಿತ್ತು.

ಭಕ್ತ ಕನಕದಾಸ ಚಿತ್ರದ "ಬದುಕಿದೆನು ಬದುಕಿದೆನು ಭವ ಎನಗೆ" ಹಾಡು ಪಿ.ಬಿ.ಎಸ್ ಅವರಿಗೆ ಬಹಳ ಮೆಚ್ಚುಗೆಯಾದ ಗೀತೆಯಂತೆ. ನನಗೆ ಅವರು ಅದೇ ಚಿತ್ರದಲ್ಲಿ ಹಾಡಿದ ಕುಲ, ಕುಲ ಕುಲವೆಂದು ಹೊಡೆದಾಡದಿರಿ, ಶೃಂಗಾರ ಶೀಲ ತುಂಬಾ ತುಂಬಾ ಇಷ್ಟ. ನಗು ನಗುತಾ ನಲಿ, ಬಾರೆ ಬಾರೆ, ಜನುಮ ಜನುಮದ ಅನುಬಂಧ, ನಾವಾಡುವ ನುಡಿಯೇ, ಕಣ್ಣಂಚಿನ ಈ ಮಾತಲಿ, ಇಳಿದು ಬಾ ತಾಯಿ, ಹಾಡೊಂದ ಹಾಡುವೆ, ನೀ ಮುಡಿದಾ ಮಲ್ಲಿಗೆ ಹೂವಿನ ಮಾಲೆ, ಆಕಾಶವೆ ಬೀಳಲಿ ಮೇಲೆ, ನಿಲ್ಲು ನೀ ನಿಲ್ಲು ನೀ ನೀಲವೇಣಿ, ಆಹಾ ಮೈಸೂರು ಮಲ್ಲಿಗೆ, ವೇದಾಂತಿ ಹೇಳಿದನು, ದೀನ ನಾ ಬಂದಿರುವೆ, ಅಪಾರ ಕೀರ್ತಿ ಗಳಿಸಿ ಮೆರೆವ ಭವ್ಯ ನಾಡಿದು, ಒಲುಮೆಯ ಹೂವೇ ನೀ ಹೋದೆ ಎಲ್ಲಿಗೆ, ಎಲ್ಲಿ ಮರೆಯಾದೆ ವಿಠ್ಠಲ, ಕಂಡೆ ಹರಿಯ ಕಂಡೆ, ನಾನು ನೀನು ನೆಂಟರಯ್ಯ, ಹರಿನಾಮವೇ ಚೆಂದ, ಬೆಳದಿಂಗಳಿನ ನೊರೆ ಹಾಲು ಕೊಡದಲಿ ತುಂಬಿ ತಂದವಳೆ, ಒಲವೆ ಜೀವನ ಸಾಕ್ಷಾತ್ಕಾರ, ಜಗದೀಶನಾಡುವ ಜಗವೇ ನಾಟಕ ರಂಗ, ಮನವೇ ಮಂದಿರ, ನನ್ನವಳು ನನ್ನೆದೆಯ ಹೊನ್ನಾಡನಾಳುವಳು, ರವಿವರ್ಮನ ಕುಂಚದ ಕಲೆ ಬಲೆ, ದಿವ್ಯ ಗಗನ ವನವಾಸಿನಿ ಹೀಗೆ ಅವರ ಹಾಡುಗಳ ನನ್ನ ಪ್ರೀತಿಯ ಪಟ್ಟಿಗೆ ಕೊನೆಯೇ ಇಲ್ಲ. ತಮಿಳಿನ ಜೆಮಿನಿ ಗಣೇಶನ್ ಅವರಿಗೂ ಪಿ.ಎ.ಎಸ್ ಅವರೇ ಬೇಕಿತ್ತು. ತಮಿಳಿನಲ್ಲೂ ಅವರ ಪ್ರತಿ ಹಾಡುಗಳು ಅಷ್ಟೇ ರೋಮಾಂಚನದ ಅನುಭವ ನೀಡುತ್ತವೆ. ಸ್ವತ ಪಿ.ಬಿ.ಎಸ್ ತೆಲುಗಿನವರಾದರೂ, ತೆಲುಗಿನಲ್ಲಿ ಘಂಟಸಾಲ ಮತ್ತು ಎಸ್.ಪಿ.ಬಿ ಅವರ ಹಾಡುಗಳೇ ಕಿವಿಗೆ ಬಿದ್ದದ್ದು ಹೆಚ್ಚು. ಅವರ ಮುಕುಂದ ಮಾಲ, ಶಾರದಾ ಸ್ತೋತ್ರ ಮುಂತಾದ ಸಂಸ್ಕೃತ ಶ್ಲೋಕಗಳನ್ನು ಕೇಳುವಾಗ ಉಂಟಾಗುವ ಆನಂದ ಅವರ್ಣನೀಯ. ಭಕ್ತಿ ಗೀತೆಗಳಲ್ಲಿ ಎದ್ದೇಳು ಮಂಜುನಾಥ ಹಾಡು, ಪ್ರಕೃತಿಯನ್ನೂ, ಭಕ್ತರನ್ನೂ, ದೇವರನ್ನೂ ಒಮ್ಮೆಲೆ ಮುದದಿಂದ ಸುಪ್ರಭಾತಿಸುತ್ತದೆ. ಅವರ ಭಾದ್ರಪದ ಶುಕ್ಲದ ಚೌತಿಯಂದು, ಶರಣು ಶರಣಯ್ಯ ಶರಣು ಬೆನಕ ಮುಂತಾದ ಗೀತೆಗಳಿಲ್ಲದೆ ಗಣಪತಿ ಹಬ್ಬ ಆಗುವುದಾದರೂ ಎಂತು.

ಪಿ ಬಿ ಶ್ರೀನಿವಾಸರು ಹಿನ್ನೆಲೆ ಗಾಯಕರಲ್ಲದೆ ಸಹಸ್ರಾರು ಹಾಡುಗಳನ್ನು ಸುಮಾರು ಎಂಟು ಭಾಷೆಗಳಲ್ಲಿ ಬರೆದಿದ್ದಾರಂತೆ. ನೀಲ್ ಆರ್ಮ್ ಸ್ಟ್ರಾಂಗ್ ಅವರು ಪ್ರಥಮ ಬಾರಿಗೆ ಚಂದ್ರಯಾನ ಮಾಡಿ ಸಾಧಿಸಿದ ಯಶಸ್ಸನ್ನು ಕುರಿತು, ಪಿ. ಬಿ. ಎಸ್ ಬರೆದಿರುವ ಇಂಗ್ಲಿಷ್ ಗೀತೆಯನ್ನು ಅಂದಿನ ಅಮೆರಿಕದ ಅಧ್ಯಕ್ಷರೇ ಪ್ರಶಂಸಿಸಿದ್ದಾರಂತೆ. ಅವರು ಅಮೆರಿಕದಲ್ಲಿದ್ದ ಸಂದರ್ಭದಲ್ಲಿದ್ದಾಗ ಒಂದು ಸಮಾರಂಭದಲ್ಲಿ ಈ ಹಾಡನ್ನು ಕೇಳಿದ ಪ್ರಸಿದ್ಧ ವಿಶ್ವವಿದ್ಯಾಲಯದ ಮುಖ್ಯಸ್ಥರು ಅವರನ್ನು ಡಾಕ್ಟರೇಟ್ ಪದವಿಗೆ ಶಿಫಾರಸ್ಸು ಮಾಡಿದರು. ಹೀಗಾಗಿ ಪಿ ಬಿ ಎಸ್ ಅವರಿಗೆ ದೊರೆತ ಮೊದಲ ಡಾಕ್ಟರೇಟ್ ಗೌರವ ಅಮೆರಿಕದ ವಿಶ್ವವಿದ್ಯಾಲಯದ್ದು. ಅವರು ಹಲವಾರು ಗಝಲ್ಗಳನ್ನು ಕನ್ನಡದಲ್ಲಿ ಬರೆದಿದ್ದಾರಂತೆ. ಭಾಗ್ಯಜ್ಯೋತಿ ಚಿತ್ರಕ್ಕೆ ಪಿ. ಬಿ. ಶ್ರೀನಿವಾಸ್ ಅವರು ವಾಣಿ ಜಯರಾಂ ಅವರೊಂದಿಗೆ ಹಾಡಿರುವ "ದಿವ್ಯಗಗನ ವನವಾಸಿನಿ" ಎಂಬ ಸಂಸ್ಕೃತ ಗೀತೆ ಪಿ. ಬಿ. ಎಸ್ ಅವರ ಸ್ವಂತ ರಚನೆ. "ನವನೀತ ಸುಮಸುಧಾ" ಎಂಬ ರಾಗ ಅವರ ಸ್ವಯಂ ಸೃಷ್ಟಿ. 'ಶ್ರೀನಿವಾಸ ಗಾಯತ್ರಿ ವ್ರತ', 'ಗಾಯಕುಡಿ ಗೇಯಲು', 'ಪ್ರಣವಂ' ಎನ್ನುವ ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ.

ಕನ್ನಡಿಗರ ಹೃದಯದಲ್ಲಿ ಪಿ. ಬಿ. ಶ್ರೀನಿವಾಸರ ಇನಿಧ್ವನಿಯ ಝೇಂಕಾರ ಚಿರಶಾಶ್ವತ. ಇನಿಧ್ವನಿಯ ಈ ಮಹಾನ್ ಚೇತನ ದೇವಲೋಕದಲ್ಲಿ ತಮ್ಮ ಗಾಯನದ ಇಂಪನ್ನು ಬೆರೆಸುತ್ತಾ ಚಿರಶಾಂತಿಯಲ್ಲಿರಲಿ ಎಂದು ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘವು ಪ್ರಾರ್ಥಿಸುತ್ತದೆ.



ದೆಹಲಿ ಕರ್ನಾಟಕ ಸಂಘದ ಸಕ್ರಿಯ ಸದಸ್ಯೆ ಹಾಗೂ ಶ್ರೀಯುತ ಆನಂದ್‌ರಾವ್ ಅವರ ಪತ್ನಿ ಕಮಲಾದೇವಿ ಅವರು ಮೇ 4ರಂದು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮಾರ್ಚ್ 14ರಿಂದ ವಸಂತ್‌ಕುಂಜ್‌ನ ಫೋರ್ಟಿಸ್ ಆಸ್ಪತ್ರೆಯಲ್ಲಿ ದಾಖಲಾದ ಕಮಲಾದೇವಿ ಚಿಕಿತ್ಸೆ ಪಡೆಯುತ್ತಿದ್ದರೂ ಅಪ್ರಜ್ಞಾವಸ್ಥೆಯಲ್ಲೇ ಇದ್ದರು. ಕೊನೆಗೂ ಆಕೆ ಪ್ರಜ್ಞಾವಸ್ಥೆಗೆ ಬಾರದೇ ಮರಳಿಬಾರದ ಲೋಕಕ್ಕೆ ಪಯಣಿಸಿದರು. ಶ್ರೀಮತಿ ಕಮಲಾದೇವಿ ಸುಶಿಕ್ಷಿತರಾಗಿದ್ದು ತಮ್ಮ ಮೆಲುನುಡಿ, ಸ್ನೇಹಪರ ನಡೆನುಡಿಗಳಿಂದ ಅನೇಕ ಬಂಧು ಮಿತ್ರರಲ್ಲಿ ಅಚ್ಚುಮೆಚ್ಚಿನವರಾಗಿದ್ದರು. ಅನೇಕರಿಗೆ ಮಾರ್ಗದರ್ಶಕರಾಗಿದ್ದರು. ಮಾರ್ಚ್ 10, 1956ರಲ್ಲಿ ಚಿಕ್ಕಮಗಳೂರಿನಲ್ಲಿ ಜನಿಸಿದ ಕಮಲಾದೇವಿ ಬೆಂಗಳೂರಿನಲ್ಲಿ ನೆಲೆಸಿದ್ದರು. ಆನಂದರಾವ್ ಅವರನ್ನು 1983ರಲ್ಲಿ ವಿವಾಹವಾದ ಬಳಿಕ ದೆಹಲಿ ವಾಸಿಯಾಗಿದ್ದರು. ಅವರು ಪತಿ ಹಾಗು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅಗಲಿದ ಚೇತನಕ್ಕೆ ದೆಹಲಿ ಕರ್ನಾಟಕ ಸಂಘ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

## ಉಚಿತ ವೈದ್ಯಕೀಯ ತಪಾಸಣೆ

ಮೇ 26ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿ ವಿನಂತಿ.

ಶ್ರದ್ಧಾಂಜಲಿ...

# ಹಿರಿಯ ಕನ್ನಡಿಗ ಶ್ರೀ ಸಿ.ಆರ್ ಹಿರೇಮಠ ಇನ್ನಿಲ್ಲ



ಸರಿ ಸುಮಾರು ಆರು ದಶಕಗಳಿಗೂ ಹೆಚ್ಚು ಕಾಲ ದೆಹಲಿಯಲ್ಲಿ ವಾಸವಾಗಿದ್ದ ಹಿರಿಯ ಕನ್ನಡಿಗ ಶ್ರೀಯುತ ಚಂದ್ರಶೇಖರ ರಾಚಯ್ಯ ಹಿರೇಮಠ ಏಪ್ರಿಲ್ 9, 2013 ರಂದು ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಚಂದ್ರಶೇಖರ್ ರಾಚಯ್ಯ ಹಿರೇಮಠರ ಸ್ಮರಣಾರ್ಥ ದೆಹಲಿ ಕರ್ನಾಟಕ ಸಂಘ, ಬಸವ ಇಂಟರ್‌ನ್ಯಾಷನಲ್ ಸೆಂಟರ್ ಹಾಗೂ ಬಂಧು ಮಿತ್ರರು ಪ್ರಾರ್ಥನಾ ಸಭೆಯನ್ನು ಏಪ್ರಿಲ್ 21, 2013 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಏರ್ಪಡಿಸಿದ್ದರು.

ಪ್ರಾರ್ಥನಾ ಹಾಗೂ ಶ್ರದ್ಧಾಂಜಲಿ ಸಭೆಯಲ್ಲಿ ಬೇರೆ ಬೇರೆ ಜಾತಿ, ಮತ, ಭಾಷೆಗಳ ಜನ ಸೇರಿದ್ದುದು ಈ ಸಭೆಯ ವಿಶೇಷತೆಯಾಗಿತ್ತು. ಪ್ರಾರ್ಥನಾ ಸಭೆಯು ಬಂಧು ಬ್ರದರ್ಸ್‌ಗಳ ಭಜನ ಗಾಯನದಿಂದ ಪ್ರಾರಂಭಗೊಂಡಿತು.

ನಂತರ ದೆಹಲಿಯ ಹಿರಿಯ ಕನ್ನಡಿಗ ನ್ಯಾಯವಾದಿ ಶ್ರೀಯುತ ಶರದ್ ಜವಳಿಯವರು ಬಸವ ಇಂಟರ್‌ನ್ಯಾಷನಲ್ ಸೆಂಟರಿನ ಪರವಾಗಿ ಮಾತನಾಡಿ ಬಸವ ಇಂಟರ್‌ನ್ಯಾಷನಲ್ ಸೆಂಟರ್‌ನ್ನು ಸ್ಥಾಪಿಸಿ ಬೆಳೆಸುವಲ್ಲಿ ಚಂದ್ರಶೇಖರ್ ರಾಚಯ್ಯ ಹಿರೇಮಠರ ಕೊಡುಗೆಯನ್ನು ಕೊಂಡಾಡಿದರು.

ನಂತರ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು 1996-98 ರಲ್ಲಿ ತಾವು ಸಂಘದ ಕಾರ್ಯದರ್ಶಿಯಾಗಿದ್ದಾಗ ಚಂದ್ರಶೇಖರ್ ರಾಚಯ್ಯ ಹಿರೇಮಠರನ್ನು ಭೇಟಿಯಾಗಿದ್ದನ್ನು ಹಾಗು ಅಂದು ಸಂಘದ ಕಟ್ಟಡ ನಿರ್ಮಾಣ ಕುರಿತಾಗಿ ಅವರು ನೀಡಿದ ಅಮೂಲ್ಯ ಸೂಚನೆ ಹಾಗು ಸಹಕಾರವನ್ನು ನೆನೆದು, ಅವರ ನಿಸ್ವಾರ್ಥ ಸೇವಾ ಭಾವನೆಯು ಅನುಕರಣೀಯ ಎಂದರು.

ಕೊನೆಯಲ್ಲಿ ಮತ್ತೊಮ್ಮೆ ಸಾಮೂಹಿಕ ಪ್ರಾರ್ಥನೆ ಹಾಗು ಶ್ರದ್ಧಾಸುಮನ ಸಮರ್ಪಣೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## ಬಸವ ತತ್ವ ಪರಿಪಾಲಕ ಶ್ರೀ ಸಿ.ಆರ್.ಹಿರೇಮಠ



ಕರ್ನಾಟಕದ ಧಾರವಾಡ ಜಿಲ್ಲೆಯಲ್ಲಿ 1924ರಲ್ಲಿ ರೈತಾಪಿ ಕುಟುಂಬದಲ್ಲಿ ಜನಿಸಿದ ಶ್ರೀ ಸಿ.ಆರ್. ಹಿರೇಮಠ ಮುಂಬಯಿ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಸಮುದಾಯ ಅಭಿವೃದ್ಧಿ, ಪಂಚಾಯತರಾಜ್ ಮತ್ತು ಸಹಕಾರಿ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದರು. ಶ್ರೀ ಹಿರೇಮಠ ಅವರು ಕರ್ನಾಟಕ, ಮಹಾರಾಷ್ಟ್ರ ರಾಜ್ಯಗಳಲ್ಲಿ ಸಹಕಾರಿ ಮತ್ತು ಸಮುದಾಯ ಅಭಿವೃದ್ಧಿ ಕ್ಷೇತ್ರಗಳಲ್ಲಿ 11 ವರ್ಷ ಮತ್ತು ರಾಷ್ಟ್ರಮಟ್ಟದಲ್ಲಿ ಸುಮಾರು 40 ವರ್ಷಗಳ ಕಾಲ ರಾಷ್ಟ್ರದ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಿದರು.

1956ರಲ್ಲಿ ಕರ್ನಾಟಕ ಏಕೀಕರಣವಾದಾಗ ಶ್ರೀ ಹಿರೇಮಠರ ಸೇವಾ ವೃತ್ತಿ ಕರ್ನಾಟಕ ಸೇವೆಗೆ ಅಳವಡಿಸಲಾಯಿತು. 1958ರಲ್ಲಿ ಕೇಂದ್ರ ಸರಕಾರದ ಸೇವೆಗೆ ಸೇರಿದ ಹಿರೇಮಠರು ಜಮೀನ ಅಭಿವೃದ್ಧಿ, ಭೂದಾನ ಮತ್ತು ಗ್ರಾಮಾಭಿವೃದ್ಧಿ ಕ್ಷೇತ್ರದಲ್ಲಿ ಶ್ರೀ ಎಸ್. ನಿಜಲಿಂಗಪ್ಪ, ಡಾ. ಡಿ.ಆರ್. ಗಾಡ್ಗೀಲ್ ಅವರೊಂದಿಗೆ ಕಾರ್ಯ ನಿರ್ವಹಿಸಿದರು.

1966ರಲ್ಲಿ FAO ಫೆಲೋಶಿಫ್‌ಗೆ ಆಯ್ಕೆಯಾದ ಶ್ರೀ ಹಿರೇಮಠರು, ಸ್ವೀಡನ್, ಇಂಗ್ಲೆಂಡ್, ಸ್ವಿಡ್ಜರ್‌ಲ್ಯಾಂಡ ದೇಶಗಳಲ್ಲಿ ಮಾರುಕಟ್ಟೆ ಅಭಿವೃದ್ಧಿ ಕುರಿತ ಅಧ್ಯಯನ ಮಾಡಿ ಭಾರತ ಸರಕಾರಕ್ಕೆ ಅದರ ಸಲಹೆಗಳನ್ನು ನೀಡಿದರು. ಶ್ರೀ ಹಿರೇಮಠರು ಕೃಷಿ, ಕೃಷಿ ಸಂಬಂಧಿತ ಆರ್ಥಿಕ ಅಭಿವೃದ್ಧಿ, ನೀರಾವರಿ ಅಭಿವೃದ್ಧಿಗಾಗಿ ಗಣನೀಯವಾಗಿ ದುಡಿದರು.

14 ವರ್ಷ ವಿಶ್ವಬ್ಯಾಂಕ್ ಅಭಿವೃದ್ಧಿ ನಿಧಿಯ ಮುಂಬಯಿಯ ಸಲಹೆಗಾರರಾಗಿ ಕಾರ್ಯ ನಿರ್ವಹಿಸಿದರು. ಅವರ ಈ ಗಣನೀಯ ಸೇವೆಯನ್ನು ಗುರುತಿಸಿದ ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀ ಪಿ.ವಿ. ನರಸಿಂಹರಾವ್ ಅವರು 1995ರಲ್ಲಿ ಶ್ರೀ ಹಿರೇಮಠ ಅವರನ್ನು ನವದೆಹಲಿಯ ಸೂಪರ್ ಬಜಾರದ ಅಧ್ಯಕ್ಷರಾಗಿ ನಾಮಕರಣ ಮಾಡಿದರು.

ನವದೆಹಲಿಯ ಬಸವ ಇಂಟರ್ ನ್ಯಾಶನಲ್ ಸೆಂಟರ್‌ನ ಸಂಸ್ಥಾಪಕ ಸದಸ್ಯರಾದ ಶ್ರೀ ಹಿರೇಮಠರು ಅದರ ಅಧ್ಯಕ್ಷರಾಗಿ ಸುಮಾರು 20ವರ್ಷ ಕಾರ್ಯನಿರ್ವಹಿಸಿದರು. ಈ ಅವಧಿಯಲ್ಲಿ ಬಸವ ತತ್ವ ಮತ್ತು ವಚನ ಸಾಹಿತ್ಯದ ಪ್ರಚಾರ ಮಾಡಿದ ಅವರ ಈ ಗಣನೀಯ ಸೇವೆಗಾಗಿ ಶರಣ ಸಿ.ಆರ್. ಹಿರೇಮಠ ಅವರನ್ನು ಬಸವ ಇಂಟರ್‌ನ್ಯಾಶನಲ್ ಸೆಂಟರ್‌ನ 2012ನೇ ಸಾಲಿನ ಬಸವ ತತ್ವ ಪರಿಪಾಲಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

❑ **ಚೆನ್ನು ಎಸ್.ಮಠದ**

# ಯಶಸ್ವಿಯಾಗಿ ನಡೆದ 30ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ

## ಕನ್ನಡ ಬೆಳೆಸಲು ಕರೆ



ಪ್ರೊ.ಬಿ.ಆರ್.ಅನಂತನ್ ದೀಪ ಬೆಳಗಿಸಿ ಸಮ್ಮೇಳನ ಉದ್ಘಾಟಿಸುತಿರುವುದು. ಬಾ ಸಾಮಗ, ವೈ. ಸಿ. ಜೈನ್, ಡಾ. ರತಿದೇವಿ, ಡಾ. ಸುಧಾರಾವ್, ಡಾ. ಸಿ. ಸೋಮಶೇಖರ್, ಬೈಕೆರೆ ನಾಗೇಶ್, ಡಾ. ಪಿ. ಡಿ. ಶೆಣೈ, ಜೀರಿಗೆ ಲೋಕೇಶ್, ಡಾ.ಕೆ.ವಾಗೀಶ್ ಅವರು ಚಿತ್ರದಲ್ಲಿದ್ದಾರೆ.

ದಿಲ್ಲಿಯಲ್ಲಿ ಏಪ್ರಿಲ್ 6 ಮತ್ತು 7 ರಂದು 30ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ ಯಶಸ್ವಿಯಾಗಿ ನಡೆಯಿತು.

'ದೆಹಲಿ ಕನ್ನಡಿಗ' ಪತ್ರಿಕೆ ಏರ್ಪಡಿಸಿರುವ ಈ ಸಮ್ಮೇಳನದಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಕವಿಗೋಷ್ಠಿ, ಮಹಿಳಾ ಉತ್ಸವ ಸಂಗೀತ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು. ದೇಶದಾದ್ಯಂತದಿಂದ ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಕನ್ನಡ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು.

ಸಮ್ಮೇಳನವನ್ನು ಉದ್ಘಾಟಿಸಿದ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಆರ್.ಅನಂತನ್ ಅವರು ಕನ್ನಡಿಗರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಇನ್ನಷ್ಟು ಭವ್ಯವಾಗಿ ಬೆಳೆಸಿ ಕರ್ನಾಟಕವನ್ನು ಭಾರತದ ಅಗ್ರಗಣ್ಯ ಹಾಗೂ ಆದರ್ಶ ರಾಜ್ಯವನ್ನಾಗಿ ಪರಿವರ್ತಿಸಬೇಕೆಂದೂ, ಕನ್ನಡ ಮುಖ್ಯ ಕೃತಿಗಳನ್ನು ಬೇರೆ ಭಾಷೆಗಳಿಗೆ ಅನುವಾದಿಸಿ ಕನ್ನಡ ಸಾಹಿತ್ಯವನ್ನು ವಿಶ್ವಮಟ್ಟಕ್ಕೆ ಮುಟ್ಟಿಸಬೇಕೆಂದು ಕರೆ ನೀಡಿದರು.

ಸಮ್ಮೇಳನದ ಸಂಚಾಲಕ ಬಾ.ಸಾಮಗ ಅವರು ಕನ್ನಡಕ್ಕೆ ಇನ್ನೂ ಹೆಚ್ಚಿನ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಗೌರವ, ಮಾನ್ಯತೆ ದೊರಕಿಸುವುದರೊಂದಿಗೆ ಕನ್ನಡಿಗರಿಗೆ ಸಿಗಬೇಕಾದ ಎಲ್ಲ ಹಕ್ಕುಗಳನ್ನು ದೊರಕಿಸುವುದೇ ಈ ಸಮ್ಮೇಳನದ ಮುಖ್ಯ ಉದ್ದೇಶವಾಗಿದ್ದು ಇದಕ್ಕಾಗಿ ಕೇಂದ್ರ ಸರ್ಕಾರ ನೆನೆಗುದಿಯಲ್ಲಿರುವ ಕರ್ನಾಟಕದ ಎಲ್ಲ ಯೋಜನೆಗಳಿಗೆ ಅನುಮತಿ ನೀಡಿ ಕಾರ್ಯಗತಗೊಳಿಸಬೇಕೆಂದರು.

"ದೆಹಲಿ ಕನ್ನಡಿಗ" ಸಮ್ಮೇಳನ ಸಂಚಿಕೆ ಬಿಡುಗಡೆ ಮಾಡಿದ ಸಾಹಿತಿ, ಕರ್ನಾಟಕದ ಯುವಜನಸೇವಾ, ಕ್ರೀಡಾ ಇಲಾಖೆ ಕಾರ್ಯದರ್ಶಿ ಡಾ. ಸಿ. ಸೋಮಶೇಖರ ಅವರು ಸಮೂಹ ಮಾಧ್ಯಮ ಕನ್ನಡ ಬೆಳಸುವಲ್ಲಿ ಅಗ್ರ ಪಾತ್ರವಹಿಸಿದೆ ಎಂದರರಲ್ಲದೆ "ದೆಹಲಿ ಕನ್ನಡಿಗ" ಪತ್ರಿಕೆ ದಿಲ್ಲಿಯಲ್ಲಿ 30 ರಾಷ್ಟ್ರೀಯ ಕನ್ನಡ ಸಮ್ಮೇಳನ ನಡೆಸಿರುವುದು ದೊಡ್ಡ ದಾಖಲೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಆದ ಡಾ. ಕೆ. ಸುಧಾ ರಾವ್ ಅವರು ಹೊರನಾಡ ಕನ್ನಡಿಗರು ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಗಳಂತೆ ವರ್ತಿಸಿ ಭಾಷಾಬಾಂಧವ್ಯದಿಂದ ಕನ್ನಡವನ್ನು ಬೆಳೆಸಬೇಕೆಂದರಲ್ಲದೆ ಕರ್ನಾಟಕ ಸರ್ಕಾರ ಕರ್ನಾಟಕದ ಪ್ರಗತಿಗೆ ಸರಿಯಾದ ಯೋಜನೆ ಹಾಕಿಕೊಳ್ಳಬೇಕೆಂದರು.

ಪ್ರಶಸ್ತಿ ವಿತರಣೆ : ಸಮ್ಮೇಳನದಲ್ಲಿ ಇಂಡಿಯನ್ ಓವರ್‌ಸೀಸ್ ಬ್ಯಾಂಕಿನ ಅಧ್ಯಕ್ಷ ಎಂ. ನರೇಂದ್ರ ಅವರಿಗೆ 'ಶ್ರೇಷ್ಠ ಬ್ಯಾಂಕರ್', ಶೈಕ್ಷಣಿಕ ಯೋಜನೆ ಮತ್ತು ಆಡಳಿತ ರಾಷ್ಟ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಆರ್. ಗೋವಿಂದ ಅವರಿಗೆ 'ಶ್ರೇಷ್ಠ ಹೊರನಾಡ ಕನ್ನಡಿಗ', ಪ್ರಖ್ಯಾತ ವೈದ್ಯೆ, ಲೇಖಕಿ ಡಾ. ಆರ್. ರತಿದೇವಿ ಅವರಿಗೆ 'ಶ್ರೇಷ್ಠ ಸಾಮಾಜಿಕ ಕಾರ್ಯಕರ್ತೆ', ದಿಲ್ಲಿಯಲ್ಲಿನ ಕರ್ನಾಟಕ ಸರ್ಕಾರದ ವಿಶೇಷ ಸಮನ್ವಯಾಧಿಕಾರಿ ಬೈಕೆರೆ ನಾಗೇಶ್ ಅವರಿಗೆ 'ಶ್ರೇಷ್ಠ ದಿಲ್ಲಿ ಕನ್ನಡಿಗ' ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು ಹಾಗೂ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸಿದ ಕನ್ನಡಿಗರನ್ನು ಸನ್ಮಾನಿಸಲಾಯಿತು.

ಸಮ್ಮೇಳನದ ವಿವಿಧ ಕಾರ್ಯಕ್ರಮಗಳನ್ನು ಸಂಗೀತಗಾರ ಡಾ. ಕೆ. ವಾಗೀಶ್, ಸಾಹಿತಿ ಡಾ. ಸಿ. ಸೋಮಶೇಖರ್, ಕೇಂದ್ರದ ಮಾಜಿ ಕಾರ್ಯದರ್ಶಿ ಡಾ. ಪಿ. ಡಿ. ಶೆಣೈ, ಕವಿ ಪ್ರೊ ಎನ್. ಜಿ. ಪಟವರ್ಧನ್, ಗೌಡ ಸಂಘದ ಕಾರ್ಯದರ್ಶಿ ವಿ. ಆರ್. ಗುಡ್ಡೇಗೌಡ, ಪತ್ರಕರ್ತ ಜೀರಿಗೆ ಲೋಕೇಶ್, ಮುಂಬಯಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ಜಿ. ಡಿ. ಜೋಷಿ ಅವರು ಉದ್ಘಾಟಿಸಿದರು.

ಡಾ.ಆರ್.ರತಿದೇವಿ ಅವರ ಅಧ್ಯಕ್ಷತೆಯಲ್ಲಿ ನಡೆದ ಮಹಿಳಾ ಉತ್ಸವದಲ್ಲಿ ವಿವಿಧ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಶ್ರೀಮತಿಯರಾದ ವಿಜಯಲಕ್ಷ್ಮಿ ಎನ್ ಪಟವರ್ಧನ್, ವಿದ್ಯಾ ಹರೀಶ್, ಎಚ್.ಎಸ್.ಮಹಾಲಕ್ಷ್ಮಿ, ರಂಗಮಣಿರಾವ್, ಸುನಂದಾ ಜೀರಿಗೆ, ಶುಭಾ ಸತೀಶ್, ಡಾ.ವಿ.ಶಾರದ, ಎಚ್.ಎಸ್. ಯದುಗಿರಿ, ರಾಧಿಕಾ ಆರ್.ಚಿಂಚೋಳಿ, ಶಾರದಾ ಪ್ರಸಾದ್, ಮೋಹಿನಿ ರೈ, ಕುಮಾರಿಯರಾದ ತೃಪ್ತಿ ಮಾನಕಪುರೆ, ವಸುಂಧರ, ಸೌಮ್ಯ ಅವರುಗಳನ್ನು ಸನ್ಮಾನಿಸಲಾಯಿತು.

ಡಾ.ವೆಂಕಟಾಚಲ ಹೆಗಡೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸನ್ಮಾನ-ಸಮಾರೋಪ ಸಮಾರಂಭದಲ್ಲಿ ಗಣನೀಯ ಸೇವೆ ಸಲ್ಲಿಸಿದ ಡಾ.ಸಿ.ಸೋಮಶೇಖರ್, ಸಿ.ಯು.ಬೆಳ್ಳಕ್ಕಿ, ಕೆ.ಜಿ.ರಮೇಶ್ ರಾವ್, ಕೆ.ಲಕ್ಷ್ಮಣ ಮಲ್ಯ, ಪ್ರೊ.ಎನ್. ಜಿ.ಪಟವರ್ಧನ್, ಎಂ.ಆರ್.ಜಯೇಶ್, ಎಂ.ಚಕ್ರಪಾಣಿ ಉಡುಪ, ಎಂ.ಪಿ.ಹರೀಶ್, ಡಾ.ಹರ್ಷವರ್ಧನ್ ಹೆಗಡೆ, ವಿ..ವಿ.ಬಿರಾದಾರ, ರೇವಣ್ಣ, ಕೆ.ಎಸ್.ನಾರಾಯಣ ಆಚಾರ್ಯ, ಚೆನ್ನು ಎಸ್. ಮಠದ ಇವರುಗಳನ್ನು ಸನ್ಮಾನಿಸಲಾಯಿತು.



ಬಾಲಗೋಷ್ಠಿಯಲ್ಲಿ ಭಾಗವಹಿಸಿದ ಮಕ್ಕಳು

# ಬುದ್ಧ ಸ್ವೀಕರಿಸಲೊಪ್ಪದ ಉಡುಗೊರೆ

ಒಮ್ಮೆ ಗೌತಮ ಬುದ್ಧನ ಬಳಿಗೆ ಅವನನ್ನು ತೀವ್ರವಾಗಿ ದ್ವೇಷಿಸುವ ವ್ಯಕ್ತಿಯೊಬ್ಬ ಬಂದನಂತೆ. ಬುದ್ಧನ ಸುತ್ತ ಅನೇಕ ಶಿಷ್ಯಂದಿರು ನೆರೆದಿದ್ದ ಸಮಯ. ಬಂದಾತ ಬುದ್ಧನೊಡನೆ ಚರ್ಚೆಗಿಳಿಯಲು ಬಯಸಿದ. ಬುದ್ಧ ಆತನ ಕೋರಿಕೆಯನ್ನು ಸಂತೋಷದಿಂದ ಸಮ್ಮತಿಸಿದ. ಪ್ರಾರಂಭದಲ್ಲಿ ನೇರವಾಗಿಯೇ ಸಾಗಿದ ಚರ್ಚೆ ಕ್ರಮೇಣ ಅಡ್ಡದಾರಿ ಹಿಡಿಯಿತಂತೆ. ಚರ್ಚೆಗಿಳಿದ ವ್ಯಕ್ತಿ ಬುದ್ಧನ ಬಗೆಗಿನ ವೈಯುಕ್ತಿಕ ದ್ವೇಷವನ್ನು ತನ್ನ ಮಾತುಗಳಲ್ಲಿ



ದ್ವೇಷವನ್ನು ತನ್ನ ಮಾತುಗಳಲ್ಲಿ ವ್ಯಕ್ತಪಡಿಸಲು ಆರಂಭಿಸಿದ. ಸುಳ್ಳು ಆರೋಪಗಳನ್ನು ಹೊರಿಸಿ ಬುದ್ಧನನ್ನು ನಿಂದಿಸಿದ. ಬುದ್ಧ ಮಾತ್ರ ಸ್ವಲ್ಪವೂ ಬೇಸರಗೊಳ್ಳದೇ ಶಾಂತನಾಗಿಯೇ ಕುಳಿತಿದ್ದ. ಅ ವ್ಯಕ್ತಿ ಕೊನೆಗೆ ಅವಾಚ್ಯ ಶಬ್ದಗಳಿಂದ ಬುದ್ಧನನ್ನು ನಿಂದಿಸಲು ಪ್ರಾರಂಭಿಸಿದ. ಇದನ್ನು ಸಹಿಸಲಾರದ ಬುದ್ಧನ ಶಿಷ್ಯಂದಿರು ಆತನನ್ನು ಬಲವಂತದಿಂದ ಹೊರದಬ್ಬಲು ಪ್ರಯತ್ನಿಸಿದಾಗ, ಬುದ್ಧ ನಸುನಗುತ್ತಲೇ ಅವರನ್ನು ತಡೆದ.

ವ್ಯಕ್ತಪಡಿಸಲು ಆರಂಭಿಸಿದ. ಸುಳ್ಳು ಆರೋಪಗಳನ್ನು ಹೊರಿಸಿ ಬುದ್ಧನನ್ನು ನಿಂದಿಸಿದ. ಬುದ್ಧ ಮಾತ್ರ ಸ್ವಲ್ಪವೂ ಬೇಸರಗೊಳ್ಳದೇ ಶಾಂತನಾಗಿಯೇ ಕುಳಿತಿದ್ದ. ಅ ವ್ಯಕ್ತಿ ಕೊನೆಗೆ ಅವಾಚ್ಯ ಶಬ್ದಗಳಿಂದ ಬುದ್ಧನನ್ನು ನಿಂದಿಸಲು ಪ್ರಾರಂಭಿಸಿದ. ಇದನ್ನು ಸಹಿಸಲಾರದ ಬುದ್ಧನ ಶಿಷ್ಯಂದಿರು ಆತನನ್ನು ಬಲವಂತದಿಂದ ಹೊರದಬ್ಬಲು ಪ್ರಯತ್ನಿಸಿದಾಗ, ಬುದ್ಧ ನಸುನಗುತ್ತಲೇ ಅವರನ್ನು ತಡೆದ.

ಸುಮಾರು ಸಮಯ ಬುದ್ಧನನ್ನು ನಿಂದಿಸಿದ ಆ ವ್ಯಕ್ತಿ ಕೊನೆಗೆ ತಾನಾಗಿಯೇ ಹೊರಟು ಹೋದನಂತೆ. ಬುದ್ಧ ಏನೂ ನಡೆದೇ ಇಲ್ಲವೆಂಬಂತೆ ನಗುತ್ತಾ ಕುಳಿತಿದ್ದ. ಆದರೆ ಈ ಘಟನೆಯಿಂದ ಬಹಳವಾಗಿ ನೊಂದ ಆನಂದನೆಂಬ ಆಪ್ತ ಶಿಷ್ಯ ಬುದ್ಧನನ್ನು ಕೇಳಿಯೇಬಿಟ್ಟ – “ಆತ ಸುಳ್ಳು ಆರೋಪಗಳನ್ನು ನಿಮ್ಮ ಮೇಲೆ ಹೊರಿಸಿ, ಅವಾಚ್ಯ ಶಬ್ದಗಳಿಂದ ನಿಮ್ಮನ್ನು ಅವಮಾನಿಸಿದರೂ ನೀವು ಸುಮ್ಮನೇ ಇದ್ದೀರಲ್ಲ, ಇದು ಸರಿಯೇ? ಆತನಿಗೆ ಸರಿಯಾಗಿ ಪ್ರತ್ಯುತ್ತರ ಕೊಡಬಾರದಿತ್ತೇ?”.

ನಸುನಕ್ಕ ಬುದ್ಧ ಅಲ್ಲಿಯೇ ಇದ್ದ ಕಲ್ಲೊಂದನ್ನು ಕೊಡುವಂತೆ ಆನಂದನನ್ನು ಕೋರಿದ. ಆನಂದ ಆ ಕಲ್ಲನ್ನೆತ್ತಿ ಕೊಡಲು ಹೋದಾಗ ಬುದ್ಧ ಅದನ್ನು ತೆಗೆದುಕೊಳ್ಳಲು ನಿರಾಕರಿಸಿದ. “ಇದೇನು?” ಎಂಬಂತೆ ಆನಂದ ಯೋಚಿಸುತ್ತಾ ನಿಂತಾಗ ಬುದ್ಧ ಕೇಳಿದ – “ನೀನು ಕಲ್ಲೊಂದನ್ನು ನನಗೆ ಕೊಡಲೆಂದು ತಂದೆ. ಆದರೆ ನಾನದನ್ನು ತೆಗೆದುಕೊಳ್ಳಲಿಲ್ಲ. ಈಗ ಆ ಕಲ್ಲು ಯಾರ ಬಳಿಯಲ್ಲಿದೆ?”. “ನನ್ನ ಹತ್ತಿರ” ಹೇಳಿದ ಆನಂದ. “ನೀನು ಕೊಡಲು ಬಂದ ಮಾತ್ರಕ್ಕೆ ಆ ವಸ್ತು ನನ್ನ ಬಳಿಸೇರಿತು ಎಂದು ಹೇಳಲಾಗುವುದಿಲ್ಲ! ನೀನು ಕೊಟ್ಟದ್ದನ್ನು ನಾನು ನಿರಾಕರಿಸಿದರೆ ಆ ವಸ್ತು ನಿನ್ನ ಬಳಿಯೇ ಉಳಿಯುತ್ತದೆ. ಹಾಗೆಯೇ ಆ ವ್ಯಕ್ತಿ ಕೊಡಲು ಬಂದ ಬಯ್ಗುಳಗಳನ್ನೂ ನಾನು ಸ್ವೀಕರಿಸಲಿಲ್ಲ. ಹಾಗಾಗಿ ಅವು ಆತನ ಬಳಿಯೇ ಉಳಿದಿವೆ! ಅದಕ್ಕೆ ಬದಲಾಗಿ ನಾನೂ ಪ್ರತಿಕ್ರಿಯಿಸಲು ಆರಂಭಿಸಿದ್ದಲ್ಲಿ ಆ ಬಯ್ಗುಳಗಳು ನನ್ನ ಮನಸ್ಸಿನಾಳಕ್ಕಿಳಿದು ನನ್ನ ಶಾಂತಿಯನ್ನೂ ಕದಡುತಿತ್ತೇ ವಿನಃ ಆತನಿಗೆ ಬುದ್ಧಿವಾದ ಹೇಳಿದಂತೆ ಆಗುತ್ತಿರಲಿಲ್ಲ. ಆತ ನನ್ನ ಶಾಂತಿಗೆ ಭಂಗವನ್ನುಂಟು ಮಾಡಲು ಪ್ರಯತ್ನಿಸಿದ. ಆದರೆ ನಾನದನ್ನು ನಿರಾಕರಿಸಿದೆ!” ಎಂದ ಬುದ್ಧ. “ನಮ್ಮ ಮನಸ್ಸಿನ ಶಾಂತಿ ನಮ್ಮನ್ನು ಅವಲಂಬಿಸಿರಬೇಕೇ ಹೊರತು ಹೊರಗಿನ ಪ್ರಚೋದನೆಯನ್ನಲ್ಲ” ಎಂದು ಬೋಧಿಸಿದ ಬುದ್ಧ.

ಯಂದಿರು ನೆರೆದಿದ್ದ ಸಮಯ. ಬಂದಾತ ಬುದ್ಧನೊಡನೆ ಚರ್ಚೆಗಿಳಿಯಲು ಬಯಸಿದ. ಬುದ್ಧ ಆತನ ಕೋರಿಕೆಯನ್ನು ಸಂತೋಷದಿಂದ ಸಮ್ಮತಿಸಿದ. ಪ್ರಾರಂಭದಲ್ಲಿ ನೇರವಾಗಿಯೇ ಸಾಗಿದ ಚರ್ಚೆ ಕ್ರಮೇಣ ಅಡ್ಡದಾರಿ ಹಿಡಿಯಿತಂತೆ. ಚರ್ಚೆಗಿಳಿದ ವ್ಯಕ್ತಿ ಬುದ್ಧನ ಬಗೆಗಿನ ವೈಯಕ್ತಿಕ

ಸುಮಾರು ಸಮಯ ಬುದ್ಧನನ್ನು ನಿಂದಿಸಿದ ಆ ವ್ಯಕ್ತಿ ಕೊನೆಗೆ ತಾನಾಗಿಯೇ ಹೊರಟು ಹೋದನಂತೆ. ಬುದ್ಧ ಏನೂ ನಡೆದೇ ಇಲ್ಲವೆಂಬಂತೆ ನಗುತ್ತಾ ಕುಳಿತಿದ್ದ. ಆದರೆ ಈ ಘಟನೆಯಿಂದ ಬಹಳವಾಗಿ ನೊಂದ ಆನಂದನೆಂಬ ಆಪ್ತ ಶಿಷ್ಯ ಬುದ್ಧನನ್ನು ಕೇಳಿಯೇಬಿಟ್ಟ – “ಆತ ಸುಳ್ಳು ಆರೋಪಗಳನ್ನು ನಿಮ್ಮ ಮೇಲೆ ಹೊರಿಸಿ, ಅವಾಚ್ಯ ಶಬ್ದಗಳಿಂದ ನಿಮ್ಮನ್ನು ಅವಮಾನಿಸಿದರೂ ನೀವು ಸುಮ್ಮನೇ ಇದ್ದೀರಲ್ಲ, ಇದು ಸರಿಯೇ? ಆತನಿಗೆ ಸರಿಯಾಗಿ ಪ್ರತ್ಯುತ್ತರ ಕೊಡಬಾರದಿತ್ತೇ?”.

ನಸುನಕ್ಕ ಬುದ್ಧ ಅಲ್ಲಿಯೇ ಇದ್ದ ಕಲ್ಲೊಂದನ್ನು ಕೊಡುವಂತೆ ಆನಂದನನ್ನು ಕೋರಿದ. ಆನಂದ ಆ ಕಲ್ಲನ್ನೆತ್ತಿ ಕೊಡಲು ಹೋದಾಗ ಬುದ್ಧ ಅದನ್ನು ತೆಗೆದುಕೊಳ್ಳಲು ನಿರಾಕರಿಸಿದ. “ಇದೇನು?” ಎಂಬಂತೆ ಆನಂದ ಯೋಚಿಸುತ್ತಾ ನಿಂತಾಗ ಬುದ್ಧ ಕೇಳಿದ – “ನೀನು ನನಗೆ ಕೊಡಲೆಂದು ಕಲ್ಲೊಂದನ್ನು ತಂದೆ. ಆದರೆ ನಾನದನ್ನು ತೆಗೆದುಕೊಳ್ಳಲಿಲ್ಲ. ಈಗ ಆ ಕಲ್ಲು ಯಾರ ಬಳಿಯಲ್ಲಿದೆ?”. “ನನ್ನ ಹತ್ತಿರ” ಹೇಳಿದ ಆನಂದ. “ನೀನು ಕೊಡಲು ಬಂದ ಮಾತ್ರಕ್ಕೆ ಆ ವಸ್ತು ನನ್ನ ಬಳಿಸೇರಿತು ಎಂದು ಹೇಳಲಾಗುವುದಿಲ್ಲ! ನೀನು ಕೊಟ್ಟದ್ದನ್ನು ನಾನು ನಿರಾಕರಿಸಿದರೆ ಆ ವಸ್ತು ನಿನ್ನ ಬಳಿಯೇ ಉಳಿಯುತ್ತದೆ. ಹಾಗೆಯೇ ಆ ವ್ಯಕ್ತಿ ಕೊಡಲು ಬಂದ ಬಯ್ಗುಳಗಳನ್ನೂ ನಾನು ಸ್ವೀಕರಿಸಲಿಲ್ಲ. ಹಾಗಾಗಿ ಅವು ಆತನ ಬಳಿಯೇ ಉಳಿದಿವೆ! ಅದಕ್ಕೆ ಬದಲಾಗಿ ನಾನೂ ಪ್ರತಿಕ್ರಿಯಿಸಲು ಆರಂಭಿಸಿದ್ದಲ್ಲಿ ಆ ಬಯ್ಗುಳಗಳು ನನ್ನ ಮನಸ್ಸಿನಾಳಕ್ಕಿಳಿದು ನನ್ನ ಶಾಂತಿಯನ್ನೂ ಕದಡುತಿತ್ತೇ ವಿನಃ ಆತನಿಗೆ ಬುದ್ಧಿವಾದ ಹೇಳಿದಂತೆ ಆಗುತ್ತಿರಲಿಲ್ಲ. ಆತ ನನ್ನ ಶಾಂತಿಗೆ ಭಂಗವನ್ನುಂಟು ಮಾಡಲು ಪ್ರಯತ್ನಿಸಿದ. ಆದರೆ ನಾನದನ್ನು ನಿರಾಕರಿಸಿದೆ!” ಎಂದ ಬುದ್ಧ. “ನಮ್ಮ ಮನಸ್ಸಿನ ಶಾಂತಿ ನಮ್ಮನ್ನು ಅವಲಂಬಿಸಿರಬೇಕೇ ಹೊರತು ಹೊರಗಿನ ಪ್ರಚೋದನೆಯನ್ನಲ್ಲ” ಎಂದು ಬೋಧಿಸಿದ ಬುದ್ಧ.

ಒಮ್ಮೆ ಗೌತಮ ಬುದ್ಧನ ಬಳಿಗೆ ಅವನನ್ನು ತೀವ್ರವಾಗಿ ದ್ವೇಷಿಸುವ ವ್ಯಕ್ತಿಯೊಬ್ಬ ಬಂದನಂತೆ. ಬುದ್ಧನ ಸುತ್ತ ಅಒಮ್ಮೆ ಗೌತಮ ಬುದ್ಧನ ಬಳಿಗೆ ಅವನನ್ನು ತೀವ್ರವಾಗಿ ದ್ವೇಷಿಸುವ ವ್ಯಕ್ತಿಯೊಬ್ಬ ಬಂದನಂತೆ. ಬುದ್ಧನ ಸುತ್ತ ಅನೇಕ ಶಿಷ್ಯಂದಿರು ನೆರೆದಿದ್ದ ಸಮಯ. ಬಂದಾತ ಬುದ್ಧನೊಡನೆ ಚರ್ಚೆಗಿಳಿಯಲು ಬಯಸಿದ. ಬುದ್ಧ ಆತನ ಕೋರಿಕೆಯನ್ನು ಸಂತೋಷದಿಂದ ಸಮ್ಮತಿಸಿದ. ಪ್ರಾರಂಭದಲ್ಲಿ ನೇರವಾಗಿಯೇ ಸಾಗಿದ ಚರ್ಚೆ ಕ್ರಮೇಣ ಅಡ್ಡದಾರಿ ಹಿಡಿಯಿತಂತೆ. ಚರ್ಚೆಗಿಳಿದ ವ್ಯಕ್ತಿ ಬುದ್ಧನ ಬಗೆಗಿನ ವೈಯಕ್ತಿಕ ದ್ವೇಷವನ್ನು ತನ್ನ ಮಾತುಗಳಲ್ಲಿ ವ್ಯಕ್ತಪಡಿಸಲು ಆರಂಭಿಸಿದ. ಸುಳ್ಳು ಆರೋಪಗಳನ್ನು ಹೊರಿಸಿ ಬುದ್ಧನನ್ನು ನಿಂದಿಸಿದ. ಬುದ್ಧ ಮಾತ್ರ ಸ್ವಲ್ಪವೂ ಬೇಸರಗೊಳ್ಳದೇ ಶಾಂತನಾಗಿಯೇ ಕುಳಿತಿದ್ದ.

ಅ ವ್ಯಕ್ತಿ ಕೊನೆಗೆ ಅವಾಚ್ಯ ಶಬ್ದಗಳಿಂದ ಬುದ್ಧನನ್ನು ನಿಂದಿಸಲು ಪ್ರಾರಂಭಿಸಿದ. ಇದನ್ನು ಸಹಿಸಲಾರದ ಬುದ್ಧನ ಶಿಷ್ಯಂದಿರು ಆತನನ್ನು ಬಲವಂತದಿಂದ ಹೊರದಬ್ಬಲು ಪ್ರಯತ್ನಿಸಿದಾಗ, ಬುದ್ಧ ನಸುನಗುತ್ತಲೇ ಅವರನ್ನು ತಡೆದ.

ಸುಮಾರು ಸಮಯ ಬುದ್ಧನನ್ನು ನಿಂದಿಸಿದ ಆ ವ್ಯಕ್ತಿ ಕೊನೆಗೆ ತಾನಾಗಿಯೇ ಹೊರಟು ಹೋದನಂತೆ. ಬುದ್ಧ ಏನೂ ನಡೆದೇ ಇಲ್ಲವೆಂಬಂತೆ ನಗುತ್ತಾ ಕುಳಿತಿದ್ದ. ಆದರೆ ಈ ಘಟನೆಯಿಂದ ಬಹಳವಾಗಿ ನೊಂದ ಆನಂದನೆಂಬ ಆಪ್ತ ಶಿಷ್ಯ ಬುದ್ಧನನ್ನು ಕೇಳಿಯೇಬಿಟ್ಟ – "ಆತ ಸುಳ್ಳು ಆರೋಪಗಳನ್ನು ನಿಮ್ಮ ಮೇಲೆ ಹೊರಿಸಿ, ಅವಾಚ್ಯ ಶಬ್ದಗಳಿಂದ ನಿಮ್ಮನ್ನು ಅವಮಾನಿಸಿದರೂ ನೀವು ಸುಮ್ಮನೇ ಇದ್ದೀರಲ್ಲ, ಇದು ಸರಿಯೇ? ಆತನಿಗೆ ಸರಿಯಾಗಿ ಪ್ರತ್ಯುತ್ತರ ಕೊಡಬಾರದಿತ್ತೇ?".

ನಸುನಕ್ಕ ಬುದ್ಧ ಅಲ್ಲಿಯೇ ಇದ್ದ ಕಲ್ಲೊಂದನ್ನು ಕೊಡುವಂತೆ ಆನಂದನನ್ನು ಕೋರಿದ. ಆನಂದ ಆ ಕಲ್ಲನ್ನೆತ್ತಿ ಕೊಡಲು ಹೋದಾಗ ಬುದ್ಧ ಅದನ್ನು ತೆಗೆದುಕೊಳ್ಳಲು ನಿರಾಕರಿಸಿದ. "ಇದೇನು?" ಎಂಬಂತೆ ಆನಂದ ಯೋಚಿಸುತ್ತಾ ನಿಂತಾಗ ಬುದ್ಧ ಕೇಳಿದ – "ನೀನು ನನಗೆ ಕೊಡಲೆಂದು ಕಲ್ಲೊಂದನ್ನು ತಂದೆ. ಆದರೆ ನಾನದನ್ನು ತೆಗೆದುಕೊಳ್ಳಲಿಲ್ಲ. ಈಗ ಆ ಕಲ್ಲು ಯಾರ ಬಳಿಯಲ್ಲಿದೆ?". "ನನ್ನ ಹತ್ತಿರ" ಹೇಳಿದ ಆನಂದ. "ನೀನು ಕೊಡಲು ಬಂದ ಮಾತ್ರಕ್ಕೆ ಆ ವಸ್ತು ನನ್ನ ಬಳಿಸೇರಿತು ಎಂದು ಹೇಳಲಾಗುವುದಿಲ್ಲ! ನೀನು ಕೊಟ್ಟದ್ದನ್ನು ನಾನು ನಿರಾಕರಿಸಿದರೆ ಆ ವಸ್ತು ನಿನ್ನ ಬಳಿಯೇ ಉಳಿಯುತ್ತದೆ. ಹಾಗೆಯೇ ಆ ವ್ಯಕ್ತಿ ಕೊಡಲು ಬಂದ ಬಯ್ಗುಳಗಳನ್ನೂ ನಾನು ಸ್ವೀಕರಿಸಲಿಲ್ಲ. ಹಾಗಾಗಿ ಅವು ಆತನ ಬಳಿಯೇ ಉಳಿದಿವೆ! ಅದಕ್ಕೆ ಬದಲಾಗಿ ನಾನೂ ಪ್ರತಿಕ್ರಿಯಿಸಲು ಆರಂಭಿಸಿದ್ದಲ್ಲಿ ಆ ಬಯ್ಗುಳಗಳು ನನ್ನ ಮನಸ್ಸಿನಾಳಕ್ಕಿಳಿದು ನನ್ನ ಶಾಂತಿಯನ್ನೂ ಕದಡುತಿತ್ತೇ ವಿನಃ ಆತನಿಗೆ ಬುದ್ಧಿವಾದ ಹೇಳಿದಂತೆ ಆಗುತ್ತಿರಲಿಲ್ಲ. ಆತ ನನ್ನ ಶಾಂತಿಗೆ ಭಂಗವನ್ನುಂಟು ಮಾಡಲು ಪ್ರಯತ್ನಿಸಿದ. ಆದರೆ ನಾನದನ್ನು ನಿರಾಕರಿಸಿದೆ!" ಎಂದ ಬುದ್ಧ. "ನಮ್ಮ ಮನಸ್ಸಿನ ಶಾಂತಿ ನಮ್ಮನ್ನು ಅವಲಂಬಿಸಿರಬೇಕೇ ಹೊರತು ಹೊರಗಿನ ಪ್ರಚೋದನೆಯನ್ನಲ್ಲ" ಎಂದು ಬೋಧಿಸಿದ ಬುದ್ಧ.

ನೇಕ ಶಿಷ್ಯಂದಿರು ನೆರೆದಿದ್ದ ಸಮಯ. ಬಂದಾತ ಬುದ್ಧನೊಡನೆ ಚರ್ಚೆಗಿಳಿಯಲು ಬಯಸಿದ. ಬುದ್ಧ ಆತನ ಕೋರಿಕೆಯನ್ನು ಸಂತೋಷದಿಂದ ಸಮ್ಮತಿಸಿದ. ಪ್ರಾರಂಭದಲ್ಲಿ ನೇರವಾಗಿಯೇ ಸಾಗಿದ ಚರ್ಚೆ ಕ್ರಮೇಣ ಅಡ್ಡದಾರಿ ಹಿಡಿಯಿತಂತೆ. ಚರ್ಚೆಗಿಳಿದ ವ್ಯಕ್ತಿ ಬುದ್ಧನ ಬಗೆಗಿನ ವೈಯಕ್ತಿಕ ದ್ವೇಷವನ್ನು ತನ್ನ ಮಾತುಗಳಲ್ಲಿ ವ್ಯಕ್ತಪಡಿಸಲು ಆರಂಭಿಸಿದ. ಸುಳ್ಳು ಆರೋಪಗಳನ್ನು ಹೊರಿಸಿ ಬುದ್ಧನನ್ನು ನಿಂದಿಸಿದ. ಬುದ್ಧ ಮಾತ್ರ ಸ್ವಲ್ಪವೂ ಬೇಸರಗೊಳ್ಳದೇ ಶಾಂತನಾಗಿಯೇ ಕುಳಿತಿದ್ದ. ಅ ವ್ಯಕ್ತಿ ಕೊನೆಗೆ ಅವಾಚ್ಯ ಶಬ್ದಗಳಿಂದ ಬುದ್ಧನನ್ನು ನಿಂದಿಸಲು ಪ್ರಾರಂಭಿಸಿದ. ಇದನ್ನು ಸಹಿಸಲಾರದ ಬುದ್ಧನ ಶಿಷ್ಯಂದಿರು ಆತನನ್ನು ಬಲವಂತದಿಂದ ಹೊರದಬ್ಬಲು ಪ್ರಯತ್ನಿಸಿದಾಗ, ಬುದ್ಧ ನಸುನಗುತ್ತಲೇ ಅವರನ್ನು ತಡೆದ.

ಸುಮಾರು ಸಮಯ ಬುದ್ಧನನ್ನು ನಿಂದಿಸಿದ ಆ ವ್ಯಕ್ತಿ ಕೊನೆಗೆ ತಾನಾಗಿಯೇ ಹೊರಟು ಹೋದನಂತೆ. ಬುದ್ಧ ಏನೂ ನಡೆದೇ ಇಲ್ಲವೆಂಬಂತೆ ನಗುತ್ತಾ ಕುಳಿತಿದ್ದ. ಆದರೆ ಈ ಘಟನೆಯಿಂದ ಬಹಳವಾಗಿ ನೊಂದ ಆನಂದನೆಂಬ ಆಪ್ತ ಶಿಷ್ಯ ಬುದ್ಧನನ್ನು ಕೇಳಿಯೇಬಿಟ್ಟ – "ಆತ ಸುಳ್ಳು ಆರೋಪಗಳನ್ನು ನಿಮ್ಮ ಮೇಲೆ ಹೊರಿಸಿ, ಅವಾಚ್ಯ ಶಬ್ದಗಳಿಂದ ನಿಮ್ಮನ್ನು ಅವಮಾನಿಸಿದರೂ ನೀವು ಸುಮ್ಮನೇ ಇದ್ದೀರಲ್ಲ, ಇದು ಸರಿಯೇ? ಆತನಿಗೆ ಸರಿಯಾಗಿ ಪ್ರತ್ಯುತ್ತರ ಕೊಡಬಾರದಿತ್ತೇ?".

ನಸುನಕ್ಕ ಬುದ್ಧ ಅಲ್ಲಿಯೇ ಇದ್ದ ಕಲ್ಲೊಂದನ್ನು ಕೊಡುವಂತೆ ಆನಂದನನ್ನು ಕೋರಿದ. ಆನಂದ ಆ ಕಲ್ಲನ್ನೆತ್ತಿ ಕೊಡಲು ಹೋದಾಗ ಬುದ್ಧ ಅದನ್ನು ತೆಗೆದುಕೊಳ್ಳಲು ನಿರಾಕರಿಸಿದ. "ಇದೇನು?" ಎಂಬಂತೆ ಆನಂದ ಯೋಚಿಸುತ್ತಾ ನಿಂತಾಗ ಬುದ್ಧ ಕೇಳಿದ – "ನೀನು ನನಗೆ ಕೊಡಲೆಂದು ಕಲ್ಲೊಂದನ್ನು ತಂದೆ. ಆದರೆ ನಾನದನ್ನು ತೆಗೆದುಕೊಳ್ಳಲಿಲ್ಲ. ಈಗ ಆ ಕಲ್ಲು ಯಾರ ಬಳಿಯಲ್ಲಿದೆ?". "ನನ್ನ ಹತ್ತಿರ" ಹೇಳಿದ ಆನಂದ. "ನೀನು ಕೊಡಲು ಬಂದ ಮಾತ್ರಕ್ಕೆ ಆ ವಸ್ತು ನನ್ನ ಬಳಿಸೇರಿತು ಎಂದು ಹೇಳಲಾಗುವುದಿಲ್ಲ! ನೀನು ಕೊಟ್ಟದ್ದನ್ನು ನಾನು ನಿರಾಕರಿಸಿದರೆ ಆ ವಸ್ತು ನಿನ್ನ ಬಳಿಯೇ ಉಳಿಯುತ್ತದೆ. ಹಾಗೆಯೇ ಆ ವ್ಯಕ್ತಿ ಕೊಡಲು ಬಂದ ಬಯ್ಗುಳಗಳನ್ನೂ ನಾನು ಸ್ವೀಕರಿಸಲಿಲ್ಲ. ಹಾಗಾಗಿ ಅವು ಆತನ ಬಳಿಯೇ ಉಳಿದಿವೆ! ಅದಕ್ಕೆ ಬದಲಾಗಿ ನಾನೂ ಪ್ರತಿಕ್ರಿಯಿಸಲು ಆರಂಭಿಸಿದ್ದಲ್ಲಿ ಆ ಬಯ್ಗುಳಗಳು ನನ್ನ ಮನಸ್ಸಿನಾಳಕ್ಕಿಳಿದು ನನ್ನ ಶಾಂತಿಯನ್ನೂ ಕದಡುತಿತ್ತೇ ವಿನಃ ಆತನಿಗೆ ಬುದ್ಧಿವಾದ ಹೇಳಿದಂತೆ ಆಗುತ್ತಿರಲಿಲ್ಲ. ಆತ ನನ್ನ ಶಾಂತಿಗೆ ಭಂಗವನ್ನುಂಟು ಮಾಡಲು ಪ್ರಯತ್ನಿಸಿದ. ಆದರೆ ನಾನದನ್ನು ನಿರಾಕರಿಸಿದೆ!" ಎಂದ ಬುದ್ಧ. "ನಮ್ಮ ಮನಸ್ಸಿನ ಶಾಂತಿ ನಮ್ಮನ್ನು ಅವಲಂಬಿಸಿರಬೇಕೇ ಹೊರತು ಹೊರಗಿನ ಪ್ರಚೋದನೆಯನ್ನಲ್ಲ" ಎಂದು ಬೋಧಿಸಿದ ಬುದ್ಧ.


ಒಮ್ಮೆ ಗೌತಮ ಬುದ್ಧನ ಬಳಿಗೆ ಅವನನ್ನು ತೀವ್ರವಾಗಿ ದ್ವೇಷಿಸುವ ವ್ಯಕ್ತಿಯೊಬ್ಬ ಬಂದನಂತೆ. ಬುದ್ಧನ ಸುತ್ತ ಅನೇಕ ಶಿಷ್ಯಂದಿರು ನೆರೆದಿದ್ದ ಸಮಯ. ಬಂದಾತ ಬುದ್ಧನೊಡನೆ ಚರ್ಚೆಗಿಳಿಯಲು ಬಯಸಿದ. ಬುದ್ಧ ಆತನ ಕೋರಿಕೆಯನ್ನು ಸಂತೋಷದಿಂದ ಸಮ್ಮತಿಸಿದ. ಪ್ರಾರಂಭದಲ್ಲಿ ನೇರವಾಗಿಯೇ ಸಾಗಿದ ಚರ್ಚೆ ಕ್ರಮೇಣ ಅಡ್ಡದಾರಿ ಹಿಡಿಯಿತಂತೆ. ಚರ್ಚೆಗಿಳಿದ ವ್ಯಕ್ತಿ ಬುದ್ಧನ ಬಗೆಗಿನ ವೈಯಕ್ತಿಕ ದ್ವೇಷವನ್ನು ತನ್ನ ಮಾತುಗಳಲ್ಲಿ ವ್ಯಕ್ತಪಡಿಸಲು ಆರಂಭಿಸಿದ. ಸುಳ್ಳು ಆರೋಪಗಳನ್ನು ಹೊರಿಸಿ ಬುದ್ಧನನ್ನು ನಿಂದಿಸಿದ. ಬುದ್ಧ ಮಾತ್ರ ಸ್ವಲ್ಪವೂ ಬೇಸರಗೊಳ್ಳದೇ ಶಾಂತನಾಗಿಯೇ ಕುಳಿತಿದ್ದ. ಅ ವ್ಯಕ್ತಿ ಕೊನೆಗೆ ಅವಾಚ್ಯ ಶಬ್ದಗಳಿಂದ ಬುದ್ಧನನ್ನು ನಿಂದಿಸಲು ಪ್ರಾರಂಭಿಸಿದ. ಇದನ್ನು ಸಹಿಸಲಾರದ ಬುದ್ಧನ ಶಿಷ್ಯಂದಿರು ಆತನನ್ನು ಬಲವಂತದಿಂದ ಹೊರದಬ್ಬಲು ಪ್ರಯತ್ನಿಸಿದಾಗ, ಬುದ್ಧ ನಸುನಗುತ್ತಲೇ ಅವರನ್ನು ತಡೆದ.

ಸುಮಾರು ಸಮಯ ಬುದ್ಧನನ್ನು ನಿಂದಿಸಿದ ಆ ವ್ಯಕ್ತಿ ಕೊನೆಗೆ ತಾನಾಗಿಯೇ ಹೊರಟು ಹೋದನಂತೆ. ಬುದ್ಧ ಏನೂ ನಡೆದೇ ಇಲ್ಲವೆಂಬಂತೆ ನಗುತ್ತಾ ಕುಳಿತಿದ್ದ. ಆದರೆ ಈ ಘಟನೆಯಿಂದ ಬಹಳವಾಗಿ ನೊಂದ ಆನಂದನೆಂಬ ಆಪ್ತ ಶಿಷ್ಯ ಬುದ್ಧನನ್ನು ಕೇಳಿಯೇಬಿಟ್ಟ – "ಆತ ಸುಳ್ಳು ಆರೋಪಗಳನ್ನು ನಿಮ್ಮ ಮೇಲೆ ಹೊರಿಸಿ, ಅವಾಚ್ಯ ಶಬ್ದಗಳಿಂದ ನಿಮ್ಮನ್ನು ಅವಮಾನಿಸಿದರೂ ನೀವು ಸುಮ್ಮನೇ ಇದ್ದೀರಲ್ಲ, ಇದು ಸರಿಯೇ? ಆತನಿಗೆ ಸರಿಯಾಗಿ ಪ್ರತ್ಯುತ್ತರ ಕೊಡಬಾರದಿತ್ತೇ?".

ನಸುನಕ್ಕ ಬುದ್ಧ ಅಲ್ಲಿಯೇ ಇದ್ದ ಕಲ್ಲೊಂದನ್ನು ಕೊಡುವಂತೆ ಆನಂದನನ್ನು ಕೋರಿದ. ಆನಂದ ಆ ಕಲ್ಲನ್ನೆತ್ತಿ ಕೊಡಲು ಹೋದಾಗ ಬುದ್ಧ ಅದನ್ನು ತೆಗೆದುಕೊಳ್ಳಲು ನಿರಾಕರಿಸಿದ. "ಇದೇನು?" ಎಂಬಂತೆ ಆನಂದ ಯೋಚಿಸುತ್ತಾ ನಿಂತಾಗ ಬುದ್ಧ ಕೇಳಿದ – "ನೀನು ನನಗೆ ಕೊಡಲೆಂದು ಕಲ್ಲೊಂದನ್ನು ತಂದೆ. ಆದರೆ ನಾನದನ್ನು ತೆಗೆದುಕೊಳ್ಳಲಿಲ್ಲ. ಈಗ ಆ ಕಲ್ಲು ಯಾರ ಬಳಿಯಲ್ಲಿದೆ?". "ನನ್ನ ಹತ್ತಿರ" ಹೇಳಿದ ಆನಂದ. "ನೀನು ಕೊಡಲು ಬಂದ ಮಾತ್ರಕ್ಕೆ ಆ ವಸ್ತು ನನ್ನ ಬಳಿಸೇರಿತು ಎಂದು ಹೇಳಲಾಗುವುದಿಲ್ಲ! ನೀನು ಕೊಟ್ಟದ್ದನ್ನು ನಾನು ನಿರಾಕರಿಸಿದರೆ ಆ ವಸ್ತು ನಿನ್ನ ಬಳಿಯೇ ಉಳಿಯುತ್ತದೆ. ಹಾಗೆಯೇ ಆ ವ್ಯಕ್ತಿ ಕೊಡಲು ಬಂದ ಬಯ್ಗುಳಗಳನ್ನೂ ನಾನು ಸ್ವೀಕರಿಸಲಿಲ್ಲ. ಹಾಗಾಗಿ ಅವು ಆತನ ಬಳಿಯೇ ಉಳಿದಿವೆ! ಅದಕ್ಕೆ ಬದಲಾಗಿ ನಾನೂ ಪ್ರತಿಕ್ರಿಯಿಸಲು ಆರಂಭಿಸಿದ್ದಲ್ಲಿ ಆ ಬಯ್ಗುಳಗಳು ನನ್ನ ಮನಸ್ಸಿನಾಳಕ್ಕಿಳಿದು ನನ್ನ ಶಾಂತಿಯನ್ನೂ ಕದಡುತಿತ್ತೇ ವಿನಃ ಆತನಿಗೆ ಬುದ್ಧಿವಾದ ಹೇಳಿದಂತೆ ಆಗುತ್ತಿರಲಿಲ್ಲ. ಆತ ನನ್ನ ಶಾಂತಿಗೆ ಭಂಗವನ್ನುಂಟು ಮಾಡಲು ಪ್ರಯತ್ನಿಸಿದ. ಆದರೆ ನಾನದನ್ನು ನಿರಾಕರಿಸಿದೆ!" ಎಂದ ಬುದ್ಧ. "ನಮ್ಮ ಮನಸ್ಸಿನ ಶಾಂತಿ ನಮ್ಮನ್ನು ಅವಲಂಬಿಸಿರಬೇಕೇ ಹೊರತು ಹೊರಗಿನ ಪ್ರಚೋದನೆಯನ್ನಲ್ಲ" ಎಂದು ಬೋಧಿಸಿದ ಬುದ್ಧ.

❑ **ಆಧಾರ:ಅಂತರ್ಜಾಲದಿಂದ**

# ನಿನ್ನೆ 'ನಿರ್ಭಯಾ', ಇಂದು ಗುಡಿಯಾ, ನಾಳೆ....???



ದೆಹಲಿಯಲ್ಲಿ ಚಲಿಸುವ ಬಸ್ಸಿನಲ್ಲಿ ನಡೆದ ಸಾಮೂಹಿಕ ಬಲಾತ್ಕಾರಕ್ಕೆ ಒಳಗಾದ 23ರ ಹರಯದ ಪ್ಯಾರಾ ಮೆಡಿಕಲ್ ವಿಧ್ಯಾರ್ಥಿನಿಯ ದುರಂತ ಸಾವಿನ ಕಹಿಯನ್ನು ಅನುಭವಿಸುತ್ತಿರುವ ಈ ನಾಲ್ಕು ತಿಂಗಳಲ್ಲಿ ಎಪ್ರಿಲ್ ಹದಿನೇಳರಂದು ದೇಶವನ್ನೇ ನಡುಗಿಸುವ ಮತ್ತೊಂದು ಅಮಾನವೀಯ ಕೃತ್ಯ ನಡೆದಿರುವುದು ದೇಶವೇ ಈ ನಾಚಿಕೆಗೇಡಿನ ಕೃತ್ಯಕ್ಕೆ ಹೇಸಿಕೊಳ್ಳುವಂತಾಗಿದೆ. ತನ್ನ ಮನೆ ಮುಂದಿನ ಅಂಗಳದಲ್ಲೇ ಆಟವಾಡಿಕೊಂಡಿದ್ದ ಐದು ವರ್ಷದ ಹಸುಳೆ ಗುಡಿಯಾಳನ್ನು ಪುಸಲಾಯಿಸಿ ಒಳ ಕರೆದು ಪಾಶವೀ ಕೃತ್ಯವನ್ನು ನಡೆಸಿ ಕೊನೆಗೆ ಮಗು ಸತ್ತಿರಬೇಕೆಂದು ಭಾವಿಸಿ ಹಾಗೇ ಸಾವಿನ ದವಡೆಯಲ್ಲಿ ಬಿದ್ದಿರಲಿ ಎಂದು ಸತತ ಎರಡು ದಿನಗಳ ಕಾಲ ಮಗುವನ್ನು ಕೂಡಿಟ್ಟು ಪರಾರಿಯಾದ ಪಾಪಿಯನ್ನು ಬಿಹಾರದ ಮುಝಫ್ಫರ್ ನಗರದಿಂದ ಪೋಲಿಸರು ಕೈವಶಕ್ಕೆ ತೆಗೆದುಕೊಂಡರು. ಆದರೆ ಗುಡಿಯಾ ನಲವತ್ತು ಗಂಟೆಗಳ ಕಾಲ ಅನ್ನ ನೀರಿಲ್ಲದೇ ಕತ್ತಲುಕೋಣೆಯಲ್ಲಿ ಸಾವಿನೊಡನೆ ಸೆಣಸಾಡಿಯೂ ಬದುಕಿದಳು. ಏಮ್ಸ್ ನಲ್ಲಿ ಇನ್ನೂ ಬದುಕಿನೊಡನೆ ಹೋರಾಡಿ ಗೆದ್ದು ಬಂದಿದ್ದಾಳೆ. ದೆಹಲಿಯಲ್ಲಿ ಇಂಥಹ ಘಟನೆಗಳು ಪ್ರತಿನಿತ್ಯ ನಡೆಯುತ್ತವೆ.ಆಂದೋಲನ, ಶಾಂತಿಯುತ ಪ್ರತಿಭಟನೆ, ಕ್ಯಾಂಡಲ್ ಮಾರ್ಚ್, ಒಂದಿಷ್ಟು ಹಿಂಸೆ, ಒಂದಿಷ್ಟು ಲಾಠಿ ಚಾರ್ಜ್, ಮತ್ತೆ ನಗರದಲ್ಲಿ ಧಾರಾ 144 ಜಾರಿಯಾಗುತ್ತದೆ. ಜನ ಟಿವಿಯಲ್ಲಿ ಆಂದೋಲನಕಾರರ ಟೀವಿಯಲ್ಲಿ ಕಾಣಿಸಿಕೊಳ್ಳುತ್ತಾರೆ, ದೊಡ್ಡ ದೊಡ್ಡ ಸುಧಾರಣೆಯ ಮಾತುಗಳನ್ನಾಡುತ್ತಾರೆ, ಪ್ಯಾನೆಲ್ ಚರ್ಚೆಯಲ್ಲಿ ಎಲ್ಲರೂ ಆಕ್ರೋಶವನ್ನು ತೋಡಿಕೊಳ್ಳುತ್ತಾರೆ. ಒಂದು ಪಕ್ಷ ಇನ್ನೊಂದನ್ನು ದೂಷಿಸುತ್ತದೆ, ಸುದ್ದಿಗಾರರು ಗಂಟಲು ಹರಿದುಕೊಳ್ಳುತ್ತ ವರ್ಣರಂಜಿತ ಸುದ್ದಿಯನ್ನು ಬಿತ್ತರಿಸುತ್ತಾರೆ, ಆರೋಪಿಗೆ ಜೈಲು, ಯಾಥಾರೀತಿ ವಿಚಾರಣೆ ಪ್ರಕ್ರಿಯೆ ಶುರುವಾಗುತ್ತದೆ!

ಕಾನೂನು ವ್ಯವಸ್ಥೆಯಲ್ಲಿ ಬಹುತೇಕ ನ್ಯಾಯ ಕಾನೂನುಬದ್ಧವಾಗಿರುತ್ತದೆಯೇ ಹೊರತು ನ್ಯಾಯಯುತವಾಗಿರುವುದಿಲ್ಲ. ತ್ವರಿತ ನ್ಯಾಯಾಲಯದಲ್ಲಿ ಪ್ರತಿದಿನವೂ ವಿಚಾರಣೆ ನಡೆಯುತ್ತಿದ್ದರೂ ಗ್ಯಾಂಗ್ ರೇಪಿನ ಆರೋಪಿಗಳಿಗೆ 'ಸಜೆ' ನಾವು ತಿಳಿದಷ್ಟು ಶೀಘ್ರವಾಗಿ ದೊರೆಯುವ ಲಕ್ಷಣಗಳೇನು ತೋರುತ್ತಿಲ್ಲ, ದಂಡನೆ ಇನ್ನೂ ದೂರದಲ್ಲೇ ಇದೆ. ಅದು ಮುಗಿಯುವುದರಲ್ಲಿ ಜನತೆ ನಿರ್ಭಯಳನ್ನು ಮರೆತಿರುತ್ತದೆ. ಈಗಷ್ಟೆ ಲೋಕವನ್ನು ತನ್ನ ಬೆರಗುಗಣ್ಣಿನಲ್ಲಿ ತುಂಬಿಕೊಳ್ಳುತ್ತಿದ್ದ 'ಗುಡಿಯಾ'ಳ ಹೂವಿನಂತ ಬಾಲ್ಯವನ್ನು ಕ್ರೌರ್ಯದಿಂದ ಹಿಸುಕಿ ನಾಶಮಾಡಿದವನಿಗೆ ನೇಣುಗಂಬಕ್ಕೇರಿಸಬೇಕು. ಗುಡಿಯಾಳನ್ನು ಪಶುವಿನಂತೆ ಹಿಂಸಿಸಿದವನ ಮರ್ಮಾಂಗಗಳನ್ನು ಕೊಚ್ಚಿ–ಹಾಕಬೇಕು. ಇದು ಜನಸಾಮಾನ್ಯರು ಬಯಸುವ ನ್ಯಾಯ. ಆದರೆ ದುರ್ದೈವ....ನಮ್ಮ ಕಾನೂನುಬದ್ಧವಾದ ಕಾನೂನು ಪ್ರಕ್ರಿಯ ಮೂಲಕವೇ ನಾವು ನ್ಯಾಯಕ್ಕಾಗಿ ಕಾಯಬೇಕು.

ಡಿಸೆಂಬರ್ 16 ರ ಸಾಮೂಹಿಕ ಬಲಾತ್ಕಾರ ಹಾಗೂ 'ನಿರ್ಭಯ'ಳ ದುರಂತ ಸಾವಿನ ನಂತರ ದೆಹಲಿಯಲ್ಲಿ ಪ್ರತಿದಿನಕ್ಕೆ 4 ರಂತೆ ಬಲಾತ್ಕಾರಗಳು ನಡೆಯುತ್ತಿವೆ. ಈ ನಾಲ್ಕು ತಿಂಗಳ ಅವಧಿಯಲ್ಲಿ ಸುಮಾರು 393 ಬಲಾತ್ಕಾರ ಪ್ರಕರಣಗಳು ಬೆಳಕಿಗೆ ಬಂದಿವೆ. ಇಡೀ ಮಾನವ ಕುಲವನ್ನು ಬೆಚ್ಚಿಬೀಳಿಸುತ್ತಿರುವ ಸಂಗತಿಯೆಂದರೆ ದಿನೇ ದಿನೇ ಹೆಚ್ಚುತ್ತಿರುವ ಕಂದಮ್ಮಗಳ ಮೇಲಿನ ಅತ್ಯಾಚಾರ ಹಾಗೂ ಮಕ್ಕಳು ನಾಪತ್ತೆಯಾಗುತ್ತಿರುವ ಪ್ರಕರಣಗಳು.

ಈವೆರಡು ಘಟನೆಗಳು ಇಡೀ ದೇಶದ ನೈತಿಕ ಸಿದ್ಧಾಂತಗಳ ಬುಡವನ್ನೇ ಅಲ್ಲಾಡಿಸಿ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಮಹಿಳೆಯರ ಮೇಲಿನ ಕ್ರೌರ್ಯ, ದೌರ್ಜನ್ಯಕ್ಕೆ ಕೊನೆ ಎಂದು? ದೇಶದಾದ್ಯಂತ ಭುಗಿಲೆದ್ದ ಜನರ ಪ್ರತಿಭಟನೆ, ಆಂದೋಲನ, ಆಕ್ರೋಶದ ನಡುವೆಯೇ ಇಂಥ ಘಟನೆಗಳು ದೆಹಲಿಯಲ್ಲದೇ ಬೆಂಗಳೂರು, ಕೊಲ್ಕತ್ತಾ, ಅಹಮದಾಬಾದ್, ಕಾನಪುರ್, ಲಕ್ನೋ, ಚಂಡೀಗರ್ ಹೀಗೆ ದೇಶದ ನಾನಾ ಭಾಗಗಳಲ್ಲಿ ದಿನಕ್ಕೊಂದು ಅತ್ಯಾಚಾರದ ಸುದ್ದಿ ಇನ್ನೂ ವರದಿಯಾಗುತ್ತಲೇ ಇವೆ. ದೇಶದಲ್ಲಿ "ಲೈಂಗಿಕ ಭಯೋತ್ಪಾದನೆ" ಬೆಂಕಿಯಂತೆ ಹಬ್ಬುತ್ತಿದೆಯೇನೋ ಎಂದು ಭಯವಾಗುತ್ತಿದೆ. ಇದೇನು ಮಾರೆಮ್ಮನ ಜಾತ್ರೆಯೋ ಎನ್ನುವಂತೆ ದಿನಕ್ಕೊಂದು ರೇಪ್ ಪ್ರಕರಣ ಜುಗುಪ್ಸೆ, ಹತಾಶೆ, ಅಕ್ರೋಶವನ್ನು ಹೆಚ್ಚಿಸುತ್ತಿದೆ. ಯುವಜನತೆಯ ಆಕ್ರೋಶ ತ್ವರಿತ ನ್ಯಾಯ ಬೇಡುತ್ತಿದೆ. ಆರೋಪಿಗಳಿಗೆ ಆದಷ್ಟು ಬೇಗನೆ ಮರಣದಂಡನೆ ವಿಧಿಸುವಂತಾಗಬೇಕು. ಈಗಿನ ಕಾನೂನು ವ್ಯವಸ್ಥೆಯನ್ನು ಬಿಗಿಗೊಳಿಸುವ ಕ್ರಮ ಹಾಗೂ ಅತ್ಯಾಚಾರ ಪ್ರಕರಣಗಳಲ್ಲಿ ಪ್ರಾಮಾಣಿಕವಾಗಿ (ಒಂದು ವರ್ಷದ ಸಮಯ ಚೌಕಟ್ಟಿನೊಳಗೆ) ಫಾಸ್ಟ್ ಟ್ರ್ಯಾಕ್ ಕೋರ್ಟ್ ಹೊಂದಿಸಿ ದಾಖಲಾದ ಪ್ರಕರಣಗಳನ್ನು ಶೀಘ್ರವಾಗಿ ಎತ್ತಿಕೊಂಡು ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ವಿಧಿಸುವಂತಾಗಬೇಕು. ಈ ಪ್ರಕರಣದಲ್ಲಿ ದೇಶದ ಜನತೆ ಆರೋಪಿಗಳಿಗೆ ಮರಣ ದಂಡನೆ, ಕೆಮಿಕಲ್ ಕ್ಯಾಸ್ಟ್ರೇಶನ್ , ಪುರುಷ ಹರಣದಂತ ಉಗ್ರ ಶಿಕ್ಷೆಗಾಗಿ ಒತ್ತಾಯಿಸಿ ಆಂದೋಲನವನ್ನು ಜಾರಿಯಲ್ಲಿಟ್ಟಿದ್ದಾರೆ. ದೆಹಲಿಯ ಕಟಕಟಿಸುವ ಚಳಿಯನ್ನು ಲೆಕ್ಕಿಸದೇ ಜಂತರ್ ಮಂತರ್ ದಲ್ಲಿ ನಡೆದ ಆಂದೋಲನದ ಜ್ವಾಲೆ ಕ್ರಮೇಣ ಶಾಂತವಾಯಿತು. ದಿನನಿತ್ಯ ನಡೆದ ಜನರ ಪ್ರತಿಭಟನೆಯ ಪ್ರದರ್ಶನ ನಡೆಯಿತು. ಇಬ್ಬರು ನಾಗರಿಕರು ಉಗ್ರ ಉಪವಾಸವನ್ನೂ ಕೈಗೊಂಡಿದ್ದರು. ಇಂದು ಅವರೆಲ್ಲಿ ಹೋದರೋ ತಿಳಿಯಲಿಲ್ಲ. ಇವತ್ತು ಏಮ್ಸ್ ಎದುರು ಹಾಗೂ ದಿಲ್ಲಿ ಪೋಲಿಸ್ ಮುಖ್ಯ ಕಾರ್ಯಾಲಯದ ಎದುರು ಉಗ್ರ ಪ್ರತಿಭಟನೆ ನಡೆಯುತ್ತಲೇ ಇದೆ. ಪ್ರಪಂಚದ ಇತರ ದೇಶಗಳೂ ನಮ್ಮ ದೇಶದ ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆಯತ್ತ ಹುಬ್ಬೇರಿಸುವಂತಾಗಿದೆ. ಎಲ್ಲಾ ಟಿವಿ ವಾಹಿನಿಗಳಲ್ಲಿ ಸರಕಾರ ಸೂಕ್ತ ಕ್ರಮಗಳ ಕುರುತು, ಜಸ್ಟಿಸ್ ವರ್ಮಾ ಸಮಿತಿ ಮಂಡಿಸಿದ ನೂತನ ಕಾನೂನು ಸೂತ್ರಗಳ ಬಗ್ಗೆ ಭರವಸೆಯ ವರದಿ ಆಗಾಗ ಬರುತ್ತಲೇ ಇರುತ್ತದೆ. ಗ್ಯಾಂಗರೇಪಿನ ನಂತರವಂತೂ ಜನತೆಗೆ ದೆಹಲಿ ಸರಕಾರದ ಮೇಲಾಗಲಿ, ಕೇಂದ್ರ ಸರಕಾರದ ಮೇಲಾಗಲಿ, ದೆಹಲಿ ಪೋಲಿಸ್ ವ್ಯವಸ್ಥೆಯ ಮೇಲಾಗಲಿ ಯಾವ ನಂಬಿಕೆಯೂ ಉಳಿದಿಲ್ಲ. ಯಾವತ್ತೂ ಜನತೆ ಇಡೀ ಪೋಲಿಸ್ ಇಲಾಖೆಯನ್ನೇ ಸಂಶಯದ ದೃಷ್ಟಿಯಿಂದ ನೋಡುವಂತಾಗಿದೆ. ಲಂಚಕೋರತನ, ಭ್ರಷ್ಟಾಚಾರ ತುಂಬಿರುವ ಸರಕಾರದಿಂದ ನಾವೇನನ್ನು ನಿರೀಕ್ಷಿಸಬೇಕು ಅನ್ನುವ ಕುರಿತು ಯುವಜನತೆ ಎಚ್ಚೆತ್ತುಕೊಂಡಿದೆ. 'ದಾಮಿನಿ' ಯ ದಾರುಣ ಸಾವು ಹೋರಾಟದ ಕಿಡಿಯನ್ನು ಹೊತ್ತಿಸಿದ್ದಂತೂ ನಿಜ. ಆ ಬೆಳಕಿನ ನೆರಳಿನಲ್ಲೇ ಮತ್ತೆ ಗುಡಿಯಾಳ ಆಕ್ರಂದನ ಕೇಳುವಂತಾಗಿದ್ದು ನಮ್ಮೆಲ್ಲರ ದುರ್ದೈವ.

**ಜಾತಿ ಮತ್ತು ಲಿಂಗ ಅಸಮಾನತೆ:**

ಇತರ ಯುರೋಪ್ , ಅಮೇರಿಕಾ, ದೇಶಗಳನ್ನು ನೋಡಿದಾಗ ಇಂದಿನ ಇಪ್ಪತ್ತೊಂದನೆ ಶತಮಾನದಲ್ಲೂ ನಮ್ಮ ದೇಶದಲ್ಲಿ ಬೇರೂರಿರುವ ಲಿಂಗ ಅಸಮಾನತೆಯೂ ಮಹಿಳೆಯರ ಮೇಲಿನ ಅತ್ಯಾಚಾರವನ್ನು ಹೆಚ್ಚಿಸಿದೆ ಎನ್ನಬಹುದು. ನಾವೆಷ್ಟೇ ಸಮಾನರು ಎಂದೆಲ್ಲ ಹೇಳಿಕೊಂಡರೂ ಅದೆಲ್ಲ ಬರೀ ಬೂಟಾಟಿಕೆಯಾಗಿದೆ. ಯಾಕಂದರೆ ನಮ್ಮ ಪಿತೃಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಮಹಿಳೆ ಬೌದ್ಧಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರಿದಿದ್ದರೆ ಅದನ್ನು ಒಪ್ಪಿಕೊಳ್ಳದ 'ಪುರುಷ ಅಹಂ' ಮಾತ್ರ ಹೆಣ್ಣನ್ನು ದಮನಿಸುವ ಯುಕ್ತಿಗಳಲ್ಲೇ ತೊಡಗಿರುತ್ತದೆ. ನಮ್ಮ ಸಮಾಜದ ಮೂಲಭೂತ ಸಮಸ್ಯೆ ಇರುವುದು ಇಲ್ಲಿಯೇ. ಜನರ ಆಲೋಚನಾ ಕ್ರಮ, ಅವರ ಮಾನಸಿಕ ಸ್ತರ ಹಾಗೂ ಸ್ತ್ರೀ–ಪುರುಷ ಸಂಬಂಧಗಳನ್ನು ಅವರು ನೋಡುವ ದೃಷ್ಟಿಯಲ್ಲಿ. ಪುರುಷ ಪ್ರಧಾನ ಸಮಾಜದ ವ್ಯವಸ್ಥೆಗೆ ಮಹಿಳೆ ತತ್ತರಿಸಿ ಹೋಗಿದ್ದ ಸಂದರ್ಭದಲ್ಲಿ 12ನೇ ಶತಮಾನದಲ್ಲಿ ದಲಿತರಿಗೆ ಹಾಗೂ

ಸ್ತ್ರೀಯರಿಗೆ ಅನುಭಾವ ಮಂಟಪದಲ್ಲಿ ಅನುವು ಮಾಡಿಕೊಟ್ಟ ವಿಶ್ವಗುರು ಬಸವಣ್ಣ ಮನುಕುಲ ಉದ್ಧಾರಕ್ಕೆ ಮಹಾನ್ ಕ್ರಾಂತಿಯನ್ನೇ ಮಾಡಿದರು. ಎಂಟುನೂರು ವರ್ಷಗಳಷ್ಟು ಹಿಂದೆಯೇ ಸ್ತ್ರೀ ಪುರುಷರ ನಡುವಿನ ಅಸಮಾನತೆಯ ಬಗ್ಗೆ ದನಿ ಎತ್ತಿದವರು ವಚನಕಾರ್ತಿಯರು. ಅದರಲ್ಲೂ ಕರುನಾಡಿನವರು. ಸುಮಾರು ಇಪ್ಪತ್ತು ಸಾವಿರ ವಚನಗಳಲ್ಲಿ ಸಾವಿರದ ನೂರಕ್ಕೂ ಹೆಚ್ಚು ವಚನಗಳು ಮಹಿಳೆಯರು ರಚಿಸಿರುವುದನ್ನು ಗಮನಿಸಿದರೆ ಮಹಿಳೆ ಅಂದು ಇಂದೂ ಬೌದ್ಧಿಕವಾಗಿ, ವೈಚಾರಿಕವಾಗಿ ಪುರುಷನಷ್ಟೇ ಸಮರ್ಥಳು ಎಂಬುದನ್ನು ಸಾರುತ್ತದೆ. ಒಟ್ಟು ಮೂವತ್ತೂರು ವಚನಕಾರ್ತಿಯರು ಇದ್ದಾರೆ ಎಂಬ ಊಹೆ ಇದೆ. ವಚನಕಾರ್ತಿಯರಲ್ಲಿ ಅಕ್ಕಾಮಹಾದೇವಿ ಶಿಖರಪ್ರಾಯರಾದರೆ, ಪುಟ್ಟ ಶಿಖರಗಳಾಗಿ ಉರಿಲಿಂಗಪೆದ್ದಿಯ ಹೆಂಡತಿ ಕಾಳವ್ವೆ, ಅಮುಗೇರಾಯಮ್ಮ, ಆಯ್ದಕಿ ಲಕ್ಕಮ್ಮ, ಗೊಗ್ಗವ್ವೆ, ಹಾದರದ ಗಂಗಮ್ಮ, ಗಂಗವ್ವೆ ಇನ್ನು ಮುಂತಾದವರು ಬರುತ್ತಾರೆ. ಇಂದಿನ ಮಹಿಳೆಯ ಸ್ಥಿತಿ ಆರ್ಥಿಕವಾಗಿ. ಬೌದ್ಧಿಕವಾಗಿ ಸಬಲಳಾಗಿದ್ದರೂ ಸಮಾನತೆಯಲ್ಲಿ ಇನ್ನೂ ಹಿಂದೆಯೇ ಇದ್ದಾಳೆ. ಇಂದಿನ ನಮ್ಮ ವ್ಯವಸ್ಥೆ ಹೇಗಿದೆಯೆಂದರೆ ಮೇಲ್ಜಾತಿಯ ಮಹಿಳೆಯ ಮೇಲೆ ಕೆಳಜಾತಿಯ ಪುರುಷನಿಂದ ಅತ್ಯಾಚಾರವಾದರೆ ಆತನ ಸಮುದಾಯದ ಮೇಲೆ ಎರಗಲಾಗುತ್ತದೆ. ಅದೇ ಹಿಂದುಳಿದ– ದಲಿತ ಮಹಿಳೆಯ ಮೇಲೆ ಬಲಾತ್ಕಾರ ಪ್ರಕರಣ ನಡೆದರೆ ಸಮಾಜದ ಪ್ರತಿಕ್ರಿಯೆ ಗಾಭರಿ ಹುಟ್ಟಿಸುವಂತದ್ದು. ಅಲ್ಪಸಂಖ್ಯಾತರು– ಹಿಂದುಳಿದ ಮಹಿಳೆಯರೂ ಮನುಷ್ಯರೇ ! ಜಾತಿ ವರ್ಣದ ತಾರತಮ್ಯ ತೋರದೇ ಅವರಿಗೂ ನ್ಯಾಯ ದೊರಕಿಸಿಕೊಡಬೇಕು. ಈ ಶತಮಾನದ ಮಹಿಳೆಯರು ಶಿಕ್ಷಣ, ವಿಜ್ಞಾನ, ವೈದ್ಯಕೀಯ, ತಾಂತ್ರಿಕ ವಿಜ್ಞಾನ, ಬಾಹ್ಯಾಕಾಶ, ರಾಜಕೀಯ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ನಿಸ್ಸೀಮರು. ಲೈಂಗಿಕ ಅತ್ಯಾಚಾರವೆಸಗುವುದರ ಮೂಲಕ ಗಂಡು ತನ್ನ ಶೌರ್ಯವನ್ನು ಕ್ರೌರ್ಯದ ಮೂಲಕ ಪ್ರದರ್ಶಿಸುತ್ತಾನೆಯೇ ಹೊರತು ಮತ್ತೇನಲ್ಲ. ಬಲಾತ್ಕಾರ ಕೇವಲ ಲೈಂಗಿಕ ತೃಷೆಗಾಗಿ ಅಲ್ಲದೇ "ಅವಳಿಗೆ ತಕ್ಕ ಬುದ್ಧಿ ಕಲಿಸುತ್ತೇನೆ ನೋಡು" ಎನ್ನುವ ಪೌರುಷ ಮೆರೆಯುವ ಕ್ರೌರ್ಯ. ಹಾಗೆ ದಾಮಿನಿಯ ವಿಷಯದಲ್ಲೂ ಮೃಗೀಯ ವರ್ತನೆ ತೋರಿದ ಅತ್ಯಾಚಾರಿಗಳ ದೌರ್ಜನ್ಯ ಈ ತರದ ವಿಕೃತ ಮನೋವ್ಯಾಧಿಯ ನಿದರ್ಶನ.



### ಅನರಕ್ಷರತೆ– ಮೌಢ್ಯ

ಇಡೀ ಘಟನೆಯನ್ನು ಮತ್ತು ಆಗುತ್ತಿರುವ ಘಟನೆಗಳನ್ನು ಕ್ರಮವಾಗಿ ನೋಡಿದಾಗ ನಮಗೆ ಅನಿಸುವುದು ಇಂಥ ಅತ್ಯಾಚಾರ, ಕ್ರೌರ್ಯಗಳು ನಡೆಯುವುದು, ಅಪರಾಧ ಎಸಗುವವರು ಕೆಳ ಮಧ್ಯಮ ವರ್ಗ, ದಲಿತ ಮತ್ತು ಅಲ್ಪಸಂಖ್ಯಾತ ಸಮುದಾಯದಲ್ಲಿ. ಉಚ್ಚ ವರ್ಗದ ಐಷಾರಾಮಿತನ, ಪಬ್ಬು, ಬಾರ್, ತಡರಾತ್ರಿಯ ಪಾರ್ಟಿಗಳು, ವಿವಾಹೇತರ ಸಂಬಂಧಗಳು, ಸಲಿಂಗ ಕಾಮ, ಗೆಳೆತನ, ಲಿವ್ ಇನ್ ರಿಲೇಶನ್ಶಿಪ್ ಇತ್ಯಾದಿ ಬಾಹ್ಯ ಸಂಸ್ಕೃತಿಯ ಮುಕ್ತ ವೈಭವೀಕರಣವನ್ನು ಬಿಂಬಿಸುವ ಹೈ–ಫೈ ಸಮಾಜದ ಮುಖ ತಣ್ಣನೆಯ ವಿಷದಂತೆ ನಮ್ಮ ಸಂಸ್ಕೃತಿಯನ್ನು ಕಣ ಕಣವಾಗಿ ಕಬಳಿಸುತ್ತಿದೆಯೆಂಬುದು ಒಂದೆಡೆಯಾದರೆ ಇನ್ನೊಂದೆಡೆ ಪ್ರವಾಹದಂತೆ ಮಹಾನಗರಕ್ಕೆ ಹರಿದು ಬರುವ ಕೆಳವರ್ಗದ ಅಶಿಕ್ಷಿತ, ಆರ್ಥಿಕ ಅಭದ್ರತೆಯ ಸಮುದಾಯಕ್ಕೆ ಕಣ್ಣುಕೋರೈಸುವ ಮಹಾನಗರದ ಜನಜೀವನ, ಹಣ ಗಳಿಸುವ ಮಾರ್ಗಗಳು, ಮುಕ್ತ ಕುಡಿತ –ಜೂಜು ಇತರ ಆಕರ್ಷಣೆಗಳು ಅಪರಾಧದ ಲೋಕಕ್ಕೆ ಆಹ್ವಾನಿಸುತ್ತವೆ. ಆರ್ಥಿಕ ಅಸಮಾನತೆ, ಆರ್ಥಿಕ ಒತ್ತಡ,ಅಭದ್ರತೆ, ಲೈಂಗಿಕ ಹತಾಶೆಗಳು ಮತ್ತು ಆಷಾಡಭೂತಿತನ ಅದರಿಂದುಂಟಾದ ಹತಾಶೆ ಮನುಷ್ಯನನ್ನು ಅಧಃಪತನಕ್ಕೊಯ್ಯುತ್ತದೆ. ಗ್ರಾಮಜೀವನದಲ್ಲಿರಬೇಕಿದ್ದ ತನ್ನ ಸುತ್ತಮುತ್ತಲಿನ ಸಮಾಜದ ಅಂಜಿಕೆ, ಅಂಕುಶವಿರದೇ, ನೆರೆಹೊರೆ, ಜಾತಿ ಮತ, ಕುಲ–ಬಾಂಧವರ ಭಯವಿಲ್ಲದೆ ಮಹಾನಗರದಲ್ಲಿ ಏನು ಮಾಡಿದರೂ ನಡೆದೀತು. ನೋಡುವವರ್ಯಾರು? ಕೇಳುವವರ್ಯಾರು ಎಂಬ ಭಂಡ ಧೈರ್ಯವೂ ಹೆಚ್ಚುತ್ತಿರುವ ಅಪರಾಧಗಳಿಗೆ ಕಾರಣವೆನ್ನಬಹುದು. ಇನ್ನು ಉದ್ಯೋಗ ನಿಮಿತ್ತ ವಲಸೆ ಬಂದ ಮಧ್ಯಮ ಹಾಗೂ ಉಚ್ಚ ಮಧ್ಯಮ ವರ್ಗ ನಗರ ಜೀವನದಲ್ಲಿ ನಡುಗಡ್ಡೆಗಳಂತೆ ಒಬ್ಬರಿಗೊಬ್ಬರು ಸಂಪರ್ಕವಿಲ್ಲದಂತೆ ಬದುಕುತ್ತಿವೆ. ಇನ್ನು ಮಹಾನಗರದ ನಮ್ಮ ಯುವ ಜನರ ಲೋಕ ಫೇಸ್ಬುಕ್, ಟ್ವಿಟ್ಟರ್ ಗಳಲ್ಲಿಯೇ ಹೆಚ್ಚಿನ ಪಾಲು ಕಳೆದುಹೋಗಿ ವಾಸ್ತವ ಜೀವನದ ಸವಾಲುಗಳನ್ನು, ಜವಾಬ್ದಾರಿಗಳನ್ನು ಅರಿತುಕೊಳ್ಳುವುದರಲ್ಲಿ ಹಿಂದಿನವರಾದ ನಮ್ಮ ಪೀಳಿಗೆಯವರಿಗಿಂತ ಅಸಮರ್ಥರಾಗಿದ್ದಾರೆಂದೇ ನಾನು ಅರ್ಥೈಸುತ್ತೇನೆ. ಏನಿದ್ದರೂ ಅವರು ತಾಂತ್ರಿಕ ಯುಗದ ಯಜಮಾನರು, ಡಿಜಿಟಲ್ ಲೋಕದಲ್ಲಿ ಸಮರ್ಥರು. ಬದುಕಿನ ಬಗೆಗಿನ ಅವರ ವಿಚಾರಗಳೇ ಬೇರೆ. ನಿಜವಾದ ಗೆಳೆತನ, ಸ್ನೇಹ , ಪ್ರೇಮದ ಮೌಲ್ಯಗಳು ಡಿಜಿಟಲ್ ಲೋಕದಲ್ಲಿ ಅರ್ಥಹೀನವಾಗಿವೆ. ಇನ್ನೊಂದು ಆತಂಕದ ವಿಷಯವೆಂದರೆ ಭಾರತದಂತಹ ದೇಶದಲ್ಲಿ ಲೈಂಗಿಕತೆಯನ್ನು ಪವಿತ್ರತೆಯ ಹೆಸರಿನಲ್ಲಿ ಗುಟ್ಟಾಗಿಡುವ ಪರಂಪರೆಯಲ್ಲಿ ಅಂತರ್ಜಾಲದ ಮೂಲಕ ದಂಡಿಯಾಗಿ ಹರಿದುಬರುತ್ತಿರುವ ರತಿ ಕ್ರೀಡೆಯ ಚಿತ್ರಗಳು, ಲಂಪಟ ಸಾಹಿತ್ಯ ಬಹುಶಃ ಅಶಿಕ್ಷಿತರಲ್ಲಿ ದುಷ್ಪರಿಣಾಮವನ್ನು ಬೀರುತ್ತಿದೆಯೆನಿಸುತ್ತದೆ. ಒಬ್ಬ ಕಸ ಗುಡಿಸುವ ಜಮಾದಾರನ ಕೈಯಲ್ಲಿ, ತರಕಾರಿ ಮಾರುವವ, ಕಬಾಡಿ ಮಾರುವವನ ಮೊಬೈಲು ಕಂಡಾಗ ಎಷ್ಟೆಲ್ಲ ಅನಕೂಲತೆಗಳಿವೆ ಎಂದು ನಮ್ಮ ದೇಶದ ಪ್ರಗತಿಯ ಬಗ್ಗೆ ಹೆಮ್ಮೆ ಅನಿಸುತ್ತಿತ್ತು, ಈಗ ಕೇವಲ ಮೊಬೈಲ್ ಮಾತ್ರವಲ್ಲ ಅದರೊಂದಿಗೆ ಅಂತರ್ಜಾಲದ ಸವಲತ್ತು ಇದೆ. ಎಂಥೆಥವರ ಕೈಯಲ್ಲಿ ಮೊಬೈಲುಗಳು, ಆ ಮೂಲಕ ಪ್ರತಿಯೊಬ್ಬರಿಗೂ ಮೊಬೈಲ್ ಮೂಲಕ ಹರಿದಾಡುತ್ತಿರುವ ಲಂಪಟ ಸಾಮಗ್ರಿ ಭಯಹುಟ್ಟಿಸುತ್ತದೆ. ಅದನ್ನು ತಮ್ಮ ಕಾಮಪಿಪಾಸೆಗಾಗಿ, ವಿಕೃತ ಮನಸ್ಸಿನ ಲೈಂಗಿಕ ವಾಂಛೆಗಳು, ಭ್ರಮೆಗಳನ್ನು ಹತ್ತಿಕ್ಕಲಾರದ ಮನೋವ್ಯಾಧಿತರು ಅವಕಾಶ ಕಲ್ಪಿಸಿಕೊಂಡು ಮಹಿಳೆಯ ಮೇಲೆ ಅತ್ಯಾಚಾರವೆಸಗುವಂತಹ ದುಸ್ಸಾಹಸಕ್ಕೆ ಕೈಹಾಕುತ್ತಾರೆ. ಗುಡಿಯಾಳನ್ನು ಹೊಸಕಿಹಾಕಿದವನ ಮೊಬೈಲಿನಲ್ಲಿ ರತಿ ಕ್ರೀಡೆಯ ಚಿತ್ರಗಳಿದ್ದುದು ಕಂಡುಬಂದಿದೆ.

### ರಾಜಕೀಯ ಅರಾಜಕತೆ

ರಾಜಕೀಯ ದೃಷ್ಟಿಯಿಂದ ದೇಶವನ್ನು ಕೊಳ್ಳೆಹೊಡೆಯುತ್ತಿರುವ ಬಂಡವಾಳಶಾಹಿ ಶಕ್ತಿಗಳು, ಕಾಮನ್ ವೆಲ್ಥ್ ಗೇಮ್ಸ್ ಹಗರಣ, 2ಜೀ ಹಗರಣ, ಜಾತಿ ಯುದ್ಧ ಮುಂತಾದವುಗಳಲ್ಲೇ ಮುಳುಗಿರುವ ಸರಕಾರ ಅಪರಾಧಿಗಳನ್ನೂ, ಅತ್ಯಾಚಾರಿಗಳನ್ನೂ ಪರೋಕ್ಷವಾಗಿ ಪ್ರೋತ್ಸಾಹಿಸುತ್ತಿದೆಯೆಂದೇ ಹೇಳಬಹುದು. ಪೋಲಿಸ್ ಠಾಣೆಯಲ್ಲಿ ಎಫ್ಐಆರ್ ( ಪಾರ್ಕ ಸ್ಟ್ರೀಟ್ ಕೇಸ್, ಕೊಲಕತ್ತಾ) ಕೂಡ ಮಾಡಲು ನಿರಾಕರಿಸುತ್ತವೆ. ಅತ್ಯಾಚಾರವನ್ನು ಸರಿಯಾಗಿ ದಾಖಲಿಸಿಕೊಳ್ಳದ ಪೋಲಿಸ್ ಇಲಾಖೆ ಅತ್ಯಾಚಾರವನ್ನು ದಾಖಲಿಸುವ ಬದಲು ದೂರು ಹೇಳಲು ಬಂದ ಅಮಾಯಕಳನ್ನು ಒಳಗಡೇ ದಬ್ಬಿ ಮತ್ತೆ ಬಲಾತ್ಕರಿಸಿ ಕಳಿಸಿದ ಉದಾಹರಣೆಗಳಿವೆ. ಹೀಗೆ ಪ್ರತಿ ಹಂತದಲ್ಲೂ ಮಹಿಳೆಯೇ ಬಲಿಪಶುವಾಗುತ್ತಾಳೆ, ಪ್ರತಿ ಹೆಜ್ಜೆ ಹೆಜ್ಜೆಯಲ್ಲಿ ಅವಳ ತೇಜೋವಧೆ ಆಗುತ್ತಿರುತ್ತದೆ. ಸಮಾಜವನ್ನು ರಕ್ಷಿಸಬೇಕಾಗಿರುವ ಪೋಲಿಸ ಪಡೆಯ ನಿಷ್ಕ್ರೀಯತೆ, ಬೇಜವಾಬ್ದಾರಿತನ, ಲಂಚಕೋರತನ ತಮಗೆ ವೃತ್ತಿ ನೀಡಿದ ಹಕ್ಕು ಎಂಬ ಧೋರಣೆ ಮೈಗೂಢಿಕೊಂಡಿದೆ. ಹಾಗೆಂದು ಓಣಿ ಓಣಿಗೆ, ಪ್ರತಿ ಬಸ್ಸು, ಪ್ರತಿ ಮಾಲ್ ನಲ್ಲಿ, ಪ್ರತಿ ಸಿನೆಮಾ ಹಾಲಿನಲ್ಲಿ ಒಬ್ಬೊಬ್ಬ ಪೋಲಿಸ್ ಸಿಬ್ಬಂದಿ ನಿಂತು ರಕ್ಷಣೆ ಮಾಡಲಿ ಎಂದು ಅರ್ಥವಲ್ಲ. ಹಾಗೆ ಮಾಡಲು ಸಾಧ್ಯವೂ ಇಲ್ಲ. ಇದು ಕೇವಲ ಮಹಾನಗರಗಳಿಗಷ್ಟೇ ಸೀಮತಗೊಳ್ಳದೇ ಸಣ್ಣ ಪುಟ್ಟ ನಗರಗಳು, ಗ್ರಾಮೀಣ ಪ್ರದೇಶಗಳ ಮಹಿಳೆಯರಿಗೂ ಸಮಾನವಾದ ನ್ಯಾಯ ದೊರೆಯುವಂತಾಗಬೇಕು. ಅತ್ಯಾಚಾರಿಗಳಿಗೆ ಅಲ್ಲೂ ಇದೇ ಮಾದರಿ ಫಾಸ್ಟ್ ಟ್ರ್ಯಾಕ್ ಕೋರ್ಟು, ಪಂಚಾಯತಿ ಇತ್ಯಾದಿಗಳ ಕಾನೂನು ಮರು ರೂಪಗೊಳ್ಳಬೇಕು

### ಸಿನೆಮಾ – ಜಾಹೀರಾತುಗಳು

ಮಹಿಳೆಯರನ್ನು ಭೋಗದ ವಸ್ತುವಾಗಿ, ಕಾಮುಕತನದಿಂದಲೇ ನೋಡುವ ದೃಷ್ಟಿ ಸಮಾಜದ ಹಿತದೃಷ್ಟಿಯಿಂದಲೂ ಒಳ್ಳೆಯದಲ್ಲ. ಅದಕ್ಕೆ ಮೊನ್ನೆ ಹೊಸವರ್ಷದ ಆಚರಣೆಗೆಂದು ಗುರಗಾಂವ್‌ನಲ್ಲಿ ಆಯೋಜಿಸಿದ್ದ 'ಹನಿ ಸಿಂಗ್' ಕಾರ್ಯಕ್ರಮದಲ್ಲಿ ಅವನೇ ಬರೆದ ಸಾಹಿತ್ಯವನ್ನು ಅಶ್ಲೀಲವೆಂದು ದೆಹಲಿಯ ಯುವ ಜನತೆ ವಿರೋಧಿಸಿ ಅವನ ಕಾರ್ಯಕ್ರಮವನ್ನೇ ರದ್ದುಗೊಳಿಸಿದ್ದು ಗೊತ್ತೇ ಇದೆ. ಜಾಹೀರಾತು ಲೋಕವೂ ಇದಕ್ಕೆ ಹೊರತಿಲ್ಲ. ಝಂಡು ಬಾಂಬ್ ದಿಂದ ಕಾಂಡೊಮ್ ವರೆಗೆ, ಇಂಜಿನ್ ಆಯಿಲ್ ದಿಂದ ಸ್ಯಾನಿಟರಿ ನ್ಯಾಪಕಿನ್ ವರೆಗೂ, ಶೇವಿಂಗ್ ಬ್ಲೇಡನಿಂದ ಅಂಡರ್ವೇರ್ ವರೆಗೂ ತಮ್ಮ ಜಾಹಿರಾತುಗಳ ಮೂಲಕ ಸ್ತ್ರೀಯನ್ನು ಮಾರುಕಟ್ಟೆಯಾಗಿ ಬಳಸಿಕೊಳ್ಳುವ ಸಂಸ್ಕೃತಿಯನ್ನೂ ಸೆನ್ಸಾರ್ ಬೋರ್ಡ್ ಒಂದು ಬಿಗಿ ನೀತಿಯಡಿ ತರಬೇಕು. ಸಿನೆಮಾಗಳಲ್ಲಿ ಕ್ರೌರ್ಯವನ್ನು ಬಿಂಬಿಸುವ 'ರೇಪ್' ಟೆಕ್ನಿಕ್ ಇನ್ನು ಮುಂದಾದರೂ ಬದಲಾಗಬೇಕು. ಮಹಿಳೆಯ ದೇಹದ ಸೊಬಗನ್ನೇ ಬಿಂಬಿಸುವ ಮಾರುಕಟ್ಟೆ ಸಂಸ್ಕೃತಿಗೂ ಒಂದು ಕಡಿವಾಣವಿರಲೇ ಬೇಕು. ಯುವ ಜನಾಂಗ ಮತ್ತು ಪ್ರತಿಭಟನಾಕಾರರು ಈ ಬಗ್ಗೆಯೂ ಗಮನಹರಿಸಬೇಕು.

### ಸರಳೀಕರಿಸಿದ ಹೊಸ ಕ್ರಿಮಿನಲ್ ಕಾನೂನುಗಳು (ತಿದ್ದುಪಡಿ) ಕಾಯಿದೆ

**ಹೊಸ ಕ್ರಿಮಿನಲ್ ಕಾನೂನು ತಿದ್ದುಪಡಿಯ ಪ್ರಕಾರ ಐದು ವರ್ಷದ ಗುಡಿಯಾಳ ಅತ್ಯಾಚಾರದ ದೂರನ್ನು ನೋಂದಾಯಿಸಲು ನಿರಾಕರಿಸಿದ ದೆಹಲಿ ಪೊಲೀಸ್ ಅಧಿಕಾರಿಗಳು ಸಹ ತಪ್ಪಿತಸ್ಥರು ಹಾಗೂ ಹೊಸ ಅತ್ಯಾಚಾರ ವಿರೋಧಿ ಕಾನೂನು ಪ್ರಕಾರ ತಪ್ಪಿತಸ್ಥ ಪೋಲಿಸರಿಗೆ ಎರಡು ವರ್ಷಗಳ ಕಾಲ ಜೈಲುವಾಸವಾಗಬಹುದು. ಕ್ರಿಮಿನಲ್ ಕಾನೂನುಗಳು (ತಿದ್ದುಪಡಿ) ಕಾಯಿದೆಯನ್ನು ಎಪ್ರಿಲ್ ಒಂದರಂದು ಅಂಗೀಕರಿಸಲಾಗಿದೆ. ಕ್ರಿಮಿನಲ್ ಪಿನಲ್ ಕೋಡ್ ವಿಭಾಗದ 197 Cr.PC ಅಂಶವನ್ನು ಮತ್ತಷ್ಟು ಸರಳೀಕರಿಸಿ ಮಹಿಳೆಯರ ವಿರುದ್ಧ ದಾಳಿ ಮತ್ತು ಲೈಂಗಿಕ ಹಿಂಸೆ, ಯಾವುದೇ ಅಪರಾಧ, ಆರೋಪ ಸಾರ್ವಜನಿಕ ಸಂದರ್ಭದಲ್ಲಿ ಘಟಿಸಿದಾಗ ಅಪರಾಧದ ದಾಖಲೆಗೆ ಯಾವುದೇ ವಿವರಣೆಯ ಹಾಗೂ ಸಮ್ಮತಿಯ ಅಗತ್ಯವಿಲ್ಲ ಎಂದು ಘೋಷಿಸುತ್ತದೆ.**

ಒಟ್ಟಾರೆ ಭಾರತೀಯ ಸಮಾಜದ ಧೋರಣೆ ಬದಲಾಗಬೇಕು. ಮಹಿಳೆಯರ ಪ್ರತಿ ಪುರುಷರ ಮನೋವೃತ್ತಿ, ಸಮಾಜದ ಮನೋವೃತ್ತಿ ಬದಲಾಗಬೇಕು. ಹೆಣ್ಣು ದೇವತೆಯೆಂದು ಪೂಜಿಸುವುದು ನಮಗೆ ಬೇಕಿಲ್ಲ, ಆದರೆ ತಮ್ಮಂತೆ ಅವಳು ಸಮಾನಳು, ಅವಳೂ ಮನುಷ್ಯಳು, ಸಶಕ್ತಳು ಎಂಬ ಗೌರವವಿರಲಿ. ಅದು ಹೊರಗಡೇ ಅಲ್ಲ, ನಮ್ಮ ನಮ್ಮ ಮನೆಯೊಳಗಿಂದಲೇ ಪ್ರಾರಂಭಗೊಳ್ಳಬೇಕು. ಮನೆಯ ಮಹಿಳೆಗೆ ಗೌರವಿಸುವುದನ್ನು ಇತರರು ಪಾಲಿಸಿದರೆ ಅದನ್ನೆ ಮಕ್ಕಳು ನೋಡಿ ಕಲಿಯುತ್ತಾರೆ. ಅಪರಾಧ, ಅನೈತಿಕತೆ, ಅನಾಚಾರ ತುಂಬಿ ತುಳುಕುತ್ತಿರುವ ದೆಹಲಿಯಂತ ಮಹಾನಗರದಲ್ಲಿ ಚಿಕ್ಕ ಮಕ್ಕಳನ್ನು ಆಡಲು ಬಿಡುವುದೂ ಭಯಹುಟ್ಟಿಸುತ್ತಿದೆ. ನಿರ್ಭೀತ ವಾತಾವರಣದಲ್ಲಿ ಬೆಳೆಯಬೇಕಾದ ಮಕ್ಕಳನ್ನು ಹೇಗೆ ಹಿಡಿದಿಡಬಹುದು? ಇನ್ನು ಹದಿವಯಸ್ಸಿನ ಮಕ್ಕಳ ಬಗ್ಗೆ ಹೇಳಬೇಕೆಂದರೆ ನಮ್ಮ ಮಕ್ಕಳ ಗೆಳೆಯ –ಗೆಳತಿಯರು ಯಾರು? ಅವರು ಹೊರಗೆ ಹೋದರೆ ಎಲ್ಲಿ ಹೋಗುತ್ತಾರೆ? ಅವರ ವಲಯ ಎಂಥದ್ದು ಎಂಬುದರ ಕಡೆಗೆ ಪೋಷಕರು ಗಮನ ನೀಡಿದರೆ ಏನೂ ತಪ್ಪಿಲ್ಲ. ಅವು ನಮ್ಮ ಬದುಕಿನ ನಾಳೆಗಳು. ಅವನ್ನು ರೂಪಿಸಬೇಕಾದವರು ನಾವೇ. ನನ್ನ ವಿಚಾರದಲ್ಲಿ ಹೆಣ್ಣು ಮಕ್ಕಳಷ್ಟೇ ಗಂಡು ಮಕ್ಕಳನ್ನೂ ಸರಿಯಾದ ಮಾರ್ಗದರ್ಶನ ನೀಡಿ ಬೆಳೆಸುವುದರ ಅಗತ್ಯವಿದೆ. ನನ್ನೊಬ್ಬ ಮಾಧ್ಯಮ ಗೆಳೆಯ ಹೇಳುತ್ತಿದ್ದ, ಗಂಡಸಿಗೆ ಮದುವೆಯಾಗುವವರೆಗೂ ಹೆಣ್ಣಿನ ದೇಹದ ಸೂಕ್ಷ್ಮತೆ, ದೈಹಿಕ ಹಾಗೂ ಮಾನಸಿಕ ನೋವು– ನಲಿವುಗಳ ಬಗ್ಗೆ ಅರಿವೆಯೇ ಇರುವುದಿಲ್ಲ. ಅಲ್ಲಿವರೆಗೆ ಆತನ ಕಲ್ಪನೆಯಲ್ಲಿನ ಹೆಣ್ಣು ಟಿ ವಿ ಜಾಹಿರಾತು, ಧಾರಾವಾಹಿ, ಸಿನೇಮಾಗಳಲ್ಲಿ ಕಾಣುವ ಸೊಬಗಿ, ರೂಪಸಿಯಷ್ಟೇ ಆಗಿರುತ್ತಾಳೆ. ಇಂದಿನ ಮಹಾನಗರದ ಹುಡಿಗಿಯರ ಮನೋವೃತ್ತಿಯೂ ಬದಲಾಗಬೇಕು. ತಾವೆಷ್ಟೇ 'ಬಿಂದಾಸ್' 'ಕೂಲ್' ಅಂದುಕೊಂಡರೂ ತಮಗಿರುವ ಸ್ವಾತಂತ್ರ್ಯವನ್ನು ಸ್ವೇಚ್ಛೆ ಎಂದು ಭಾವಿಸದೇ ತಮ್ಮ ಸುರಕ್ಷತೆಗೆ ಏನೆಲ್ಲ ಎಚ್ಚರಿಕೆಯನ್ನು ಕೈಗೊಳ್ಳಬೇಕೋ ಅದೆಲ್ಲವನ್ನೂ ತಾವೇ ಗಮನದಲ್ಲಿಟ್ಟುಕೊಳ್ಳಬೇಕು. ಫೇಸ್ಬುಕ್ಕು, ಅಂತರ್ಜಾಲದ ಗೆಳೆತನದಲ್ಲಿ ಹೆಚ್ಚಿನ ಎಚ್ಚರಿಕೆ, ಖಾಸಗೀತನವನ್ನು ಕಾಪಾಡಿಕೊಳ್ಳಬೇಕು. ಆಕೆ ತನ್ನ ಸುತ್ತಲೂ ಒಂದು ತನ್ನ ಖಾಸಗೀತನದ ಚೌಕಟ್ಟನ್ನು ನಿರ್ಮಿಸಿಕೊಂಡು ಅದನ್ನು ಯಾರೂ ಅತಿಕ್ರಮಿಸದಂತೆ ಎಚ್ಚರಿಕೆಯಲ್ಲಿರುವ ಅಗತ್ಯ ಹಿಂದಿಗಿಂತಲೂ ಇಂದು ಜಾಸ್ತಿ ಇದೆ. ಕಾನೂನು ಪರಿವರ್ತನೆಯೂ ಆಗಲಿ, ಆದರೆ ಭಾವೋದ್ವೇಗದಲ್ಲಿ ಯಾವುದೇ ಕಾನೂನು ಸುಧಾರಣೆಯನ್ನು ಕೈಗೊಳ್ಳದೇ ನಮ್ಮ ಮುಂದಿನ ತಲೆಮಾರಿನ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಕಾನೂನು ಸುಧಾರಣೆಯನ್ನು ಸರಕಾರ ಬೇಗ ರೂಪಿಸಲೆಂದು ಆಶಿಸೋಣ.

❑ ರೇಣುಕಾ ನಿಡಗುಂದಿ


# Saujanya Printing Press

A HOUSE OF QUALITY PRINTING

C-95, Okhla Industrial Area, Phase-I
New Delhi-110020
Tel: 40520770
Mobile : 9811104398, 9811604398
E-mail : saujanyapp2010@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ


ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

# ಬಸವಧರ್ಮದ ವಿಶ್ವಸಂದೇಶ



ಬಸವಣ್ಣನವರು ಇಡೀ ವಿಶ್ವವನ್ನೇ ಜಂಗಮಲಿಂಗವಾಗಿ ಕಂಡರು. ಮಾನವನ ಒಳ ವಿಶ್ವದ ಚೈತನ್ಯದೊಡನೆ ಹೊರ ವಿಶ್ವವನ್ನು ಒಂದಾಗಿಸಿ ಇಷ್ಟಲಿಂಗವನ್ನು ಸೃಷ್ಟಿಸಿದರು. ಆದ್ದರಿಂದ ಜಂಗಮಲಿಂಗದ ಅರಿವಿಲ್ಲದೆ ಇಷ್ಟಲಿಂಗದ ಅರಿವು ಆಗದು. ಹೀಗೆ ಬಸವಣ್ಣನವರು ವ್ಯಷ್ಟಿ ಮತ್ತು ಸಮಷ್ಟಿಯ ಮಧ್ಯೆ ಅದ್ವೈತವನ್ನು ಸಾಧಿಸಿದರು. ಧರ್ಮವೆಂಬುದು ಸಾಮಾಜಿಕ ಜವಾಬ್ದಾರಿಯಿಂದ ಕೂಡಿದ ಆಂತರಿಕ ವಿಚಾರವೆಂಬ ನವಸಿದ್ಧಾಂತವನ್ನೇ ಮಂಡಿಸಿದರು. ನಾವು ಲೋಕದ ಆರಾಧನೆ ಮಾಡಿದಷ್ಟೂ ದೇವರಿಗೆ ಹತ್ತಿರದವರಾಗುತ್ತೇವೆ ಎಂದು ಸಾರಿದರು. ವಿಶ್ವಮಾನವರಾಗದೆ ಬಸವಧರ್ಮವನ್ನು ಆಚರಿಸಲಿಕ್ಕಾಗದು. ಬಸವಣ್ಣನವರ ಭಕ್ತಿಭಾವವು ಸರ್ವಸಮತಾ ಭಾವವೇ ಆಗಿದೆ. ಮಾನವನ ಅಹಂಕಾರವು ಎಲ್ಲ ರೀತಿಯ ಸಮತಾಭಾವಕ್ಕೆ ಅಡ್ಡಿ ಮಾಡುವಂಥದ್ದು. ಆದ್ದರಿಂದ ಸಮಾನತೆಯ ಪ್ರತಿಪಾದಕರು ಅಹಂಕಾರದಿಂದ ಹೊರಬರಬೇಕಾಗುತ್ತದೆ. ಜೀವನ ಪ್ರೀತಿಯನ್ನು ಹೊಂದಬೇಕಾಗುತ್ತದೆ. ಜಾತಿ, ಮತ, ಪಂಥ ಮತ್ತು ಕುಲಮದದಿಂದ ಹೊರಬರಬೇಕಾಗುತ್ತದೆ. ನಮ್ಮಲ್ಲಿರುವ ಸಂಪತ್ತನ್ನು ದೇವರ ಸೊತ್ತು ಎಂದು ಭಾವಿಸಿ ಲೋಕಕಲ್ಯಾಣಕ್ಕಾಗಿ ಬಳಸಬೇಕಾಗುತ್ತದೆ. ಬಡವ-ಶ್ರೀಮಂತ, ಹೆಣ್ಣು-ಗಂಡು, ಮೇಲು-ಕೀಳು ಎಂಬ ಭೇದಭಾವವನ್ನು ತೊರೆದು ಎಲ್ಲರ ಬಗ್ಗೆ ಸಮಭಾವವನ್ನು ತಾಳಬೇಕಾಗುತ್ತದೆ. ಇಡೀ ಸೃಷ್ಟಿಯು ಸೃಷ್ಟಿಕರ್ತನದೇ ಆಗಿರುವುದರಿಂದ ನಾವು ಈ ಲೋಕದಲ್ಲಿನ ಸಂಪತ್ತಿನ ಮೇಲೆ ನಮ್ಮ ವೈಯಕ್ತಿಕ ಹಕ್ಕು ಇದೆ ಎಂದು ಪ್ರತಿಪಾದಿಸದೆ ಅದರ ಮೇಲೆ ಪ್ರತಿಯೊಬ್ಬರ ಹಕ್ಕಿದೆ ಎಂಬ ಮೂಲ ಸತ್ಯವನ್ನು ಅರಿಯಬೇಕಾಗುತ್ತದೆ.

ಪ್ರತಿಯೊಬ್ಬರ ಹಕ್ಕು ಎಂದರೆ ಇನ್ನು ಮುಂದೆ ಈ ಲೋಕದಲ್ಲಿ ಜನಿಸುವವರ ಹಕ್ಕನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಲೋಕದಲ್ಲಿ ಅತಿಥಿಯಂತೆ ಇದ್ದು ಹೋಗಬೇಕಾಗುತ್ತದೆ. ಲೋಕಸೇವೆ ಮಾಡುವುದರ ಮೂಲಕ ಲೋಕದ ಋಣವನ್ನು ತೀರಿಸಬೇಕಾಗುತ್ತದೆ. ಅದನ್ನೇ ದೇವರ ಸೇವೆ ಎಂದು ಭಾವಿಸಬೇಕಾಗುತ್ತದೆ. ಮನುಷ್ಯ ಹೀಗೆ ಈ ಲೋಕದಲ್ಲಿ ಜೀವನ ಸಾಗಿಸಿದರೆ ದೇಶ ದೇಶಗಳ ಮಧ್ಯೆ ಯುದ್ಧಗಳಾಗುವುದಿಲ್ಲ. ಯಾರೂ ಅಪಮಾನಕ್ಕೊಳಗಾಗುವುದಿಲ್ಲ. ಯಾವ ಮಹಿಳೆಯ ಮೇಲೂ ಅತ್ಯಾಚಾರವಾಗುವುದಿಲ್ಲ. ಬಾಲ ಕಾರ್ಮಿಕರು ಇರುವುದಿಲ್ಲ. ವೇಶ್ಯಾವಾಟಿಕೆಗಳಿರುವುದಿಲ್ಲ. ಅಹಿಂಸೆಯು ಬದುಕಿನ ತಳಹದಿಯಾಗುವುದು. ಆತ್ಮಗೌರವ ಮತ್ತು ಪರಸ್ಪರ ಗೌರವ ಭಾವಗಳೊಂದಿಗೆ ಬದುಕು ಸುಂದರವಾಗುವುದು. ಆತ್ಮಾನಂದ ಮತ್ತು ಲೋಕಾನಂದದ ಮಧ್ಯೆ ಭೇದವಿರದು. ಕಾಯಕ ಮತ್ತು ದಾಸೋಹದ ಮೂಲಕ ಈ ಜಗತ್ತು ಹೆಚ್ಚು ಹೆಚ್ಚು ಸುಂದರವಾಗುತ್ತ ಸಾಗುವುದು. ಕಲ್ಪನೆಯ ಸ್ವರ್ಗ ಈ ಭೂಮಿಯ ಮೇಲೆ ವಾಸ್ತವದ ರೂಪ ತಾಳುವುದು. ಆಗ ಮಾನವ ಸದ್ಗುಣಗಳ ಆಗರವಾಗಿ, ಲೋಕವೇ ತಾನಾಗಿ ಬದುಕುವನು. ಹೀಗೆ ಬದುಕುವ ಮಾನವನೇ ನಿಜ ಮಾನವನು; ಇಡೀ ವಿಶ್ವಕ್ಕೆ ಒಬ್ಬನೇ ಇರುವ ಪರಮಾತ್ಮನಿಗೆ ಶರಣು ಹೋದವನು. ಅವನೇ ಶರಣ. ಇಂಥ ಶರಣ ಸಮಾನತೆಯ ಸಾಕಾರ ಮೂರ್ತಿಯಾಗಿರುವಂಥವನು. ಆತನ ದೃಷ್ಟಿಯಲ್ಲಿ ಯಾರೂ ಮೇಲಿನವರಲ್ಲ, ಯಾರೂ ಕೆಳಗಿನವರಲ್ಲ. ಆತ ಅಹಂಕಾರದಿಂದ ಮುಕ್ತನಾಗಿ ಸ್ವತಂತ್ರಧೀರನಾಗಿರುವಂಥವನು. ಅವನ ರೋಮರೋಮಗಳು ಅಂತಃಕರಣವನ್ನೇ ಜಪಿಸುತ್ತಿರುತ್ತವೆ.

ಮನುಷ್ಯನನ್ನು ಹೀಗೆ ಅತ್ಯುನ್ನತಮಟ್ಟಕ್ಕೆ ಒಯ್ಯುವ ಧರ್ಮವೇ ಬಸವಧರ್ಮ. ವಿಶ್ವದ ಎಲ್ಲ ಮಾನವೀಯ ಧರ್ಮಗಳ ಜೊತೆ ಹಾಲು ಸಕ್ಕರೆ ಬೆರೆತಂತೆ ಬೆರೆತುಹೋಗುವಂಥದ್ದು. ಅಮಾನವೀಯವಾದ ವರ್ಣಭೇದ, ವರ್ಗಭೇದ, ಜಾತಿಭೇದ ಮತ್ತು ಲಿಂಗಭೇದವನ್ನು ಪ್ರತಿಪಾದಿಸುವ ಧರ್ಮಗಳಿಗೆ ಬೆಂಕಿಯ ಸ್ವರೂಪದಲ್ಲೂ ಭೇದವನ್ನು ವಿರೋಧಿಸುವ ಧರ್ಮಗಳ ಜೊತೆ ಬೆಳಕಿನ ಸ್ವರೂಪದಲ್ಲೂ ಇರುವಂಥದ್ದು. ಈ ವಿಶ್ವದಲ್ಲಿ ತುಂಬಿ ತುಳುಕುತ್ತಿರುವ ಅಜ್ಞಾನದ ಅಂಧಃಕಾರದಿಂದಾಗಿ ಜನ ಸಾವು ನೋವಿನ ನರಕಯಾತನೆಯನ್ನು ಅನುಭವಿಸುತ್ತಿದ್ದಾರೆ. ಎಲ್ಲಿ ನೋಡಿದಲ್ಲೆಲ್ಲ ಹಾಹಾಕಾರವೇ ಕಂಡುಬರುತ್ತಿದೆ. ನಾವು ಅಜ್ಞಾನದ ಅಂಧಕಾರವನ್ನು ಭೇದಿಸುತ್ತ ಮುನ್ನಡೆಯಬೇಕಾದರೆ ಬಸವ ಬೆಳಕನ್ನು ನಮ್ಮ ಪ್ರಜ್ಞೆ ಮತ್ತು ಭಾವದಲ್ಲಿ ತುಂಬಿಕೊಳ್ಳಬೇಕಾಗುತ್ತದೆ. ಭೇದಭಾವವಿಲ್ಲದ, ಸುಲಿಗೆ ಇಲ್ಲದ ಮತ್ತು ಯಾವುದೇ ತೆರನಾದ ದ್ವೇಷವಿಲ್ಲದ ಜಗತ್ತನ್ನು ಸೃಷ್ಟಿಸಬೇಕಾಗುತ್ತದೆ. ಬಸವಧರ್ಮವು ಇಂಥ ಒಂದು ಸುಂದರ ಜಗತ್ತನ್ನು ಸೃಷ್ಟಿಸುವ ವಿಶ್ವಧರ್ಮವಾಗಿದೆ. ಬಸವ ಧರ್ಮದ ಸಂದೇಶವು ಭಗವಾನ ಬುದ್ಧ, ಏಸು, ಪೈಗಂಬರ ಮುಂತಾದ ದಾರ್ಶನಿಕರು ಮತ್ತು ಪ್ರವಾದಿಗಳು ಸಾರಿದ ಸಂದೇಶದ ತಿರುಳೇ ಆಗಿದೆ. ಹೀಗೆ ನಾವು ಬಸವ ಬೆಳಕಿನೊಂದಿಗೆ ವಿಶ್ವದ ಎಲ್ಲ ಜನಾಂಗಗಳ ಜೊತೆ ಒಂದಾಗುತ್ತ ಜಂಗಮಲಿಂಗವನ್ನು ಅರಿಯಬೇಕಾಗಿದೆ. ಅನುಪಮ ಆನಂದವನ್ನು ಅನುಭವಿಸಬೇಕಾಗಿದೆ.

"ಕುಲಮದಕ್ಕೆ ಹೋರಿ ಜಂಗಮಭೇದವ ಮಾಡುವೆ, ಫಲವೇನು?
ನಿತ್ಯಲಿಂಗಾರ್ಚನೆ ಪ್ರಾಯಶ್ಚಿತ್ತ.
ಛಲಮದಕ್ಕೆ ಹೋರಿ ಲಿಂಗಭೇದವ ಮಾಡುವೆ;
ಜಂಗುಳಿಯ ಕಾವ ಗೋವ ಹಲವು ಪಶುವ ನಿವಾರಿಸುವಂತೆ
ತನು ಭಕ್ತನಾಯಿತ್ತು, ಎನ್ನ ಮನ ಭವಿ
ಕೂಡಲಸಂಗಮದೇವಾ."

ವಿಭೂತಿ, ರುದ್ರಾಕ್ಷಿ ಮತ್ತು ಇಷ್ಟಲಿಂಗ ಧರಿಸುವುದರಿಂದ ನಮ್ಮ ತನು ಭಕ್ತನಾಗಬಹುದು. ಆದರೆ ಮನಸ್ಸು ಭಕ್ತನಾಗುವುದಿಲ್ಲ. ಅದು ಭವಿಯಾಗಿಯೇ ಉಳಿಯುವುದು. ಐಹಿಕ ವಸ್ತುಗಳ ವ್ಯಾಮೋಹದಲ್ಲಿ ಬದುಕು ಸವೆಸುವವನೇ ಭವಿ. ಅದರಿಂದ ಹೊರಬಂದು ವಿಶ್ವಪ್ರೇಮವನ್ನು ಸಾರುವವನೇ ಭಕ್ತ. ಬಸವಣ್ಣನವರು ಇಂಥ ಭಕ್ತರಾಗಿದ್ದರು. ಇಂಥ ವಿಶ್ವಪ್ರೇಮದ ಅರಿವಿನಿಂದಾಗಿ ಲೋಕದ ಗುರುವಾದರು. ಸತ್ಯದ ನಿಲವನ್ನು ಅರಿತು ಶರಣರಾದರು. ಲೋಕವೇ ತಾವಾಗಿ ಜಂಗಮವಾದರು. ಅವರು ಹೀಗೆ ಬೆಳೆಯುತ್ತ ಬೆಳೆಯುತ್ತ ಲಿಂಗಸ್ವರೂಪರಾದರು.

ಇದನ್ನೆಲ್ಲ ಸಾಧಿಸಬೇಕಾದರೆ ಮಾನವ ಎಲ್ಲ ರೀತಿಯ ಅಹಂಕಾರದಿಂದ ಹೊರಬರಬೇಕು. ಪ್ರತಿಯೊಂದಕ್ಕೂ 'ನಾನು' ಎನ್ನುವವರಿಗಿಂತ ಕಿರಿಯರು ಯಾರೂ ಇಲ್ಲ. 'ನಾನು' ಎಂಬುದನ್ನು ಅರಿಯದ ಶಿವಭಕ್ತರಿಗಿಂತ ಹಿರಿಯರು ಯಾರೂ ಇಲ್ಲ.

"ಎನ್ನಿಂದ ಕಿರಿಯರಿಲ್ಲ, ಶಿವಭಕ್ತರಿಂದ ಹಿರಿಯರಿಲ್ಲ.
ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ.
ಕೂಡಲಸಂಗಮದೇವಾ ಎನಗಿದೇ ದಿಬ್ಯ."

ಎಂಬ ಭಕ್ತಿ ಭಾವವನ್ನು ಹೊಂದಬೇಕಾದರೆ ಎಲ್ಲ ಕಾಯಕಜೀವಿಗಳ ಅನುಭವವನ್ನು ತನ್ನದಾಗಿಸಿಕೊಳ್ಳಬೇಕಾಗುತ್ತದೆ. ಇಂಥ ಅನುಭವವು ಅನುಭಾವಕ್ಕೆ ನಾಂದಿಯಾಗುತ್ತದೆ. ಎಲ್ಲ ಐಹಿಕ ಆಸೆಗಳಿಂದ ಹೊರಬಂದ ಭಕ್ತನು ಸದಾ ಸ್ವಾನುಭವ ಮತ್ತು ಲೋಕಾನುಭವಗಳನ್ನು ಒಂದಾಗಿಸಿ ಅನುಭಾವವನ್ನು ಸಾಧಿಸುವುದರಲ್ಲಿಯೇ ತಲ್ಲೀನನಾಗಿರುತ್ತಾನೆ.

"ಭಕ್ತಿ ಇಲ್ಲದ ಬಡವ ನಾನಯ್ಯ
ಕಕ್ಕಯ್ಯನ ಮನೆಯಲ್ಲೂ ಬೇಡಿದೆ,
ಚೆನ್ನಯ್ಯನ ಮನೆಯಲ್ಲೂ ಬೇಡಿದೆ,
ದಾಸಯ್ಯನ ಮನೆಯಲ್ಲೂ ಬೇಡಿದೆ,
ಎಲ್ಲಾ ಪುರಾತರು ನೆರೆದು ಭಕ್ತಿಭಿಕ್ಷವನಿಕ್ಕಿದೆಡೆ
ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವಾ."

ಬಸವಣ್ಣನವರು ಅನುಭಾವದ ಜಗತ್ತನ್ನು ಅನುಭವದ ಜಗತ್ತಿನ ಮೂಲಕವೇ ನೋಡಿದರು. ಚೈತನ್ಯ ಮತ್ತು ವಸ್ತು ಅಭೇದ್ಯವಾಗಿವೆ ಎಂಬುದನ್ನು ಅವರು ಅರಿತುಕೊಂಡಿದ್ದರು. ಆ ಮೂಲಕ ವ್ಯಕ್ತಿ ಮತ್ತು ಸಮಾಜದ ಸಂಬಂಧವನ್ನು ತೋರಿಸಿಕೊಟ್ಟರು. ವ್ಯಕ್ತಿ ಮತ್ತು ಸಮಾಜದ ಸಂಬಂಧವೆಂಬುದು ಪ್ರಾಣ ಮತ್ತು ದೇಹಗಳ ಸಂಬಂಧದಂತೆ ಎಂಬುದನ್ನು ಮನವರಿಕೆ ಮಾಡಿಕೊಟ್ಟರು.

"ಎಡದ ಕೈಯಲಿ ನಿಗಳವನಿಕ್ಕೆ
ಬಲದ ಕೈಯ ಕಡಿದುಕೊಂಡಡೆ ನೋಯದಿಪ್ಪುದೆ?
ಪ್ರಾಣವೊಂದಾಗಿ ದೇಹ ಬೇರಿಲ್ಲ.
ಲಿಂಗವ ಪೂಜಿಸಿ ಜಂಗಮನುದಾಸೀನವ ಮಾಡಿದಡೆ
ಬೆಂದೆನಯ್ಯಾ ನಾನು, ಕೂಡಲಸಂಗಮದೇವಾ."

ಎಂದು ಬಸವಣ್ಣನವರು ಹೇಳುವಲ್ಲಿ ಹೊರಲೋಕದ ಅನುಭವ ಮತ್ತು ಒಳಲೋಕದ ಅನುಭಾವದ ಘನಸಂಬಂಧದ ಪರಿಕಲ್ಪನೆ ಕೊಡುತ್ತಾರೆ. ಮಾನವನ ಐಹಿಕ ಬದುಕಿನ ಅನುಭವದ ಜಗತ್ತನ್ನು ಕಡೆಗಣಿಸದೆ ಅದರೊಳಗೆ ಅನುಭಾವದ ಸಾಗರವನ್ನು ಸೃಷ್ಟಿಸುವುದರಲ್ಲಿ ಬಸವಣ್ಣನವರು ತಲ್ಲೀನರಾಗಿದ್ದರು. ಈ ಅನುಭವದ ಜಗತ್ತನ್ನು ಎಲ್ಲ ಕಾಯಕಜೀವಿಗಳು ಕೂಡಿ ಸೃಷ್ಟಿಸುತ್ತಾರೆ. ದುಡಿಯುವವರಿಲ್ಲದೆ ಈ ಜಗತ್ತು ಬರಡಾಗುತ್ತದೆ ಎಂಬುದನ್ನು ಬಸವಣ್ಣನವರು ಸೂಚಿಸಿದ್ದಾರೆ. ಇಂಥ ಕಾಯಕಜೀವಿಗಳಿಗಾಗಿ ಅವರು ಸರಳ ಧರ್ಮವನ್ನು ಕೊಟ್ಟರು. ಆ ಮೂಲಕ ಕಾಯಕಜೀವಿಗಳು ಮತ್ತು ಒಟ್ಟಾರೆ ಲೋಕದ ಜನರು ಎಲ್ಲ ರೀತಿಯ ಮೂಢನಂಬಿಕೆ ಮತ್ತು ಹಿಂಸಾರಾಧನೆಯಿಂದ ಹೊರಬರಬೇಕು. ಯಾವುದೇ ರೀತಿಯಲ್ಲಿ ಹಣವನ್ನು ವ್ಯಯಿಸದೆ, ಮೂಢನಂಬಿಕೆಗೆ ಶರಣಾಗದೆ, ನರಬಲಿ, ಪ್ರಾಣಿಬಲಿ ಕೊಟ್ಟು ದೇವರನ್ನು ಒಲಿಸಿಕೊಳ್ಳುವ ಭ್ರಮೆಗೆ ಒಳಗಾಗದೆ ಸರಳ ಸಹಜವಾಗಿ ದೇವರ ಆರಾಧನೆ ಮಾಡುತ್ತ ಲೋಕದ ಮಾನವರಲ್ಲಿ ಏಕತೆಯನ್ನು ಸಾಧಿಸಬೇಕು ಎಂಬ ಕನಸನ್ನು ಬಸವಣ್ಣನವರು ಕಂಡಿದ್ದರು.

"ಲಿಂಗದಲ್ಲಿ ಕಠಿಣವುಂಟೆ? ಜಂಗಮದಲ್ಲಿ ಕುಲವುಂಟೆ? ಪ್ರಸಾದದಲ್ಲಿ ಅರುಚಿಯುಂಟೆ?" ಎಂದು ಬಸವಣ್ಣನವರು ಪ್ರಶ್ನಿಸುವಲ್ಲಿ ಮೇಲೆ ತಿಳಿಸಿದ ಧೋರಣೆಯನ್ನೇ ತಾಳಿದ್ದಾರೆ. ಲೋಕದ ಮಾನವರು ಒಂದಾಗುವವರೆಗೆ ಈ ಜಗತ್ತಿನಲ್ಲಿ ಅಶಾಂತಿ ಎಂಬುದು ಇರುತ್ತದೆ. ಸಮೂಹ ಬಿಟ್ಟು ಬದುಕಲಿಕ್ಕಾಗದು. ಸಮೂಹ ಬಿಟ್ಟರೆ ನಮಗೆ ಅಸ್ತಿತ್ವವೇ ಇಲ್ಲ.

"ಜಲ ತಪ್ಪಿದ ಮತ್ಸ್ಯ ಬದುಕೂದೇ ಸೋಜಿಗ
ಗಣತಿಂಥಿಣಿಯೊಳಗಿರಿಸೆನ್ನ ಲಿಂಗವೆ.
ಶಿವಶಿವಾ ಕೂಡಲಸಂಗಮದೇವಾ,
ಸೆರಗೊಡ್ಡಿ ಬೇಡುವೆನು."

ಎಂದು ಬಸವಣ್ಣನವರು ನಮ್ಮ ಬದುಕಿನಲ್ಲಿ ಜನಸಮುದಾಯದ ಮಹತ್ತ್ವವನ್ನು ಸಾರಿದ್ದಾರೆ. ವಿಶ್ವಧರ್ಮವಾದ ಬಸವಧರ್ಮದ ಬಹುದೊಡ್ಡ ಸಂದೇಶ ಇದಾಗಿದೆ. ಇಂಥ ಸಮಾಜವೇ ದೈವವಾಗುವುದು. ವ್ಯಕ್ತಿಯ ಬಳಿ ಇರುವ ಸೊತ್ತಿನ ಮೇಲೆ ಸಮಾಜವೆಂಬ ದೈವದ ಹಕ್ಕು ಇರುವುದು. ಇದೇ ಜಂಗಮಲಿಂಗ. ಎಲ್ಲರ ವೈಯಕ್ತಿಕ ಆಸ್ತಿಯ ಮೇಲೆ ಈ ಜಂಗಮಲಿಂಗದ ಹಕ್ಕು ಇರುತ್ತದೆ. ಈ ಹಕ್ಕಿನಲ್ಲಿ ಎಲ್ಲ ಜನಾಂಗಗಳ ಮಾನವಹಕ್ಕುಗಳು ಸೇರಿವೆ, ದಲಿತರ, ಮಹಿಳೆಯರ, ಮಕ್ಕಳ, ಅಲ್ಪಸಂಖ್ಯಾತರ, ಬಡವರ ಹೀಗೆ ಸಕಲರ ಹಕ್ಕುಗಳು ಸೇರಿವೆ. ಎಲ್ಲರ ವಿಮೋಚನೆಯೂ ಸೇರಿದೆ. ವಿಶ್ವಧರ್ಮ ಎಂದರೆ ವಿಶ್ವದ ಎಲ್ಲರಿಗೂ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಜವಾಬ್ದಾರಿ ಮತ್ತು ಸಮಾನವಾದ ಹಕ್ಕುಗಳನ್ನು ಒದಗಿಸುವಂಥದ್ದು. ಎಲ್ಲ ಬಂಧನಗಳಿಂದ ಮುಕ್ತಗೊಳಿಸುವಂಥದ್ದು. ಎಲ್ಲರಿಗೂ ಒಬ್ಬನೇ ದೇವರು. ಪಂಚಾಮಹಾಭೂತಗಳ ಮೇಲೆ ಎಲ್ಲರ ಹಕ್ಕುಗಳು ಸಮಾನವಾಗಿವೆ. ಬಡತನ ಮತ್ತು ಶ್ರೀಮಂತಿಕೆ ಎಂಬುವು ಸ್ವಾರ್ಥ ವ್ಯವಸ್ಥೆಯಿಂದ ಹುಟ್ಟಿಕೊಂಡಿವೆ. ಕೃತ್ರಿಮವಾಗಿವೆ. ಪುರುಷರ ದಬ್ಬಾಳಿಕೆಯಿಂದಾಗಿ ಮಹಿಳೆಯರ ಹಕ್ಕುಗಳು ಘಾಸಿಗೊಂಡಿವೆ ಹೊರತಾಗಿ ನಿಜವಾದ ಧರ್ಮದ ಕಾರಣದಿಂದಲ್ಲ. ನೋವು, ಅಪಮಾನ ಮತ್ತು ಹಿಂಸೆ ಧರ್ಮಬಾಹಿರ. ಹೀಗೆ ಸಂದೇಶ ಸಾರುವ ಧರ್ಮವೇ ವಿಶ್ವಧರ್ಮ. ಬಸವಧರ್ಮದ ವಿಶ್ವಸಂದೇಶದಲ್ಲಿ ಎಲ್ಲ ಮಾನವರ ಆತ್ಮಗೌರವದ ಬಗ್ಗೆ ಕಾಳಜಿ ಇದೆ. ಎಲ್ಲ ಜೀವಗಳು ಭೌತಿಕವಾಗಿ ಕೂಡ ಸುಖವಾಗಿ ಬದುಕಬೇಕೆಂಬ ಕಳಕಳಿ ಇದೆ. ಅದಕ್ಕಾಗಿ ಸಮಾನವಾಗಿ ಸಂಪತ್ತಿನ ಹಂಚಿಕೆಯಾಗಬೇಕು. ಶ್ರೀಮಂತರು ತಮ್ಮಲ್ಲಿನ ಸಂಪತ್ತಿನ ಒಡೆಯ ಜಂಗಮಲಿಂಗ ಎಂದು ಭಾವಿಸಬೇಕು. "ಒಡೆಯರಿಗೆ ಒಡವೆಯನೊಪ್ಪಿಸಲಾರದೆ ಮೊರೆಯಿಡುವ ಮನವ ನಾನೇನೆಂಬೆ?" ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ.

ಜಗತ್ತಿನಲ್ಲಿ ಯಾವುದೇ ಕಾಯಕ ದೊಡ್ಡದಲ್ಲ ಅಥವಾ ಚಿಕ್ಕದಲ್ಲ ಎಂಬುದು ಬಸವಧರ್ಮದ ಮಹಾನ್ ಸಂದೇಶವಾಗಿದೆ. ಮಾನವರು ತಾವು ಮಾಡುವ ಕಾಯಕದಲ್ಲಿ ಇಹ ಪರಗಳಿಗೆ ಸಂಬಂಧಿಸಿದ ತತ್ತ್ವದ ಸಾಕ್ಷಾತ್ಕಾರ ಮಾಡಿಕೊಂಡಾಗ ಬದುಕ್ಕಿದ್ದು ಸಾರ್ಥಕವಾಗುವುದು. ಕಾಯಕದ ಆನಂದವೇ ಆನಂದ. ಕಾಯಕದಲ್ಲಿ ತಲ್ಲೀನರಾದಾಗ ಮಾತ್ರ ಅದರ ಅರಿವಾಗುವುದು. ಕಾಯಕದಿಂದ ಶಾರೀರಿಕ ಮತ್ತು ಮಾನಸಿಕ ಆರೋಗ್ಯದ ವೃದ್ಧಿಯಾಗುವುದು. ಶರೀರವು ಸುಂದರವಾಗುವುದು. ಬದುಕುವ ಧೈರ್ಯ ಬರುವುದು. ಶ್ರಮದ ಆನಂದ ಕೊಳ್ಳುವಂಥದಲ್ಲ ಅದನ್ನು ಬೆವರು ಸುರಿಸೇ ಪಡೆದುಕೊಳ್ಳಬೇಕು. ಹೀಗೆ ಶ್ರಮವು ನಮ್ಮ ನಾಲಗೆ ರುಚಿಯನ್ನು ಹೆಚ್ಚಿಸುವುದು ಮತ್ತು ವಿಶ್ರಾಂತಿ ಎಂದರೆ ಏನೆಂಬುದನ್ನು ತೋರಿಸಿಕೊಡುವುದು. ಆದ್ದರಿಂದ ಬಸವಣ್ಣನವರ ದೃಷ್ಟಿಯಲ್ಲಿ ಕಾಯಕಭೇದವಿಲ್ಲ. ಅವರಿಗೆ ಪ್ರಧಾನಿಯೂ ಅಷ್ಟೆ; ಕಸಗುಡಿಸುವವರೂ ಅಷ್ಟೆ. ಎಲ್ಲರೂ ಸಮಾನರು. ತಮ್ಮ ತಮ್ಮ ಕಾಯಕದಲ್ಲಿ ನಿಷ್ಠೆ ತೋರುವವರೆಲ್ಲ ಪೂಜ್ಯರು. ಮಾದಾರ ಚೆನ್ನಯ್ಯನವರು ತಮ್ಮ ಕಾಯಕ ನಿಷ್ಠೆ ಮತ್ತು ದಾಸೋಹ ಪ್ರಜ್ಞೆಯಿಂದಾಗಿ ಬಸವಣ್ಣನವರ ದೃಷ್ಟಿಯಲ್ಲಿ ಕುಲಕ್ಕೆ ತಿಲಕರಾದರು. ಕೂಡಲಸಂಗಮದೇವರಿಗಿಂತಲೂ ಅಧಿಕರಾದರು. ಇದೇ ವಿಶ್ವದೃಷ್ಟಿ. ಇದೇ ಮಾನವ ಪ್ರೇಮ. ಸಕಲವೃತ್ತಿಗಳನ್ನು ಗೌರವಿಸುವ ರೀತಿ ಇದು. ಒಳ್ಳೆಯದನ್ನು ಗುರುತಿಸುವ ಕ್ರಮ ಇದು. ಬಸವಣ್ಣನವರು ಜಾತಿ ವಿಷವನ್ನು ದೂರ ಸರಿಸಿ ಕಾಯಕದ ಅಮೃತವನ್ನು ಕುಡಿಸಿದರು. ಆಗ ಎಲ್ಲ ಕಾಯಕಜೀವಿಗಳು ಗೌರವಾರ್ಹರಾದರು. ಕಾಯಕ ಜೀವಿಗಳೆಲ್ಲ ಜಾತಿ ಮತ್ತು ಕುಲಗಳನ್ನು ಮೀರಿ ಒಂದಾದರು. ಎಲ್ಲ ಅಂತಸ್ತುಗಳ ಭ್ರಮೆಯನ್ನು ಅಳಿಸಿ ಬದುಕಿದರು.

"ದೇವಸಹಿತ ಭಕ್ತ ಮನೆಗೆ ಬಂದಡೆ
ಕಾಯಕವಾವುದೆಂದು ಬೆಸಗೊಂಡೆನಾದಡೆ
ನಿಮ್ಮಾಣೆ! ನಿಮ್ಮ ಪುರಾತರಾಣೆ! ತಲೆದಂಡ! ತಲೆದಂಡ!
ಕೂಡಲಸಂಗಮದೇವಾ ಭಕ್ತರಲ್ಲಿ ಕುಲವನರಸಿದಡೆ
ನಿಮ್ಮ ರಾಣಿವಾಸದಾಣೆ."

ಎಂದು ಬಸವಣ್ಣನವರು ಹೇಳುವಾಗ ಎಲ್ಲ ಕಾಯಕಗಳ ಜನಸಮುದಾಯಗಳನ್ನು ಒಂದುಗೂಡಿಸುವ ಆಶಾಭಾವವಿದೆ. ಹೀಗೆ ಬಸವ ತತ್ತ್ವ ವಿಶ್ವತತ್ತ್ವವಾಗಿ ಬೆಳಗುತ್ತಲೇ ಇದೆ.

"ಮರಕ್ಕೆ ಬೇರು ಬಾಯಿಯೆಂದು ತಳಯಿಂಕೆ ನೀರನೆರೆದಡೆ
ಮೇಲೆ ಪಲ್ಲವಿಸಿತ್ತು ನೋಡಾ.
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಡೆ
ಮುಂದೆ ಸಕಳಾರ್ಥವನೀವನು.
ಆ ಜಂಗಮವ ಹರನೆಂದು ಕಂಡು, ನರನೆಂದು ಭಾವಿಸಿದಡೆ
ನರಕ ತಪ್ಪದು ಕಾಣಾ ಕೂಡಲಸಂಗಮದೇವಾ."

ಲೋಕಸೇವೆಯೆ ದೇವರ ಆರಾಧನೆ ಎಂಬುದರಲ್ಲಿ ಬಸವಣ್ಣನವರಿಗೆ ಅಚಲವಾದ ವಿಶ್ವಾಸವಿದೆ. ಈ ಲೋಕಸೇವೆಯ ಪ್ರಜ್ಞೆಯಲ್ಲಿ ಅಂತಃಕರಣವಿದೆ,

ಏಕೋಭಾವವಿದೆ, ಜಗತ್ತನ್ನು ಎಲ್ಲ ದುಃಖಗಳಿಂದ ಬಿಡುಗಡೆಗೊಳಿಸುವ ಮಾರ್ಗವಿದೆ. ಆದರೆ ಲೋಕಕಲ್ಯಾಣದ ಪಜ್ಞೆ ಬಂದರೂ ಸ್ವಾರ್ಥವೇ ಪಧಾನವಾದರೆ ಹೀನ ಬದುಕು ತಪ್ಪುವುದಿಲ್ಲ ಎಂಬ ಎಚ್ಚರಿಕೆಯನ್ನು ಬಸವಣ್ಣನವರು ನೀಡುತ್ತಾರೆ.

ಜಗತ್ತಿನ ಜನರೆಲ್ಲ ಒಂದು ಎಂಬ ಭಾವ ಮೂಡಬೇಕಾದರೆ ಅವರೆಲ್ಲರಿಗೂ ಶಾಶ್ವತನಾದ ಒಬ್ಬನೇ ದೇವರು ಎಂಬುದನ್ನು ಸಾರಬೇಕಾಗುತ್ತದೆ.

"ಸ್ವಾಮಿ ನೀನು, ಶಾಶ್ವತ ನೀನು,
ಎತ್ತಿದೆ ಬಿರಿದ ಜಗವೆಲ್ಲರಿಯಲು,
ಮಹಾದೇವ, ಮಹಾದೇವ,
ಇಲ್ಲಿಂದ ಮೇಲೆ ಶಬ್ದವಿಲ್ಲ.
ಪಶುಪತಿ ಜಗಕ್ಕೇಕೋದೇವ
ಸ್ವರ್ಗ ಮರ್ತ್ಯ ಪಾತಾಳದೊಳಗೆ
ಒಬ್ಬನೇ ದೇವ ಕೂಡಲಸಂಗಮದೇವ"

ದೇವನೊಬ್ಬ ನಾಮಹಲವು. ಜಗತ್ತಿನ ಎಲ್ಲ ದೇವರ ಹೆಸರುಗಳು ಒಬ್ಬನೇ ದೇವರಿಗೆ ಕರೆದ ಹೆಸರುಗಳಾಗಿವೆ. ದೇವರು ಬಸವಣ್ಣನವರಿಗೆ ದಯೆಯ ರೂಪದಲ್ಲಿ ಕಾಣಿಸಿದ್ದಾನೆ. ಅಂತೆಯೆ ಬಸವಣ್ಣನವರು ದಯವೇ ಧರ್ಮದ ಮೂಲವಯ್ಯಾ ಎಂದು ಹೇಳಿದ್ದಾರೆ. ಜಗತ್ತಿನ ಎಲ್ಲ ಜನಾಂಗಗಳು ತಮ್ಮ ತಮ್ಮ ದೇವರ ಹೆಸರುಗಳನ್ನು ದಯೆಗೆ ಸಮೀಕರಿಸಿ ಜೀವಕಾರುಣ್ಯದಿಂದ ಬದುಕಿದರೆ ಈ ಭೂಮಿಯೇ ಸ್ವರ್ಗವಾಗುತ್ತದೆ. ಹೀಗೆ ಭಾವಿಸಿದವರೆಲ್ಲ ಸಹಜವಾಗಿಯೇ ಶರಣರಾಗುತ್ತಾರೆ. ಇಂಥ ಶರಣರು ಛಲದಿಂದ ಬದುಕಬೇಕಾಗುತ್ತದೆ.

"ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ;
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ;
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ;
ಛಲಬೇಕು ಶರಣಂಗೆ ಲಿಂಗಜಂಗಮವನೊಂದೆಂಬ;
ಛಲಬೇಕು ಶರಣಂಗೆ ಪಸಾದ ದಿಟವೆಂಬ;
ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ."

ಮೌಲ್ಯಗಳಿಗಾಗಿ ಮಾನವರು ಸದಾ ತಮ್ಮೊಳಗೆ ಮತ್ತು ಹೊರಗೆ ಹೋರಾಟ ಮಾಡಲೇಬೇಕಾಗುತ್ತದೆ. ಒಳ್ಳೆಯದನ್ನು ಸಾಧಿಸುವ ಛಲ ಬೇಕಾಗುತ್ತದೆ. ಅಂಥ ಛಲವಿಲ್ಲದವರನ್ನು ಕೂಡಲಸಂಗಮದೇವರು ಮೆಚ್ಚುವುದಿಲ್ಲ.

ಪರಧನದ ಆಸೆಯಿಂದಲೇ ಜಗತ್ತಿನಲ್ಲಿ ಅಪರಾಧಗಳು ಹೆಚ್ಚಾಗುತ್ತಿವೆ. ಪರಸತಿಯರ ಸಂಗದಿಂದಾಗಿ ಏಡ್ಸ್ ಎಂಬ ಮಾರಕ ರೋಗ ಮಾನವನ ಭವಿಷ್ಯಕ್ಕೇ ಸವಾಲೆಸೆಯುವ ಹಾಗೆ ವಿಶ್ವಾದ್ಯಂತ ಹಬ್ಬುತ್ತಿದೆ. ನೂರೆಂಟು ದೈವಗಳಿಂದಾಗಿ ಮಾನವ ಸಂಬಂಧಗಳ ಮಧ್ಯೆ ಬಿರುಕುಗಳು ಬಿಟ್ಟಿವೆ. ಸಕಲಜೀವಿಗಳ ಮಧ್ಯೆ ದೇವರ ಅಸ್ತಿತ್ವವನ್ನು ಕಾಣದೆ ಇರುವುದರಿಂದ ಎಲ್ಲೆಡೆ ಕ್ರೌರ್ಯ ಹೆಚ್ಚುತ್ತಿದೆ. ದೇವರಿಗೆ ಅರ್ಪಿಸಿ ಪಡೆಯುವುದೇ ಪಸಾದ. ಇಲ್ಲಿ ವಿನಯವೇ ಪಧಾನವಾಗಿರುತ್ತದೆ. ಎಲ್ಲವೂ ದೇವರ ಸೊತ್ತು ಎಂಬ ಭಾವ ಮೂಡುತ್ತದೆ. ಇಂಥ ಮೌಲ್ಯಗಳ ಸಾಧನೆಗಾಗಿ ಛಲವಂತರಾಗಬೇಕೆಂದು ಬಸವಣ್ಣನವರು ಹೇಳುತ್ತಾರೆ.

"ಅತ್ತಲಿತ್ತಲು ಹೋಗದಂತೆ ಹೆಳವನ ಮಾಡಯ್ಯಾ ತಂದೆ;
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ;
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ;
ನಿಮ್ಮ ಶರಣರ ಪಾದವಲ್ಲದೆ
ಅನ್ಯವಿಷಯಕ್ಕೆಳಸದಂತೆ ಇರಿಸು ಕೂಡಲಸಂಗಮದೇವಾ."

ಒಳ್ಳೆಯದನ್ನು ಸಾಧಿಸುವುದಕ್ಕಾಗಿ ಮಾನವ ಛಲವಂತನಾಗಬೇಕಾದರೆ ತನ್ನೊಳಗೇ ಅನೇಕ ವಿಧದ ನಿರ್ಬಂಧಗಳನ್ನು ಹೇರಿಕೊಳ್ಳಬೇಕಾಗುತ್ತದೆ. ಕೆಲವೊಂದು ಕಡೆ ಹೋಗದಂತೆ ನಾವು ಹೆಳವರಾಗಬೇಕಾಗುತ್ತದೆ. ಕೆಲವೊಂದನ್ನು ನೋಡದಂತೆ ಕುರುಡರಾಗಬೇಕಾಗುತ್ತದೆ. ಕೆಲವೊಂದನ್ನು ಕೇಳದಂತೆ ಕಿವುಡರಾಗಬೇಕಾಗುತ್ತದೆ. ಇಂಥ ಸಂಸ್ಕಾರವನ್ನು ಬೆಳೆಸಿಕೊಳ್ಳಲು ಒಳ್ಳೆಯವರ ಸಾನಿಧ್ಯ ಅವಶ್ಯವಾಗಿದೆ. ಒಳ್ಳೆಯವರೆಲ್ಲ ಶರಣರು. ಹೀಗೆ ನಾವು ಒಳ್ಳೆಯವರಾಗಲು ಬಸವಣ್ಣನವರು ದಾರಿ ತೋರಿಸುತ್ತಾರೆ.

ಬಸವಣ್ಣನವರು ನಮ್ಮನ್ನು ಹುಟ್ಟು, ಸಾವು, ರಜಸ್ಸು, ಎಂಜಲು ಮತ್ತು ಕುಲ ಸೂತಕಗಳಿಂದ ಮುಕ್ತಗೊಳಿಸಿ ಲೋಕದ ಜನರೊಂದಿಗೆ ಒಂದಾಗಿ ಬದುಕುವುದನ್ನು ಕಲಿಸಿದ್ದಾರೆ. ನಾವು ಒಳಗೂ ಹೊರಗೂ ಶುದ್ಧವಾಗಿರುವಂತೆ ನೋಡಿಕೊಳ್ಳುತ್ತಾರೆ.

"ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ;
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ;
ಕೂಡಲಸಂಗಮದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯಾ."

ಹೀಗೆ ಬಸವಣ್ಣನವರು ದೇವರಲ್ಲಿ ನಿವೇದನೆ ಮಾಡಿಕೊಳ್ಳುತ್ತಾರೆ. ನಾವೆಲ್ಲ ಸೃಷ್ಟಿಕರ್ತನ ಮನೆಯ ಮಕ್ಕಳಾಗಬೇಕಾದರೆ. ಆತ ಸೃಷ್ಟಿಸಿದ ಜಗತ್ತಿನ ಬಗ್ಗೆ ಸಮಭಾವದ ಕಾಳಜಿ ಇರಬೇಕಾಗುತ್ತದೆ.

"ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ.
ಒಮ್ಮನವಾದರೆ ಒಡನೆ ನುಡಿವನು; ಇಮ್ಮನವಾದರೆ ನುಡಿಯನು.
ಕಾಣಿಯ ಸೋಲ; ಅರ್ಧಗಾಣಿಯ ಗೆಲ್ಲ!
ಜಾಣ ನೋಡವ್ವಾ ನಮ್ಮ ಕೂಡಲಸಂಗಮದೇವ!"

ಕೂಡಲಸಂಗಮದೇವ ಲೋಕವ್ಯವಹಾರದಲ್ಲಿ ತೊಡಗಿ ವ್ಯಾಪಾರಕ್ಕೆ ಕುಳಿತಿದ್ದಾನೆ. ಆತ ಈ ವ್ಯಾಪಾರದಲ್ಲಿ ಒಂದು ಪೈಸೆಯಷ್ಟೂ ಕಡಿಮೆ ತೆಗೆದುಕೊಳ್ಳುವುದಿಲ್ಲ. ಅರ್ಧ ಪೈಸೆಯಷ್ಟೂ ಹೆಚ್ಚಿಗೆ ತೆಗೆದುಕೊಳ್ಳುವುದಿಲ್ಲ. ಪರಿಪೂರ್ಣವಾದ ಜೀವಜಾಲಸಮತೋಲನವನ್ನು ಕಾಪಾಡುವುದು ಈ ದೇವರ ವ್ಯಾಪಾರವಾಗಿದೆ! ಹೀಗೆ ಬಸವಣ್ಣನವರು ನಮಗೆ ಪರಿಸರ ಪಜ್ಞೆಯನ್ನು ಮೂಡಿಸುತ್ತಾರೆ. ಬಸವ ಧರ್ಮ ನಿಸರ್ಗ ಧರ್ಮವಾಗಿದೆ; ಜೀವಜಾಲ ಸಮತೋಲನದ ಧರ್ಮವಾಗಿದೆ; ಮಾನವ ವಿಮೋಚನೆಯ ಧರ್ಮವಾಗಿದೆ; ಸಮಾನತೆಯ ಧರ್ಮವಾಗಿದೆ, ಮಾನವ ಹಕ್ಕುಗಳ ಧರ್ಮವಾಗಿದೆ; ಮಹಿಳೆಯರು ಮತ್ತು ದಲಿತರ ಸಮಾನತೆಯನ್ನು ಸಾರುವ ಧರ್ಮವಾಗಿದೆ. ಇದನ್ನೆಲ್ಲ ಸಾಧಿಸಬೇಕಾದರೆ ಈ ಬದುಕು ಮನುಷ್ಯ ಕೇಂದೀತವಾಗಬಾರದು. ಹಾಗೆ ಆದರೆ ಅದು ಉಳ್ಳವರ ದುರಾಸೆ ಕೇಂದಿತ ವ್ಯವಸ್ಥೆಗೆ ನಾಂದಿ ಹಾಡುತ್ತದೆ. ಆದ್ದರಿಂದ ಬಸವಣ್ಣನವರು "ಸಕಲಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೆ ಕುಲಜರು" ಎಂದು ಹೇಳಿ ಜೀವಕೇಂದಿತ ವ್ಯವಸ್ಥೆಯನ್ನು ಬೆಂಬಲಿಸಿದ್ದಾರೆ. ಈಗ ಜಗತ್ತು ಜೀವಕೇಂದಿತವಾಗಿರಬೇಕು, ಮನುಷ್ಯ ಕೇಂದಿತವಾದರೆ ಸರ್ವನಾಶ ಎಂದು ಇಂದಿನ ಪರಿಸರ ವಿಜ್ಞಾನಿಗಳು ಎಚ್ಚರಿಸುತ್ತಿದ್ದಾರೆ. ಬಸವಣ್ಣನವರು ನಮಗೆ ಇಂಥ ಎಚ್ಚರಿಕೆಯನ್ನು 12ನೇ ಶತಮಾನದಲ್ಲೇ ಕೊಟ್ಟಿದ್ದಾರೆ.

ಮನುಷ್ಯರು ತಪ್ಪು ಮಾಡುವುದು ಸಹಜ. ಆದರೆ ತಿದ್ದಿಕೊಳ್ಳುವ ಮೂಲಕ ಆ ತಪ್ಪಿನಿಂದ ಹೊರಬರಬೇಕಾಗುತ್ತದೆ. "ಲಲಾಟದಲ್ಲಿ ವಿಭೂತಿ ಬರಲಿಕೆ ಪಾಪ ಪಲ್ಲಟವಾಗದೆ, ಕೂಡಲಸಂಗಮದೇವಾ" ಎಂದು ಬಸವಣ್ಣನವರು ಹೇಳುತ್ತಾರೆ. ಹೀಗೆ ನಮ್ಮಲ್ಲಿ ಧೈರ್ಯ ತುಂಬುತ್ತಾರೆ. "ಮುನ್ನ ಮಾಡಿದ ಪಾಪವೆಂತು ಹೋಹುದೆಂದು ಚಿಂತಿಸಬೇಡ" ಎಂದು ಅಭಯವಚನವನ್ನು ನೀಡುತ್ತಾರೆ. ವಿಭೂತಿಯು ದೇವರಿಗೆ ಶರಣಾಗತವಾಗುವುದರ ಸಂಕೇತವಾಗಿದೆ. ಕಾಮನೆಗಳಿಂದ ಮುಕ್ತವಾಗಿರುವುದರ ಸಂಕೇತವಾಗಿದೆ. ಎಲ್ಲವೂ ನಶ್ವರ, ನೂರೆಂಟು ಹೆಸರುಗಳಿಂದ ಕರೆಯಿಸಿಕೊಳ್ಳುವ ಈಶ್ವರನೊಬ್ಬನೇ ಶಾಶ್ವತ ಎಂಬುದನ್ನು ಸಾರುತ್ತದೆ.

ಅಂತರಂಗ ಆತ್ಮಶುದ್ಧಿ ಇಲ್ಲದೆ ನಾವು ಒಳ್ಳೆಯವರಾಗಲು ಸಾಧ್ಯವಿಲ್ಲ. ಬರಿ ತೋರಿಕೆಯ ಭಕ್ತಿಯಿಂದ ಯಾವ ಪಯೋಜನವೂ ಇಲ್ಲ.

"ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯಾ?
ಅಘೋರ ತಪವ ಮಾಡಿದೊಡೇನು?
ಅಂತರಂಗ ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯಾ
ಕೂಡಲಸಂಗಮದೇವ?"

ಎಂದು ಬಸವಣ್ಣನವರು ಪಶ್ನಿಸುವುದರ ಮೂಲಕ ಎಚ್ಚರಿಸುತ್ತಾರೆ. ನಮ್ಮೊಳಗೆ ಬದಲಾವಣೆಗಳಾಗದಿದ್ದರೆ ಹೊರಗೆ ಬದಲಾವಣೆಗಳಾಗುವುದು ಸಾಧ್ಯವಿಲ್ಲ ಎಂಬುದನ್ನು ಸೂಚಿಸುತ್ತಾರೆ.

"ಕಾಮವೇಕೊ ಲಿಂಗಪ್ರೇಮಿಯೆನಿಸುವಂಗೆ?
ಕ್ರೋಧವೇಕೊ ಶರಣವೇದ್ಯನೆನಿಸುವಂಗೆ?
ಲೋಭವೇಕೊ ಭಕ್ತಿಲಾಭವ ಬಯಸುವಂಗೆ?
ಮೋಹವೇಕೊ ಪ್ರಸಾದವೇದ್ಯನೆನಿಸುವಂಗೆ?
ಮದಮತ್ಸರವುಳ್ಳವಂಗೆ ಹೃದಯಶುದ್ಧವೆಲ್ಲಿಯದೋ?
ಹದುಳಿಗರಾದಲ್ಲಿಪ್ಪ ನಮ್ಮ ಕೂಡಲಸಂಗಮದೇವ."

ಕಾಮವನ್ನು ಲಿಂಗಪ್ರೇಮಿಯಾಗಿ ಜಯಿಸಬೇಕು. ಶರಣನಾಗಿ ಕ್ರೋಧವನ್ನು ಜಯಿಸಬೇಕು, ಭಕ್ತಿಭಾವ ತಾಳಿ ಲೋಭದಿಂದ ಮುಕ್ತರಾಗಬೇಕು. ಪ್ರಸಾದವನರಿತು ಮೋಹದಿಂದ ಹೊರಬರಬೇಕು. ಶುದ್ಧ ಹೃದಯದಿಂದ ಮದ, ಮತ್ಸರಗಳನ್ನು ಇಲ್ಲವಾಗಿಸಬೇಕು. ಹೀಗೆ ಸಾಧಿಸುವುದರ ಮೂಲಕ ನೆಮ್ಮದಿಯ ಬದುಕನ್ನು ಸಾಗಿಸುವವರ ಜೊತೆ ದೇವರು ಇರುವನು ಎಂದು ಬಸವಣ್ಣನವರು ಹೇಳಿದ್ದಾರೆ. "ನುಡಿಗೆ ತಕ್ಕ ನಡೆಯ ಕಂಡೊಡೆ ಕೂಡಲಸಂಗಮದೇವನೊಳಗಿರ್ಪನಯ್ಯಾ" ಎಂದು ಬಸವಣ್ಣನವರು ತಿಳಿಸಿದ್ದಾರೆ.

"ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ;
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ."

ನಾವು ನಮ್ಮ ತಪ್ಪನ್ನು ತಿದ್ದಿಕೊಳ್ಳದೆ ಸದಾ ಬೇರೆಯವರ ತಪ್ಪಿನ ಬಗ್ಗೆಯೆ ಮಾತನಾಡುತ್ತಿರುತ್ತೇವೆ. ಅನೇಕ ಶ್ರೀಮಂತರು ತಮ್ಮನ್ನು ತಾವು ತಿದ್ದಿಕೊಳ್ಳುವ ಬದಲು ಊರ ಪಂಚಾಯ್ತಿ ಮಾಡಲು ಹೋಗುತ್ತಾರೆ. ಊರಿಗೇ ಪಿಡುಗಾಗಿ ಬದುಕುತ್ತಾರೆ. ಎಲ್ಲರೂ ಒಳ್ಳೆಯವರಾದರೆ ಯಾರೂ ಯಾರಿಗೂ ಬುದ್ಧಿಹೇಳುವ ಪ್ರಸಂಗ ಬರುವುದಿಲ್ಲ. ಒಳ್ಳೆಯದನ್ನು ಹೇಳುವ ಪ್ರಸಂಗ ಬಂದಾಗ ಹೇಳುವವರು ಮೊದಲು ಒಳ್ಳೆಯವರಾಗಿರಬೇಕಾಗುತ್ತದೆ ಎಂಬುದನ್ನು ಬಸವಣ್ಣನವರು ಸೂಚಿಸಿದ್ದಾರೆ.

ಬಸವಣ್ಣವರು ವ್ಯಕ್ತಿ, ಸಮಾಜ, ಜೀವಜಗತ್ತು ಮತ್ತು ಅನಂತವಾದ ವಿಶ್ವವನ್ನು ನೋಡುವ ಕ್ರಮವನ್ನು ತಿಳಿಸಿಕೊಟ್ಟಿದ್ದಾರೆ. ಹೀಗೆ ನಾವು ನಾಲ್ಕು ಪ್ರಕಾರಗಳಲ್ಲಿ ನಮ್ಮನ್ನು ನಾವು ಗುರುತಿಸುತ್ತ ಸಾಗಬೇಕಾಗುತ್ತದೆ. ಆಗ ನಾವು ಯಾರಿಗೂ ಹೊರಗಿನವರಾಗುವುದಿಲ್ಲ; ಯಾರೂ ನಮಗೆ ಹೊರಗಿನವರಾಗುವುದಿಲ್ಲ.

"ಆತ್ಮಸ್ತುತಿ, ಪರನಿಂದೆಯ ಕೇಳಿಸದಿರಯ್ಯಾ, ನಿಮ್ಮ ಧರ್ಮ" ಎಂದು ಬಸವಣ್ಣನವರು ದೇವರಲ್ಲಿ ಬೇಡಿಕೊಳ್ಳುತ್ತಾರೆ. ಆತ್ಮವಿಮರ್ಶೆ ಮತ್ತು ಪರರಿಗೆ ತೋರುವ ಗೌರವಭಾವದಿಂದ ಮಾತ್ರ ಜಗತ್ತಿನಲ್ಲಿ ಶಾಂತಿ ನೆಲೆಸುವುದು. ಇಂಥ ಮನಸ್ಥಿತಿಯೊಂದಿಗೆ ಒಳ್ಳೆಯದನ್ನು ಸಾಧಿಸಬೇಕಾದರೆ ದಾಕ್ಷಿಣ್ಯಕ್ಕೆ ಒಳಗಾಗದೆ ನ್ಯಾಯನಿಷ್ಠುರಿಗಳಾಗಿರಬೇಕಾಗುತ್ತದೆ. ಒಳ್ಳೆಯದಕ್ಕಾಗಿ ಲೋಕವಿರೋಧವನ್ನೂ ಕಟ್ಟಿಕೊಳ್ಳಬೇಕಾಗುತ್ತದೆ. ನಮ್ಮ ಬದುಕಿನಲ್ಲಿ ಬದ್ಧತೆ ಇದ್ದರೆ ಇದನ್ನೆಲ್ಲ ಸಾಧಿಸಲು ಸಾಧ್ಯ ಎಂದು ಬಸವಣ್ಣನವರು ಸೂಚಿಸಿದ್ದಾರೆ.

"ನ್ಯಾಯ ನಿಷ್ಠುರಿ; ದಾಕ್ಷಿಣ್ಯಪರ ನಾನಲ್ಲ.
ಲೋಕವಿರೋಧಿ: ಶರಣನಾರಿಗಂಜುವವನಲ್ಲ.
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪೆನಾಗಿ."

ಬಸವಣ್ಣನವರು ಸದಾ ಬಡವರ ಪರವಾಗಿ ನಿಲ್ಲುತ್ತಾರೆ. ಜಗತ್ತಿನ ಬಡವರೆಲ್ಲ ಒಂದಾಗಿ ಹೊಸ ಬದುಕನ್ನು ಸಾಧಿಸಬಲ್ಲರು ಎಂಬುದರ ಮುನ್ಸೂಚನೆಯನ್ನು ಅವರು ನೀಡಿದ್ದಾರೆ.

"ವೇದ ಶಾಸ್ತ್ರ ಆಗಮಂಗಳನೋದಿದವರು ಹಿರಿಯರೆ?
ಕವಿ, ಗಮಕಿ, ವಾದಿ, ವಾಗ್ಮಿಗಳು ಹಿರಿಯರೆ?
ನಟಿನಿ, ಬಾಣ, ವಿಲಾಸಿ, ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ?
ಹಿರಿಯತನವಾವುದೆಂದಡೆ: ಗುಣಜ್ಞಾನ,
ಆಚಾರಧರ್ಮ; ಕೂಡಲಸಂಗನ ಶರಣರು ಸಾಧಿಸಿದ ಹಿರಿಯತನ."

ಹೀಗೆ ಬಸವಣ್ಣನವರು ಬಡವರಪರ ನಿಲ್ಲುತ್ತಾರೆ. ಬಡವರಿಗಾಗಿ ಹೊಸ ಧರ್ಮವನ್ನು ಸ್ಥಾಪಿಸುತ್ತಾರೆ. ಎಲ್ಲ ಕಾಯಕಜೀವಿಗಳು ಆತ್ಮಗೌರವ ಮತ್ತು ಗಣಪ್ರಜ್ಞೆಯೊಂದಿಗೆ ಒಂದಾಗಿ ಬದುಕುವಂತೆ ಮಾಡುತ್ತಾರೆ. ಬಡವರೆಂದರೆ ಬಸವಣ್ಣನವರಿಗೆ ಎಲ್ಲಿಲ್ಲದ ಪ್ರೀತಿ. ಅವರ ಹೃದಯ ಶ್ರೀಮಂತಿಕೆಯ ಮುಂದೆ ಎಲ್ಲವೂ ತೃಣಸಮಾನ ಅವರಿಗೆ. ಲೌಕಿಕವಾಗಿ ಬಡರಾದ ಶರಣರು ಅನುಭಾವದಲ್ಲಿ ಬಡತನವನ್ನೇ ಶ್ರೀಮಂತಗೊಳಿಸಿದಂಥವರು. ಬಡತನವನ್ನು ಆಹ್ವಾನಿಸುವಂಥವರು.

"ಮನೆ ನೋಡಾ ಬಡವರು; ಮನ ನೋಡಾ ಘನ.
ಸೋಂಕಿನಲ್ಲಿ ಶುಚಿ; ಸರ್ವಾಂಗ ಕಲಿಗಳು.
ಪಸರಕ್ಕನುವಿಲ್ಲ; ಬಂದ ತತ್ಕಾಲಕ್ಕೆ ಉಂಟು.
ಕೂಡಲಸಂಗನ ಶರಣರು ಸ್ವತಂತ್ರಧೀರರು."

ಕೂಡಲಸಂಗನ ಶರಣರು ವ್ಯಭಿಚಾರಿಗಳಲ್ಲ, ಮನಸ್ಸನ್ನು ಮತ್ತು ಶರೀರವನ್ನು ಹತೋಟಿಯಲ್ಲಿಟ್ಟುಕೊಂಡು ಬದುಕಿನಲ್ಲಿ ಸಾಧನೆ ಮಾಡಿದ ಕಲಿಗಳು. ಇವರು ಸಂಪತ್ತನ್ನು ಕೂಡಿಹಾಕುವವರಲ್ಲ. ಆದರೆ ಅವರ ಮನೆಗೆ ಬಂದ ಅತಿಥಿಗಳು ಸಂತೃಪ್ತಗೊಳ್ಳುವಷ್ಟು ಉಂಟು. ಅವರು ಸ್ವತಂತ್ರರೂ ಧೀರರೂ ಆಗಿದ್ದಾರೆ. ಇಂಥ ಮಾನವರನ್ನು ಸೃಷ್ಟಿಸುವುದೇ ಬಸವಧರ್ಮದ ಉದ್ದೇಶವಾಗಿದೆ.

1. ದೇವನೊಬ್ಬ ನಾಮ ಹಲವು.
2. ಸಂಗ್ರಹಬುದ್ಧಿಯಿಂದ ಬದುಕು ಅಸಹನೀಯವಾಗುತ್ತದೆ.
3. ಮಂಗಳಕರವಾದುದನ್ನು ಜಪಿಸಬೇಕು.
4. ಪಾಪದಿಂದ ಮುಕ್ತಿ ಪಡೆಯಲು ಪುಣ್ಯದ ದಾರಿ ಹಿಡಿಯಬೇಕು.
5. ನುಡಿದಂತೆ ನಡೆಯಬೇಕು.
6. ಅಹಂಕಾರದಿಂದ ಅಧೋಗತಿ.
7. ದಯೆಯಿಂದ ಲೋಕ ರಕ್ಷಣೆ.
8. ಭೇದಭಾವದಿಂದ ದುರ್ಗತಿ.
9. ಕಳಬೇಡ.
10. ಕೊಲಬೇಡ.
11. ಹುಸಿಯ ನುಡಿಯಬೇಡ.
12. ಮುನಿಯಬೇಡ.
13. ಅನ್ಯರಿಗೆ ಅಸಹ್ಯ ಪಡಬೇಡ.
14. ತನ್ನ ಬಣ್ಣಿಸಬೇಡ.
15. ಪ್ರತಿಯಾಗಿ ಹಳಿಯಬೇಡ.
16. ಮಹಿಳೆ ನಮ್ಮ ಸಮಾನ.
17. ದಲಿತ ನಮ್ಮ ಸಮಾನ.
18. ಬಡವರು ನಮ್ಮ ಸಮಾನ.
19. ಮಾನವ ಪವಿತ್ರನಾಗಿರಬೇಕು.
20. ಕಾಯಕ ದಾಸೋಹಿಯಾಗಿರಬೇಕು.

**ಬಸವಣ್ಣನವರ ಈ ವಿಶ್ವಸಂದೇಶಗಳನ್ನು ನಮ್ಮ ಜೀವನದಲ್ಲಿ ಪಾಲಿಸಿದರೆ ವಿಶ್ವಮಾನವರಾಗುವೆವು.**

❑ **ರಂಜಾನ್ ದರ್ಗಾ**

# ಜನಕಪುರಿ ಕನ್ನಡ ಕೂಟದ ವಾರ್ಷಿಕೋತ್ಸವ ಹಾಗೂ ವೈವಿಧ್ಯಮಯ ಕಾರ್ಯಕ್ರಮಗಳು



ಭಾನುವಾರ 14ರ ಏಪ್ರಿಲ್ ಸಂಜೆ ಜನಕಪುರಿ ಕನ್ನಡ ಕೂಟದ ವಾರ್ಷಿಕೋತ್ಸವ, ಮಹಿಳಾ ಮತ್ತು ಮಕ್ಕಳ ದಿನಾಚರಣೆ, ಕನ್ನಡ ಕೂಟ ರತ್ನ ಪ್ರಶಸ್ತಿ ಪುರಸ್ಕಾರ ಕಾರ್ಯಕ್ರಮಗಳನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಡಾ. ಪುರುಷೋತ್ತಮ ಬಿಳಿಮಲೆ, ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಉಷಾ ಭರತಾದ್ರಿ, ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ ಮತ್ತು ಜನಕಪುರಿ ಮಹಿಳಾ ಮಂಡಳಿಯ ಅಧ್ಯಕ್ಷೆಯಾದ ಶ್ರೀಮತಿ ಸವಿತಾ ಇನಾಂದಾರ್ ಅವರು ಉಪಸ್ಥಿತರಿದ್ದರು. ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ ಶ್ರೀ ಎಸ್.ಎಲ್.ಭಂಡಾರಕರ್ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಶ್ರೀಯುತ ಬಸವರಾಜ್ ಅವರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀಮತಿ ಲಾವಣ್ಯ ಬಸವರಾಜ್ ಗಣಪತಿಯನ್ನು ಸುತ್ತಿಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀಯುತ ಸಂಜೀವ ದೇಶಪಾಂಡೆ ಅತಿಥಿಗಳಿಗೆ ಹೂಗುಚ್ಛ ನೀಡಿ ಸ್ವಾಗತಿಸಿದರು. ಈ ಬಾರಿ 2012–13ನೇ ಸಾಲಿನ ಕನ್ನಡ ಕೂಟರತ್ನ ಪ್ರಶಸ್ತಿ ಪುರಸ್ಕಾರವನ್ನು ಶ್ರೀಯುತ ಅಶೋಕ ಹಣಮಸಾಗರ ಹಾಗೂ ಡಾ.ಬಿ.ಟಿ.ಚಿದಾನಂದ ಮೂರ್ತಿ ಅವರಿಗೆ ನೀಡಲಾಯಿತು. ಇಬ್ಬರೂ ಕಳೆದ 30 ವರ್ಷಗಳಿಂದಲೂ ಜನಕಪುರಿ ಕನ್ನಡ ಕೂಟಕ್ಕೆ ಗಣನೀಯ ಸೇವೆ ಸಲ್ಲಿಸಿದ್ದಾರೆ. ಡಾ.ರೂಪಶ್ರೀ ಅಶೋಕ್ ಹಾಗೂ ಲಾವಣ್ಯ ಬಸವರಾಜ ಪ್ರಶಸ್ತಿ ಪುರಸ್ಕೃತರ ಕುರಿತು ಕಿರು ಪರಿಚಯ ಹಾಗೂ ಪ್ರಶಸ್ತಿ ಪತ್ರವನ್ನು ಮಂಡಿಸಿದರು.

ಮುಖ್ಯ ಅತಿಥಿಗಳಾದ ಡಾ.ಪುರುಷೋತ್ತಮ ಬಿಳಿಮಲೆ ಹಾಗೂ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಉಷಾ ಭರತಾದ್ರಿ, ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ ಕೂಟರತ್ನ ಪ್ರಶಸ್ತಿ ಪಡೆದ ಶ್ರೀ. ಅಶೋಕ ಹಣಮಸಾಗರ ಹಾಗೂ ಡಾ.ಬಿ.ಟಿ.ಚಿದಾನಂದ ಮೂರ್ತಿ ಅವರಿಗೆ ಶಾಲು ಹೊದೆಸಿ, ಮೈಸೂರು ಪೇಟ ತೊಡಿಸಿ ಫಲತಾಂಬೂಲಗಳ ಸಹಿತ ಗೌರವಿಸಿ ಸನ್ಮಾನಿಸಿದರು. ದೆಹಲಿ ಕರ್ನಾಟಕ ಸಂಘದ ಪರವಾಗಿ ಪ್ರಧಾನ ಕಾರ್ಯದರ್ಶಿ ಸಿ.ಎಂ.ನಾಗರಾಜ್ ಪುಷ್ಪಗುಚ್ಛ ನೀಡಿ ಗೌರವಿಸಿದರು. ನಂತರ ಪ್ರಶಸ್ತಿ ಪುರಸ್ಕೃತರಾದ ಅಶೋಕ ಹಣಮಸಾಗರ ಹಾಗೂ ಚಿದಾನಂದ ಮೂರ್ತಿಯವರು ಹಿತವಚನಗಳನ್ನು ನುಡಿದರು.

ನಂತರ ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಬಿಳಿಮಲೆಯವರು ಮನ ಮುಟ್ಟುವಂತೆ ಮಾತನಾಡಿದರು. ಭಾಷೆಯ ಉಳಿವು ಅಳಿವಿನ ಸಂಗತಿಯ ಬಗ್ಗೆ ಮಾತನಾಡುತ್ತ ಆಧುನಿಕ ಪ್ರಪಂಚದಲ್ಲಿ ಇಂಗ್ಲಿಷ್‌ಗೆ ಪ್ರಾಧಾನ್ಯತೆ ಹೆಚ್ಚಾಗಿದ್ದು ಕನ್ನಡ ಅಧೋಗತಿಯ ಕಡೆಗೆ ವಾಲುತ್ತಿದೆ. ಅತೀ ಪ್ರಸಿದ್ಧ ಪ್ರಾಚೀನ ಭಾಷೆಯಾದ ಲ್ಯಾಟಿನ್ ಮತ್ತು ಗ್ರೀಸ್ ಭಾಷೆಯೇ ನಶಿಸಿಹೋಗುತ್ತಿರುವ ಭಾಷೆಯ ಸಾಲಿನಲ್ಲಿರುವಾಗ ಇಂಗ್ಲೀಷ್ ಭಾಷೆಯೂ ಸಹ ಮುಂದೆ ಒಮ್ಮೆ ಈ ಸಾಲಿನಲ್ಲಿ ಬರುತ್ತದೆ. ಆಗ ನಮಗೆಲ್ಲ ನಮ್ಮ ಮಾತೃ ಭಾಷೆಯೇ ಕೈ ಹಿಡಿಯುವುದು ಎಂದು ಹೇಳುತ್ತಾ ಕನ್ನಡ ಪ್ರಾಧಾನ್ಯತೆ ಪಂಪ, ಕುಮಾರವ್ಯಾಸ, ನೃಪತುಂಗರ ಕನ್ನಡದ ಬಗ್ಗೆ ಹೇಳಿರುವುದನ್ನು ನೆನೆಯುತ್ತಾ ಭಾಷಣ ಮುಗಿಸಿದರು. ನಂತರ ಮಾತನಾಡಿದ ಶ್ರೀಮತಿ ಉಷಾ ಭರತಾದ್ರಿಯವರು ಜನಕಪುರಿ ಕನ್ನಡ ಕೂಟ ಮತ್ತು ದೆಹಲಿ ಕರ್ನಾಟಕ ಸಂಘಕ್ಕಿರುವ ಅವಿನಾಭಾವ ಸಂಬಂಧಗಳನ್ನು ನೆನೆಯುತ್ತಾ ಜನಕಪುರಿಯ ಕನ್ನಡ ಕೂಟದವರು ಸಕ್ರಿಯವಾಗಿ ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗವಹಿಸಿ ಕನ್ನಡ ಸಂಘದ ಹೃದಯೋಪಾದಿಯಲ್ಲಿರುವುದಾಗಿ ಹೇಳಿದರು. ನಂತರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಜನಕಪುರಿ ಕನ್ನಡ ಕೂಟದ ಅಧ್ಯಕ್ಷ ಎಸ್.ಎಲ್.ಭಂಡಾರಕರ್ ಕನ್ನಡ ಕೂಟದ ವಾರ್ಷಿಕ ವಿವರಣೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಕನ್ನಡ ಕೂಟ ಹಾಗೂ ಕೂಟ ರತ್ನ ಬೆಳೆದು ಬಂದ ದಾರಿಯನ್ನು ತಮ್ಮ ಅನುಭವಗಳ ಸಂಮಿಶ್ರದೊಂದಿಗೆ ವಿವರಿಸಿದರು. ಡಾ.ಅಶೋಕ ಈಟಿ ವಂದಿಸಿದರು ಹಾಗೂ ಶ್ರೀ ಬಸವರಾಜ ಕಾರ್ಯಕ್ರಮವನ್ನು ನಿರೂಪಿಸಿದರು.

ತದನಂತರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಜನಕಪುರಿ ಕನ್ನಡ ಕೂಟದ ಮಹಿಳಾಮಣಿಗಳು ವೈವಿಧ್ಯಮಯ ಕಾರ್ಯಕ್ರಮಗಳಿಂದ ಮನಸೂರೆಗೊಂಡರು. ಮಹಿಳಾ ಮಂಡಳಿಯ ಅಧ್ಯಕ್ಷೆ ಸವಿತಾ ಇನಾಂದಾರ್ ರವರ ಸಾರಥ್ಯದಲ್ಲಿ ಅಚ್ಚುಕಟ್ಟಾಗಿ ಮೂಡಿ ಬಂದಿತು. ಕಾರ್ಯಕ್ರಮ ಮನುಶ್ರೀಯೆಂಬ ಪುಟಾಣಿಯ ಪ್ರಾರ್ಥನೆಯೊಂದಿಗೆ ಆರಂಭಗೊಂಡಿತು. ನಿಸರ್ಗ ಹಾಗೂ ನಿತ್ಯಾಳ ಹಾಡು, ವೈಷ್ಣವಿ ಬಸವರಾಜಳ ಭರತನಾಟ್ಯ ಅಮೋಘವಾಗಿತ್ತು. ಕನ್ನಡದ ಮೈಕೆಲ್ ಜಾಕ್ಸನ್ ಸಾಯಿ ಅಮರ್ತ ಮಾಡಿದ ನೃತ್ಯ ರಂಜನೀಯವಾಗಿತ್ತು. ಮನುಶ್ರೀ ತನ್ನ ಪುಟ್ಟ ಪುಟ್ಟ ಹೆಜ್ಜೆಗಳಿಂದ ರಾಧೆಯ ನೃತ್ಯ ಸೊಗಸಾಗಿತ್ತು. ಶ್ರೀಮತಿ ವೀಣಾ ಜಗದೀಶ್ ತನ್ನ ಇಬ್ಬರು ಮಕ್ಕಳೊಂದಿಗೆ ಸ್ವರಚಿತ ಕವನಕ್ಕೆ ಸಂಗೀತ ಸಂಯೋಜಿಸಿ ಹಾಡಿದರು. ಮುದ್ದು ಪುಟಾಣಿ ವಾಸುಕಿ ತನ್ನ ತೊದಲು ನುಡಿಯಲ್ಲಿ ಪ್ರಾರ್ಥನೆ ಹಾಡಿದಳು.

ಜನಕಪುರಿ ಮಹಿಳಾ ಮಂಡಳಿಯ ಸದಸ್ಯೆಯರು ಸಮೂಹ ಗಾನ ಹಾಗೂ 'ನಿಂಬಿಯಾ ಬನಾದ ಮ್ಯಾಗಿನ' ಎಂಬ ಜನಪದ ಗೀತೆಗೆ ನೃತ್ಯ ಪ್ರದರ್ಶನ ನೀಡಿದರು. ತಿಪಟೂರಿನಿಂದ ಆಗಮಿಸಿದ್ದ ವೇದಾ ರಮೇಶ್ ತಂಡದವರು ನೃತ್ಯರೂಪಕವನ್ನು ಪ್ರದರ್ಶಿಸಿದರು. ಅದೇ ದಿನ ಸಂಗೀತಲೋಕದಿಂದ ಮರೆಯಾದ, ತಮ್ಮ ಸ್ವರಮಾಧುರ್ಯದಿಂದ ಕನ್ನಡಿಗರ ಮನಗೆದ್ದ ಮಹಾನ್ ಚೇತನ ಪಿ.ಬಿ.ಶ್ರೀನಿವಾಸ್‌ವರಿಗೆ ಮೌನಾಚರಣೆಯನ್ನು ಆಚರಿಸುವುದರ ಮೂಲಕ ಅವರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು. ಕಾರ್ಯಕ್ರಮವನ್ನು ಶ್ರೀಮತಿ ಸವಿತಾ ಇನಾಂದಾರ್ ಹಾಗೂ ಮಹಿಳಾ ಮಂಡಳಿಯ ಕಾರ್ಯದರ್ಶಿ ಮೋಹಿನಿ ರೈ ಅವರು ಜೊತೆಗೂಡಿ ನಡೆಸಿದರು.

**❑ ಲಾವಣ್ಯ ಬಸವರಾಜ್**


## ಯಾಂತ್ರಿಕತೆ

ಯೋಚಿಸುತ್ತಿದ್ದೆ ಅಂದೊಂದು ದಿನ
ಕಾಲ ಕಳೆಯುವುದು ಹೇಗೆಂದು
ಯೋಚಿಸುತ್ತಿರುವೆ ಈ ದಿನ
ಕಾಲ ಕಳೆಯಲು ಸಮಯವೆಲ್ಲೆಂದು

ಎನಿಸುವುದು ಒಮ್ಮೊಮ್ಮೆ
ಸಮಯದ ಪರಿವಿಲ್ಲದೆ
ಓದಿನಲ್ಲಿ ಕಳೆಯುತ್ತಿದ್ದ ಆ ದಿನಗಳೆಲ್ಲಿ
ಓದಲೂ ಬಿಡುವಿಲ್ಲದಂತೆ ದಿನನಿತ್ಯದ ಜಂಜಾಟ
ಮುಗಿಸಲು ಓಡುತ್ತಿರುವ ಈ ಯಾಂತ್ರಿಕತೆಯಲ್ಲಿ
ಯಾಂತ್ರಿಕತೆಯ ಮಾಂತ್ರಿಕ ಬದುಕಿನಲಿ ಸಿಲುಕಿ
ಮನುಷ್ಯನಲ್ಲಿ ಯಂತ್ರವಾದಾನೋ ಎಂಬ ಭಯ
ಯಂತ್ರಕ್ಕೆಲ್ಲಿ ಗೊತ್ತು,
ಸ್ನೇಹ, ಪ್ರೀತಿ, ಮಮತೆ
ನನ್ನವರು ತನ್ನವರು ಎಂದು
ಪ್ರೀತಿಯ ಬಂಧನದಲಿ ಬಂಧಿಸುತ್ತಿದ್ದ ಆ ದಿನಗಳಲ್ಲಿ
ನನ್ನವರು ತನ್ನವರು ಬಂದರೂ ಬೆರೆಯಲಾರದ
ಯಾಂತ್ರಿಕತೆಯ ಈ ಬದುಕಿನಲ್ಲಿ.

**❑ ಸು.ಚ.ಹೇಮಲತ**

Delhi Karnataka Sangha's Abhimatha Monthly,
May - 2013, Price Rs.1/-  RNI Regn. No. 53405/91, DL-SW-1/4016/13-15
Printout Date : May 8th / 9th, Postal Date :10th / 11th, Total Pages-20



Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press
C-95, Okhla Industrial Area, Phase-I, New Delhi-110020, Tel: 40520770